

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಸೆಪ್ಟೆಂಬರ್ 21 ಗುರುವಾರ 2023

ಸಂಪುಟ: 44 | ಸಂಚಿಕೆ: 156 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





ಕಾವೇರಿ ನೀರು ಹಂಚಿಕೆ ವಿವಾದ

'ಸುಪ್ರೀಂ' ಮೊರೆ; ರಾಜ್ಯ ನಿರ್ಧಾರ

- ದೆಹಲಿಯಲ್ಲಿ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ರಾಜ್ಯದ ಕೇಂದ್ರ ಸಚಿವರು, ಸಂಸದರು ಹಾಗೂ ತಜ್ಞರ ಸಭೆಯಲ್ಲಿ ನಿರ್ಧಾರ
- ಕಾವೇರಿ ನೀರು ನಿರ್ವಹಣಾ ಸಮಿತಿಯ ಆದೇಶಕ್ಕೆ ತಡೆಯಾಜ್ಞೆ ಕೋರಿ ಇಂದು ಸುಪ್ರೀಂಕೋರ್ಟಿಗೆ ಅರ್ಜಿ ಸಲ್ಲಿಕೆ
- ವಿವಾದ ಬಗೆಹರಿಸಲು ಸಂಕಷ್ಟ ಸೂತ್ರ ರೂಪಿಸಲು ಮಧ್ಯ ಪ್ರವೇಶಕ್ಕೆ ಪ್ರಧಾನಿ ಮೋದಿ ಅವರಿಗೆ ಮನವಿ ಮಾಡಲು ತೀರ್ಮಾನ

ನವದೆಹಲಿ: ಕಾವೇರಿ ಜಲ ವಿವಾದ ಬಗೆಹರಿಸಲು ಮಧ್ಯಪ್ರವೇಶ ಮಾಡುವಂತೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಆಗ್ರಹಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾವೇರಿ ನೀರು ನಿರ್ವಹಣಾ ಸಮಿತಿಯ (ಸಿಡಬ್ಲ್ಯುಎಂಎ) ಆದೇಶಕ್ಕೆ ತಡೆಯಾಜ್ಞೆ ಕೋರಿ ಸುಪ್ರೀಂಕೋರ್ಟಿಗೆ ನಾಳೆ ಅರ್ಜಿ ಸಲ್ಲಿಸುವುದಾಗಿ ತಿಳಿಸಿದ್ದಾರೆ.

ಜಲ ಸಂಕಷ್ಟಕ್ಕೆ ಪರಿಹಾರ ಸೂತ್ರ ಕಂಡು ಹಿಡಿಯಲು ಕಳೆದ ಎರಡು ದಿನಗಳಿಂದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ದೆಹಲಿಯಲ್ಲಿ ಬಿಡಾರ ಹೂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಕೇಂದ್ರದಲ್ಲಿ ರಾಜ್ಯ ಪ್ರತಿನಿಧಿಸುವ ಸಚಿವರು, ಸಂಸದರು ಹಾಗೂ ಕಾನೂನು ಪರಿಣಿತರೊಂದಿಗೆ ಸುದೀರ್ಘ ಚರ್ಚೆ ನಡೆಸಿದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಕಾವೇರಿ ಸಂಕಷ್ಟ ಸೂತ್ರ ಇಲ್ಲದಿರುವುದು ಸಮಸ್ಯೆಗೆ ▶ 6ನೇ ಪುಟಕ್ಕೆ



ಕಾವೇರಿ ಜಲವಿವಾದ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಬುಧವಾರ ನವದೆಹಲಿಯ ಖಾಸಗಿ ಹೋಟೇಲ್‌ನಲ್ಲಿ ನಡೆದ ರಾಜ್ಯದ ಕೇಂದ್ರ ಸಚಿವರು, ಸಂಸದರು, ಕಾನೂನು ತಜ್ಞರ ಸಭೆಯಲ್ಲಿ (ಎಡದಿಂದ) ಕೇಂದ್ರ ಸಚಿವರಾದ ಭಗವಂತ್ ಖೂಬಾ, ಪ್ರಹ್ಲಾದ್ ಜೋಷಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ಎ.ನಾರಾಯಣಸ್ವಾಮಿ, ರಾಜ್ಯದ ಸಚಿವ ಹೆಚ್.ಕೆ.ಪಾಟೀಲ್, ನವದೆಹಲಿಯ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ ಉಪಸ್ಥಿತರಿದ್ದಾರೆ.



ಕಾವೇರಿ ವಿಷಯದಲ್ಲಿ ರಾಜ್ಯದ ಬೆನ್ನಿಗೆ ನಮ್ಮ ಸಂಸದರಿದ್ದಾರೆ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಧನ್ಯವಾದ...

ಬೆಂಗಳೂರು, ಸೆ.20(ಕೆಎಂಶಿ)– ರಾಜಕೀಯ ಭಿನ್ನಾಭಿಪ್ರಾಯಗಳು ಏನೇ ಇದ್ದರೂ ಕಾವೇರಿ ವಿಚಾರದಲ್ಲಿ ಎಲ್ಲರೂ ಒಗ್ಗಟ್ಟಿನಿಂದ ರಾಜ್ಯದ ಪರ ನಿಲ್ಲುವುದಾಗಿ ಸರ್ವಪಕ್ಷಗಳ ಸಂಸದರು ಮಾತು ಕೊಟ್ಟಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ದೆಹಲಿಯ ತಾಜ್ ಹೋಟೆಲ್‌ನಲ್ಲಿ ಸರ್ವಪಕ್ಷ ಸಂಸದರ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾವೇರಿ ವಿಚಾರವಾಗಿ ಸಂಸತ್ ಅಧಿವೇಶನದಲ್ಲಿ ದನಿ ಎತ್ತುವುದಾಗಿ ಎಲ್ಲಾ ಸಂಸದರು ಭರವಸೆ ನೀಡಿದ್ದಾರೆ ಎಂದರು.


ನಿನ್ನೆ ತಡರಾತ್ರಿ ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ ಅವರನ್ನು ಮುಖ್ಯಮಂತ್ರಿಗಳು ಹಾಗೂ ನಾನು ಭೇಟಿಯಾಗಿ ಚರ್ಚೆ ನಡೆಸಿದ್ದೇವೆ. ಅವರು ಕೇಂದ್ರ ಜಲಶಕ್ತಿ ಸಚಿವರಾದ ಗಜೇಂದ್ರ ಸಿಂಗ್ ಶೆಖಾವತ್ ಅವರಿಗೆ ಪರಿಸ್ಥಿತಿ ವಿವರಿಸುವುದಾಗಿ ಭರವಸೆ ನೀಡಿದ್ದಾರೆ ಎಂದರು. ಮಳೆ ಕಡಿಮೆ ಬಿದ್ದಾಗ ನೀರನ್ನು ಎಷ್ಟು ಹಂಚಿಕೆ ಮಾಡಬೇಕು ಎನ್ನುವ ಬಗ್ಗೆ ಕಾವೇರಿ ನೀರು ನಿರ್ವಹಣಾ ಸಮಿತಿ ಸರಿಯಾದ ಸೂತ್ರ ಹಂಚಿಕೆ ಮಾಡಿಲ್ಲ. 5 ಸಾವಿರ ಕ್ಯುಸೆಕ್ ನೀರು ಹರಿಸಿ ಎಂದು ಹೇಳಿರುವುದು ಅವೈಜ್ಞಾನಿಕ ಎಂದು ಹೇಳಿದರು.

ರಾಜ್ಯದಲ್ಲಿ ಕಾವೇರಿ ನೀರಿನ ಲಭ್ಯತೆ ಅತ್ಯಂತ ಕಡಿಮೆ ಇದ್ದು, ಇದನ್ನು ಸುಪ್ರೀಂಕೋರ್ಟಿಗೆ ಮನವರಿಕೆ ಮಾಡುತ್ತೇವೆ. ಅಲ್ಲಿ ನಮಗೆ ನ್ಯಾಯ ಸಿಗುವ ಭರವಸೆಯಿದೆ. ▶ 6ನೇ ಪುಟಕ್ಕೆ

ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶ ಚಾಚೂ ತಪ್ಪದೆ ಪಾಲನೆ!

ತಮಿಳುನಾಡಿಗೆ ಹರಿಯುತ್ತಿದೆ 4600 ಕ್ಯುಸೆಕ್ ನೀರು

- ಕರ್ನಾಟಕಕ್ಕೆ ಈ ವರ್ಷ ಬೇಕಿದೆ 106 ಟಿಎಂಸಿ ನೀರು
- ಜಲಾಶಯದಲ್ಲಿರುವುದು 53 ಟಿಎಂಸಿ ಮಾತ್ರ
- ತಮಿಳುನಾಡಿಗೆ ಈ ತನಕ 39.8 ಟಿಎಂಸಿ ನೀರು ಹರಿದಿದೆ



ಮೈಸೂರು, ಸೆ.20(ಬಿಎಲ್‌ಯು)– ನಮ್ಮ ಜಲಾಶಯಗಳಲ್ಲೇ ನೀರಿಲ್ಲ. ನಾವು ತಮಿಳುನಾಡಿಗೆ ನೀರು ಬಿಡುವುದಿಲ್ಲ ಎಂದು ಹೇಳುತ್ತಲೇ ಇರುವ ರಾಜ್ಯ ಸರ್ಕಾರ, ಆದರೆ ತಮಿಳುನಾಡಿಗೆ ಕಾವೇರಿ ಜಲಾನಯನ ಪ್ರದೇಶದಿಂದ ಪ್ರತಿ ದಿನ 4600 ಕ್ಯುಸೆಕ್ ನೀರು ಬಿಡುತ್ತಿದ್ದು, ಈ ಮೂಲಕ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶವನ್ನು ಚಾಚೂ ತಪ್ಪದೆ ಪಾಲಿಸುತ್ತಿದೆ. ತಮಿಳುನಾಡಿಗೆ ಪ್ರತಿ ದಿನ ನೀರು ಬಿಡುತ್ತಿರುವ ಕಾರಣ ಮಂಡ್ಯದ ಕೆಆರ್‌ಎಸ್ ಹಾಗೂ ಮೈಸೂರಿನ ಕಬಿನಿ ಜಲಾಶಯದಲ್ಲಿ ದಿನ ಕಳೆದಂತೆ ನೀರಿನ ಪ್ರಮಾಣ ಕುಸಿಯುತ್ತಿದೆ. ನಮ್ಮ ಜಲಾಶಯದಲ್ಲಿ ನೀರಿಲ್ಲದ ಕಾರಣ ತಮಿಳುನಾಡಿಗೆ ನೀರು ಬಿಡುವುದಿಲ್ಲ ಎಂದು ಸರ್ಕಾರ ಹೇಳುತ್ತಿದೆ. ಆದರೆ ಈ ದಿನದ ತನಕ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶವನ್ನು ಚಾಚೂ ತಪ್ಪದೆ ಪಾಲಿಸುತ್ತಿರುವ ಸರ್ಕಾರ, ಪ್ರತಿದಿನ ತಮಿಳುನಾಡಿಗೆ ನೀರು ಹರಿಸುತ್ತಿದೆ.

ಕುಡಿಯುವ ನೀರಿಗೆ 33 ಟಿಎಂಸಿ, ಬೆಳೆಗೆ 70 ಟಿಎಂಸಿ, ಕೈಗಾರಿಕೆಗಳಿಗೆ 3 ಟಿಎಂಸಿ ಸೇರಿದಂತೆ 106 ಟಿಎಂಸಿ ನೀರಿನ ಅವಶ್ಯಕತೆ ಇದೆ. ಆದರೆ ಕಾವೇರಿ ಜಲಾನಯನ ಪ್ರದೇಶದ ನಾಲ್ಕು ಅಣೆಕಟ್ಟುಗಳಲ್ಲಿ 53 ಟಿಎಂಸಿ ನೀರು ಮಾತ್ರ ಇದೆ. ಆದರೂ ರಾಜ್ಯ ಸರ್ಕಾರ ತಮಿಳುನಾಡಿಗೆ ಪ್ರತಿ ದಿನ ನೀರು ಬಿಡುತ್ತಲೇ ಇದೆ. ▶ 6ನೇ ಪುಟಕ್ಕೆ

ಲೋಕಸಭೆಯಲ್ಲಿ ಐತಿಹಾಸಿಕ ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರ



ಇಂದು ರಾಜ್ಯಸಭೆಯಲ್ಲಿ ಮಂಡನೆ ಸಾಧ್ಯತೆ


ನವದೆಹಲಿ, ಸೆ.20– ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದು ಭಾಗದಷ್ಟು ಸ್ಥಾನಗಳನ್ನು ಮೀಸಲಿಡುವ ಬಹು ನಿರೀಕ್ಷಿತ ನಾರಿ ಶಕ್ತಿ ವಂದನ್ ವಿಧೇಯಕ (ಮಹಿಳಾ ಮೀಸಲಾತಿ ಮಸೂದೆ)ವನ್ನು ಬುಧವಾರ ಲೋಕಸಭೆಯಲ್ಲಿ ಅಂಗೀಕರಿಸಲಾಗಿದೆ.

ಮಂಗಳವಾರ ನೂತನ ಸಂಸತ್ ಭವನದಲ್ಲಿ ಕಾನೂನು ಸಚಿವ ಅರ್ಜುನ್ ರಾಮ್ ಮೇಘ್ವಾಲ್ ಅವರು ಮಹಿಳೆಯರಿಗೆ ಶೇ. 33ರಷ್ಟು ಮೀಸಲಾತಿ ನೀಡುವ ಐತಿಹಾಸಿಕ ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸಿದ್ದರು. ಸುಮಾರು 8 ಗಂಟೆಗಳ ಚರ್ಚೆಯ ಬಳಿಕ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಇಂದು ನಾರಿ ಶಕ್ತಿ ವಂದನ್ ವಿಧೇಯಕವನ್ನು ಮತಕ್ಕೆ ಹಾಕಿದರು. ಬಹುತೇಕ ಪಕ್ಷಗಳು ಮಹಿಳಾ ಮೀಸಲಾತಿ ಮಸೂದೆಯನ್ನು ಬೆಂಬಲಿಸಿದ್ದು, ವಿಧೇಯಕದ ಪರವಾಗಿ 454 ಸಂಸದರು ಮತ ಚಲಾಯಿಸಿದರೆ, ಇಬ್ಬರು ಸಂಸದರು ಮಾತ್ರ ಈ ಮಸೂದೆಯ ವಿರುದ್ಧವಾಗಿ ಮತ ಚಲಾಯಿಸಿದ್ದಾರೆ. ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರಕ್ಕೆ 213 ಸದಸ್ಯರ ಬೆಂಬಲ ಅಗತ್ಯವಿತ್ತು.

ಲೋಕಸಭೆಯಲ್ಲಿ ಅಂಗೀಕಾರಗೊಂಡಿರುವ ನಾರಿ ಶಕ್ತಿ ವಂದನ್ ವಿಧೇಯಕವನ್ನು ಕೇಂದ್ರ ಸರ್ಕಾರ ನಾಳೆ ರಾಜ್ಯಸಭೆಯಲ್ಲಿ ಮಂಡಿಸುವ ಸಾಧ್ಯತೆ ಇದೆ.


ಈ ಮಸೂದೆ ಮೂಲಕ ಸಂವಿಧಾನದ 330 ಮತ್ತು 332ನೇ ವಿಧಿಗಳಿಗೆ ತಿದ್ದುಪಡಿ ತರಲಾಗುತ್ತಿದ್ದು, ಈ ಮೂಲಕ ಲೋಕಸಭೆಯ 543 ಸ್ಥಾನಗಳ ಪೈಕಿ 181 ಸ್ಥಾನಗಳನ್ನು ಮತ್ತು ರಾಜ್ಯ ವಿಧಾನಸಭೆಗಳಲ್ಲಿ 4,109 ಸ್ಥಾನಗಳ ಪೈಕಿ 1,370 ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲಾಗುತ್ತದೆ.





ಇಂದು ಕೆ.ಬಿ.ಗಣಪತಿ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ

ಪೇಪರ್ ಸುಬ್ಬಣ್ಣರಿಗೂ ಗೌರವ ಸಮರ್ಪಣೆ



ಕೆ.ಬಿ. ಗಣಪತಿ

ಮೈಸೂರು, ಸೆ.20 (ಆರ್‌ಕೆ) – ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ನಾಳೆ(ಸೆ.21) ಬೆಳಗ್ಗೆ 11 ಗಂಟೆಗೆ ಪತ್ರಕರ್ತರ ಭವನದಲ್ಲಿ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರಿಗೆ 'ಜೀವಮಾನ ಸಾಧನೆ' ಪ್ರಶಸ್ತಿ ಪ್ರದಾನ ಮಾಡಲಾಗುವುದು. ಇದೇ ವೇಳೆ ಹಿರಿಯ ಪತ್ರಿಕಾ ವಿತರಕರಾದ ಸುಬ್ಬಣ್ಣ (ಪೇಪರ್ ಸುಬ್ಬಣ್ಣ) ಅವರನ್ನೂ ಸಂಘವು ಆತ್ಮೀಯವಾಗಿ ಸನ್ಮಾನಿಸಲಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷರುಗಳಾದ ಕೆ.ಶಿವಕುಮಾರ್, ಅಂಶಿ ಪ್ರಸನ್ನಕುಮಾರ್, ಸಿ.ಕೆ.ಮಹೇಂದ್ರ ಹಾಗೂ ಕೆ. ದೀಪಕ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಅಧ್ಯಕ್ಷತೆ ವಹಿಸುವರು. ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು ಎಂದು ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ವಿಶ್ವ ಫಾರ್ಮಸಿಸ್ಟ್ ದಿನ

ಔಷಧಾಲಯ ಬಲಪಡಿಸುವ ಆರೋಗ್ಯ ವ್ಯವಸ್ಥೆ ಘೋಷವಾಕ್ಯದಡಿ ಆಚರಣೆ



ಮೈಸೂರು,ಸೆ.20(ಎಂಟಿವೈ)– ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ರಾಜೇಂದ್ರ ಸಭಾಂಗಣದಲ್ಲಿ ಸೆ.22ರಂದು ಬೆಳಗ್ಗೆ 10ಕ್ಕೆ 'ಔಷಧಾಲಯ ಬಲಪಡಿಸುವ ಆರೋಗ್ಯ ವ್ಯವಸ್ಥೆ' ವಿಷಯದೊಡನೆ ವಿಶ್ವ ಫಾರ್ಮಸಿಸ್ಟ್ ದಿನವನ್ನು ಆಚರಿಸಲಾಗುತ್ತಿದೆ ಎಂದು ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ರಾಚಾರ್ಯ ಡಾ. ಟಿ.ಎಂ.ಪ್ರಮೋದ್‌ಕುಮಾರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂಡಿಯನ್ ಫಾರ್ಮಸ್ಯುಟಿಕಲ್ ಅಸೋಸಿಯೇಷನ್ ಸಹಯೋಗದೊಂದಿಗೆ ಫಾರ್ಮಸಿಸ್ಟ್ ದಿನ ಆಚರಿಸಲಾಗುತ್ತಿದೆ. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ರಾಜ್ಯ ಔಷಧ ತಯಾರಕರ ಸಂಸ್ಥೆಯ ಅಧ್ಯಕ್ಷ ಹರೀಶ್ ಕೆ.ಜೈನ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟ್‌ಸೂರ್‌ಮಠ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಮೂವರು ಹಳೆಯ ವಿದ್ಯಾರ್ಥಿಗಳಾದ ಮಣಿಪಾಲ್ ಕಾಲೇಜ್ ಆಫ್ ಫಾರ್ಮಾಸ್ಯುಟಿಕಲ್ ಸೈನ್ಸ್ ಪ್ರಾಧ್ಯಾಪಕ ಡಾ.ಕೃಷ್ಣಮೂರ್ತಿಭಟ್, ಔಷಧ ನಿಯಂತ್ರಣ ಇಲಾಖೆಯ ವೈಜ್ಞಾನಿಕ ಅಧಿಕಾರಿ ಡಾ.ಲೋಕೇಶ್ ಪ್ರಸಾದ್ ಎಂ.ಎಸ್ ಹಾಗೂ ಸುಬ್ರಹ್ಮಣ್ಯಕುಮಾರ್ ಕುಂಟಿಕಾನ ಮಠ ಅವರನ್ನು ಸನ್ಮಾನಿಸಲಾಗುವುದು. ಜೊತೆಗೆ ವಿಶ್ವ ಫಾರ್ಮಾಸಿಸ್ಟರ ದಿನದ ಪ್ರಯುಕ್ತ ನಡೆಸಿದ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಫಾರ್ಮಾಸಿಸ್ಟ್ ಸಂಸ್ಥೆಯ ಮೈಸೂರು ಶಾಖೆ ಗೌರವ ಕಾರ್ಯದರ್ಶಿ ಡಾ.ಆರ್.ಎಸ್. ಚಂದನ್, ಡಾ.ಮಂಜುನಾಥ್, ಡಾ.ಕೌಶಿಕ್, ಡಾ.ಬಿ.ಎಂ.ಗುರುಪಾದಯ್ಯ ಇದ್ದರು.

ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ನಾಳೆಯಿಂದ ವಿಶೇಷ ಕೈಮಗ್ಗ ಮೇಳ



ಮೈಸೂರು,ಸೆ.20(ಎಂಟಿವೈ)– ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಸೆ.22ರಿಂದ ಅ.6ರವರೆಗೆ ವಿಶೇಷ ಕೈಮಗ್ಗ ಮೇಳ ಆಯೋಜಿಸಲಾಗಿದೆ ಎಂದು ಜೆಎಸ್‌ಎಸ್ ಮಹಾ ವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೇಕಾರರು ನೇಕಾರ ಸಹಕಾರ ಸಂಘಗಳು ಸಿದ್ಧಪಡಿಸಿರುವ ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವ ನಿಟ್ಟಿನಲ್ಲಿ ಹಾಗೂ ಕೈಮಗ್ಗ ಉತ್ಪನ್ನಗಳ ಬಳಕೆಗೆ ಉತ್ತೇಜನ ನೀಡಲು ಈ ಮೇಳ ಆಯೋಜಿಸಲಾಗಿದೆ. ದೇಶದ ವಿವಿಧೆಡೆಯಿಂದ 75ಕ್ಕೂ ಹೆಚ್ಚು ಕೈಮಗ್ಗ ನೇಕಾರರು, ಕುಶಲ ಕರ್ಮಿಗಳು ಉತ್ಪಾದಿಸಿರುವ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆ ಮಾಡಲಾಗಿದೆ. ರಾಜ್ಯದ ಚಿತ್ರದುರ್ಗ, ಹಾವೇರಿ ಚಾಮರಾಜನಗರ, ಮಂಡ್ಯ ರಾಮನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು ಶಿವಮೊಗ್ಗ, ಚಿತ್ರದುರ್ಗ, ಗದಗ, ಬಾಗಲಕೋಟೆ, ಗುಲ್ಬರ್ಗ ಇನ್ನಿತರ ಜಿಲ್ಲೆ ಕುಶಲಕರ್ಮಿಗಳು ಮೇಳದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಈ ಮೇಳದಲ್ಲಿ ಮೊಳಕಾಲ್ಮೂರು ಸೀರೆ, ಇಳಕಲ್ ಸೀರೆ, ಕಸೂತಿ ಸೀರೆ, ತಮಿಳುನಾಡು ರಾಜ್ಯದ ಪರಿಶುದ್ಧ ಕಾಂಚಿವರಂ ಸೀರೆ, ಕೇರಳ ರಾಜ್ಯದ ಕೈಮಗ್ಗ ಉತ್ಪನ್ನಗಳು, ಬಿಹಾರ ಮತ್ತು ಜಾರ್ಖಂಡ್ ರಾಜ್ಯದ ತಸ್ಸರ್ ಸೀರೆ, ಪಶ್ಚಿಮ ಬಂಗಾಳದ ಕಾಂತಾ ಸೀರೆ ಬಲಚುರಿ ಸೀರೆ, ಭುಟಿಕ್ ಸೀರೆ, ವಿವಿಧ ರಾಜ್ಯಗಳ ಡ್ರೆಸ್ ಮೆಟೀರಿಯಲ್‌ಗಳು ಹಾಗೂ ಕರಕುಶಲ ಕರ್ಮಿಗಳು ತಯಾರು ಮಾಡಿರುವ ಕರಕುಶಲ ವಸ್ತುಗಳು ಒಂದೇ ಸೂರಿನಡಿ ಮೈಸೂರಿನ ಜನತೆಗೆ ದೊರೆಯುತ್ತವೆ. ಸೆ.22ರಂದು ಸಂಜೆ 4ಕ್ಕೆ ಸುತ್ತೂರು ಕ್ಷೇತ್ರದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಮೇಳವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದಾರೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಯೋಜನಾಧಿಕಾರಿ ಶಿವನಂಜಸ್ವಾಮಿ, ಜನಾರ್ದನ್, ರಾಕೇಶ್ ರೈ ಉಪಸ್ಥಿತರಿದ್ದರು.




ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳದ ಪಂಪ್‌ಹೌಸ್ ವೃತ್ತದಲ್ಲಿ ರುಚಿ ಚಿಕನ್ ಸ್ಟಾಲ್‌ನ ರಾಮಕೃಷ್ಣ ನೇತೃತ್ವದಲ್ಲಿ ಡಾ.ವಿಷ್ಣುವರ್ಧನ್ ಅವರ 73ನೇ ಹುಟ್ಟುಹಬ್ಬ ಆಚರಿಸಲಾಯಿತು. ಈ ವೇಳೆ ಅಭಿಮಾನಿಗಳಾದ ಮಧು, ರಾಮು, ಶ್ರೀನಿವಾಸ, ರವಿ, ನಂದೀಶ, ಹರೀಶ ಇನ್ನಿತರರು ಉಪಸ್ಥಿತರಿದ್ದರು.



ಹೆಚ್.ಡಿ.ಕೋಟೆ.ತಾಲೂಕಿನ ಬಾಚೇಗೌಡನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ 'ಗ್ರೀನ್ ಡೇ' ಶೀರ್ಷಿಕೆಯಡಿ ವಿವಿಧ ತರಕಾರಿಗಳನ್ನು ಅಲಂಕಾರಿಕವಾಗಿ ಜೋಡಿಸಿ, ಅವುಗಳ ಹೆಸರು ಮತ್ತು ಬಣ್ಣದ ಪರಿಚಯವನ್ನು ಮಕ್ಕಳಿಗೆ ಪರಿಚಯಿಸಲಾಯಿತು. ಈ ವೇಳೆ ಮುಖ್ಯ ಶಿಕ್ಷಕ ಮರಿಕಾಳಯ್ಯ ಮತ್ತು ಸಹಶಿಕ್ಷಕರು ಉಪಸ್ಥಿತರಿದ್ದರು.

ವಿಧಾನಸಭೆ ಚುನಾವಣೆ ವೇಳೆ ವರುಣದಲ್ಲಿ ಕುಕ್ಕರ್, ಇಸ್ತ್ರಿಪೆಟ್ಟಿಗೆ ವಿತರಣೆ: ಡಾ. ಯತೀಂದ್ರ ಸಿದ್ದರಾಮಯ್ಯ ಹೇಳಿಕೆ ವೈರಲ್



ಮೈಸೂರು: ವಿಧಾನಸಭಾ ಚುನಾವಣೆಗೂ ಮುನ್ನ ವರುಣ ಕ್ಷೇತ್ರದ ಮಡಿವಾಳ ಸಮುದಾಯದವರಿಗೆ ಐರನ್ ಬಾಕ್ಸ್ ಮತ್ತು ಕುಕ್ಕರ್‌ಗಳನ್ನು ಹಂಚಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಹಾಗೂ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿರುವ ವಿಡಿಯೋ ವೈರಲ್ ಆಗಿದ್ದು ವಿವಾದಕ್ಕೆ ಕಾರಣವಾಗಿದೆ.

ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ವರುಣ ಕ್ಷೇತ್ರದಲ್ಲಿ ಮಡಿವಾಳ ಸಮುದಾಯದವರನ್ನು ಸಂಘಟನೆ ಮಾಡಬೇಕೆಂದು, ಸಾವಿರಾರು ಜನರನ್ನು ಸೇರಿಸಿ ಅವರೆಲ್ಲರಿಗೂ ಕುಕ್ಕರ್ ಮತ್ತು ಇಸ್ತ್ರಿಪೆಟ್ಟಿಗೆಗಳನ್ನು ನೀಡಲಾಗಿತ್ತು. ಆ ಸಮಾಜದ ರಾಜ್ಯ ಘಟಕದ ಅಧ್ಯಕ್ಷ ನಂಜಪ್ಪ ನನ್ನ ತಂದೆ ಸಿದ್ದರಾಮಯ್ಯ ಅವರ ಕೈಯಿಂದಲೇ ಅವುಗಳನ್ನು ಕೊಡಿಸಿದ್ದರು ಎಂದು ಸಿಎಂ ಸಿದ್ದರಾಮಯ್ಯ ಪುತ್ರ, ವರುಣ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷ ಡಾ.ಯತೀಂದ್ರ ಹೇಳಿದ್ದಾರೆ.

ನಂಜನಗೂಡಿನಲ್ಲಿ ಶುಕ್ರವಾರ ನಡೆದ ತಾಲೂಕು ಮಡಿವಾಳರ ಸಮುದಾಯ ಭವನದ ಕಚೇರಿ ಉದ್ಘಾಟನೆ ಕಾರ್ಯಕ್ರಮದಲ್ಲಿ ಅವರು ನೀಡಿರುವ ಹೇಳಿಕೆಯು ಮಂಗಳವಾರ ಸಾಮಾಜಿಕ ಜಾಲತಾಣದಲ್ಲಿ ಹರಡಿದೆ. ಅನುಕೂಲವಾಗಲೆಂದು ನಂಜಪ್ಪ ಈ ಕಾರ್ಯಕ್ರಮ ಮಾಡಿದ್ದರು. ತಂದೆಯವರು ಪ್ರಚಾರದ ಬ್ಯುಸಿಯಲ್ಲಿದ್ದರೂ, 2–3 ಬಾರಿ ಬಂದು ಭೇಟಿಯಾಗಿ, ಹಲವು ಬಾರಿ ದಿನಾಂಕ ನಿಗದಿಯಾಗಿ ರದ್ದಾದರೂ ಪಟ್ಟು ಬಿಡದೇ ನನ್ನ ತಂದೆಯವರಿಂದಲೇ ಕೊಡಿಸಿ ಕಾರ್ಯಕ್ರಮ ಯಶಸ್ವಿಯಾಗಿಸಿದರು. ಸಮಾಜದ ಮತಗಳು ನಮಗೆ ಹೆಚ್ಚಿನ ಪ್ರಮಾಣದಲ್ಲಿ ಸಿಗುವಂತೆ ಮಾಡಿದರು. ನಾನು ಆ ಕಾರ್ಯಕ್ರಮಕ್ಕೆ ಬರಲಾಗಿರಲಿಲ್ಲ ಎಂದು ಹೇಳಿದ್ದಾರೆ.

ನಾವು ಗೆಲ್ಲಲು ಮಡಿವಾಳ ಸಮಾಜಕ್ಕೆ ದೊಡ್ಡ ಕೊಡುಗೆ ನೀಡಿದೆ. ಈ ಸಮುದಾಯದ ಬೇಡಿಕೆಗಳನ್ನು ಈಡೇರಿಸಲು ನಮ್ಮ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದು ಭರವಸೆ ನೀಡಿದ್ದಾರೆ. ಈ ಸಂಬಂಧ ಮಾಧ್ಯಮಗಳೊಂದಿಗೆ ಮಾತನಾಡಿದ ಯತೀಂದ್ರ, ವರುಣ ಕ್ಷೇತ್ರದಲ್ಲಿ ನಡೆದ ಜಿಲ್ಲಾ ಸಮಾವೇಶದ ವೇಳೆ ಮಡಿವಾಳ ಸಮುದಾಯದ ಪದಾಧಿಕಾರಿಗಳು ಉಡುಗೊರೆಗಳನ್ನು ವಿತರಿಸಿದ್ದಾರೆ. ಪಕ್ಷದಿಂದ ಅಥವಾ ನಮ್ಮ ಕಡೆಯಿಂದ ನೀಡಿಲ್ಲ, ಈ ವೇಳೆ ನಮ್ಮ ತಂದೆ ಸಿದ್ದರಾಮಯ್ಯ ಕೋಲಾರದಿಂದ ಸ್ಪರ್ಧಿಸಲು ನಿರ್ಧರಿಸಿದ್ದರು. ನನಗೆ ಸಾಧ್ಯವಾಗದ ಕಾರಣ ನನ್ನ ತಂದೆ ಸಮಾವೇಶಕ್ಕೆ ಹಾಜರಿದ್ದರು ಎಂದು ಸ್ಪಷ್ಟನೆ ನೀಡಿದ್ದಾರೆ. ಯತೀಂದ್ರ ಅವರ ಹೇಳಿಕೆಯನ್ನು ಚುನಾವಣಾ ಆಯೋಗ ಗಮನಿಸಬೇಕು ಎಂದು ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಒತ್ತಾಯಿಸಿದ್ದಾರೆ. ಈಗಾಗಲೇ ಸಿದ್ದರಾಮಯ್ಯ ವಿರುದ್ಧ ಚುನಾವಣಾ ಅರ್ಜಿ ವಿಚಾರಣೆ ಬಾಕಿ ಇದೆ. ಯತೀಂದ್ರ ಅವರ ಹೇಳಿಕೆಯನ್ನು ಸಾಬೀತುಪಡಿಸಲು ಪುರಾವೆಗಳಿದ್ದರೆ, ಇಸಿಐ ಅದನ್ನು ಗಂಭೀರವಾಗಿ ಪರಿಗಣಿಸಬೇಕು, ಉಚಿತ ವಿತರಣೆಯು ಗಂಭೀರ ಅಪರಾಧವಾಗಿದೆ ಎಂದು ಹೇಳಿದರು.

ವರುಣದಲ್ಲಿ ಕುಕ್ಕರ್ ವಿತರಣೆ: ರಾಜ್ಯ ಕಾಂಗ್ರೆಸ್ ಸರ್ಕಾರ ವಜಾಗೊಳಿಸುವಂತೆ ಎಚ್‌ಡಿಕೆ ಆಗ್ರಹ



ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಕಳೆದ ವಿಧಾನಸಭಾ ಚುನಾವಣೆ ವೇಳೆ ವರುಣಾ ಕ್ಷೇತ್ರದ ಮಡಿವಾಳ ಸಮುದಾಯದವರಿಗೆ ಐರನ್ ಬಾಕ್ಸ್ ಮತ್ತು ಕುಕ್ಕರ್‌ಗಳನ್ನು ಹಂಚಿರುವುದಾಗಿ ಹೇಳಿರುವ ವಿಡಿಯೋ ವೈರಲ್ ಆಗಿದ್ದು, ವಿವಾದಕ್ಕೆ ಕಾರಣವಾಗಿದೆ. ಈ ಸಂಬಂಧ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿರುವ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು, ಮತ ದಾರರಿಗೆ ಆಮಿಷ ಒಡ್ಡಿ, ಕೂಪನ್ ಮತ್ತು ಗ್ಯಾರಂಟಿ ಕಾರ್ಡು ಗಳನ್ನು ಹಂಚಿ ಅಕ್ರಮ ಮಾರ್ಗದಲ್ಲಿ ಅಧಿಕಾರ ಹಿಡಿದಿರುವ ಸಿದ್ದರಾಮಯ್ಯ ಸರ್ಕಾರವನ್ನು ವಜಾ ಮಾಡಬೇಕು ಎಂದು ಚುನಾವಣಾ ಆಯೋಗವನ್ನು ಒತ್ತಾಯಿಸಿದ್ದಾರೆ.

ಮತದಾರರಿಗೆ ಸಲ್ಲದ ಆಸೆ, ಆಮಿಷ ಒಡ್ಡಿ ಈ ಸರ್ಕಾರ ಅಧಿಕಾರಕ್ಕೆ ಬಂದಿದೆ ಎಂದು ನಾನು ಪದೇ ಪದೆ ಹೇಳಿದ್ದೆ. ಗಿಫ್ಟ್ ಕೂಪನ್, ತವಾ, ಕುಕ್ಕರ್, ಇಸ್ತ್ರಿಪೆಟ್ಟಿಗೆ, ಸೀರೆ ಕೊಟ್ಟ ಕಾಂಗ್ರೆಸ್ ಪಕ್ಷದ 'ಅಸಲಿ ಹಸ್ತದ ಹಕೀಕತ್ತು ಹೀಗಿದೆ ನೋಡಿ. ಸ್ವತಃ ರಾಜ್ಯದ ಘನತೆವೆತ್ತ ಸನ್ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರ ಸುಪುತ್ರನೇ ರಾಜ್ಯಕ್ಕೆ ಸತ್ಯದ ಸಾಕ್ಷಾತ್ಕಾರ ಮಾಡಿದ್ದಾರೆ. ಅಂಗೈ ಹುಣ್ಣಿಗೆ ಕನ್ನಡಿ ಬೇಕೆ? ಎಂದು ಮಾಜಿ ಸಿಎಂ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಉಳಿದ ಕ್ಷೇತ್ರಗಳ ಕಥೆ ಹಾಗಿರಲಿ, ಕರ್ನಾಟಕದ ಮುಖ್ಯಮಂತ್ರಿಗಳ ಸ್ವಕ್ಷೇತ್ರ ವರುಣದಲ್ಲಿಯೇ ಜಾತಿ ಸಮಾವೇಶ ನಡೆಸಿ ಕುಕ್ಕರ್, ಇಸ್ತ್ರಿಪೆಟ್ಟಿಗೆಗಳ ಭರ್ಜರಿ ಸಮಾರಾಧನೆ ನಡೆದಿದೆ. ಸಮಾಜವಾದಿ ಮುಖ್ಯಮಂತ್ರಿ ಮಹೋದಯರ ಹಾದಿಯಲ್ಲೇ ನಡೆದಿರುವ ಇಡೀ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಅದೇ ವಾಮಮಾರ್ಗದಲ್ಲಿ ಹೆಜ್ಜೆಯ ಮೇಲೆ ಹೆಜ್ಜೆಯನಿಟ್ಟು ಶ್ರೀ ಕೆಂಗಲ್ ಹನುಮಂತಯ್ಯ ಅವರು ಕಟ್ಟಿದ ಕನ್ನಡಿಗರ ಪ್ರಜಾಸತ್ತೆಯ ಮಹಾದೇಗುಲ ವಿಧಾನಸೌಧದ ಪಾವಿತ್ರ್ಯವನ್ನೇ ಹಾಳು ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ. ರಾಮನಗರ, ಮಾಗಡಿ ಸೇರಿ ರಾಜ್ಯದ 224 ಕ್ಷೇತ್ರಗಳಲ್ಲಿಯೂ ಕಾಂಗ್ರೆಸ್ ಅಭ್ಯರ್ಥಿಗಳು ಗಿಫ್ಟ್ ಕೂಪನ್, ಗ್ಯಾರಂಟಿ ಕೂಪನ್ ಹಂಚಿಯೇ ಗೆದ್ದಿದ್ದಾರೆ. ಪಕ್ಷದ ಅಧ್ಯಕ್ಷರು, ಶಾಸಕಾಂಗ ಪಕ್ಷದ ನಾಯಕರೇ ಸಹಿ ಹಾಕಿದ ಅಧಿಕೃತ ಆಮಿಷಗಳ 5 ಗ್ಯಾರಂಟಿ ಕೂಪನ್‌ಗಳನ್ನು ಮನೆಮನೆಗೂ ಹಂಚಿ ಮತದಾರರ ಮೇಲೆ ಪ್ರಭಾವ ಬೀರಿದ್ದಾರೆ. ಇದು ಸ್ವಾತಂತ್ರ್ಯ ಭಾರತ ಕಂಡ, ಅದೂ ಅಮೃತಕಾಲದಲ್ಲಿ ನಡೆದಿರುವ ಅತಿದೊಡ್ಡ ಚುನಾವಣಾ ಅಕ್ರಮ, ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದ ಹೆಗ್ಗಳಿಕೆಯ ಕಗ್ಗೊಲೆ ಎಂದು ಕಿಡಿಕಾರಿದ್ದಾರೆ.

ಕೇಂದ್ರ ಚುನಾವಣಾ ಆಯೋಗ ಈ ಚುನಾವಣಾ ಅಕ್ರಮವನ್ನು ಗಂಭೀರವಾಗಿ ಪರಿಗಣಿಸಬೇಕು. ಖಡಕ್ ತನಿಖೆ ನಡೆಸಿ, ಕಾಂಗ್ರೆಸ್ ಪಕ್ಷದ ಎಲ್ಲಾ ಅಭ್ಯರ್ಥಿಗಳನ್ನು ಚುನಾವಣಾ ಕಣದಿಂದ ಹೊರ ಹಾಕಲೇಬೇಕು. ಅಪ್ರಜಾಸತ್ತಾತ್ಮಕವಾಗಿ ಗೆದ್ದಿರುವ ಆ ಪಕ್ಷದ ಎಲ್ಲಾ 135 ಶಾಸಕರನ್ನೂ ಅನರ್ಹಗೊಳಿಸಬೇಕು. ಕೇಂದ್ರ ಸರ್ಕಾರವೂ ಈ ಚುನಾವಣೆಯಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ವಿಸ್ತೃತ ತನಿಖೆ ನಡೆಸಬೇಕು. ಈ ಅಕ್ರಮ ಸರ್ಕಾರ ವಜಾ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಕಾಂಗ್ರೆಸ್ ಪಕ್ಷವು ಇಡೀ ಚುನಾವಣೆ ವ್ಯವಸ್ಥೆಯನ್ನೇ ನಾಶ ಮಾಡಲು ಸಂಚು ಹೂಡಿದೆ. ಕರ್ನಾಟಕ ಮಾದರಿ ಎನ್ನುವ ವಿನಾಶಕಾರಿ ಮಹಾಮಾರಿಯನ್ನು ಇಡೀ ದೇಶಕ್ಕೆ ವಿಸ್ತರಿಸಲು ಹೊರಟಿದೆ. ಮಧ್ಯಪ್ರದೇಶ, ರಾಜಸ್ತಾನ, ತೆಲಂಗಾಣ ಸೇರಿ ಶೀಘ್ರವೇ ಚುನಾವಣೆ ನಡೆಯಲಿರುವ ರಾಜ್ಯಗಳಲ್ಲಿ ಈ ಷಡ್ಯಂತ್ರ, ಕುತಂತ್ರ, ಕುಯುಕ್ತಿಗಳನ್ನು ಪ್ರಯೋಗ ಮಾಡಲು ಹೊರಟಿದೆ. ಸಂವಿಧಾನಕ್ಕೆ ಮತ್ತು ಪ್ರಜಾಪ್ರಭುತ್ವಕ್ಕೆ ವಿಷಪ್ರಾಶನ ಮಾಡುವ ಈ ದೇಶದ್ರೋಹಿ ಕೃತ್ಯವನ್ನು ತಡೆಯಲೇಬೇಕಿದೆ ಎಂದಿದ್ದಾರೆ.

ರಾಜ್ಯದ ಮುಖ್ಯಮಂತ್ರಿಗಳು ಚುನಾವಣೆಯಲ್ಲಿ ಗೆದ್ದು ಬರಲು ಕಾರಣವಾದ ಅಂಶಗಳು, ಯತೀಂದ್ರರೇ ಹೇಳಿದಂತೆ!

* ಇಸ್ತ್ರಿ ಪೆಟ್ಟಿಗೆ
* (ಸ)ಮಜವಾದ
* ಗೋಪಿಕೃಷ್ಣ ಅವರ 2 ಕೋಟಿ
* ಕುಕ್ಕರ್ ಒಳಗೆ ಕುದಿಯದ ಅನ್ನಭಾಗ್ಯ
* ಜನರ ಮುಂದಿಟ್ಟ ಹಸಿ ಹಸಿ ಸುಳ್ಳುಗಳು
* ಡಿ.ಕೆ. ಶಿವಕುಮಾರ್ ಅವರ ಪುಕ್ಕಟೆ ಕೂಲಿ ಕೆಲಸ

ಅಪ್ಪನ ಗೆಲುವಿನ ಹಿಂದಿರುವ ಅನೈತಿಕ–ಅಕ್ರಮ ಶ್ರಮಗಳ ಪೂರ್ಣಪಟ್ಟಿ ಯತೀಂದ್ರರ ಬುಟ್ಟಿಯಿಂದ ಮತ್ತಷ್ಟು ಹೊರ ಬರಲಿ.

–ಬಿಜೆಪಿ ಟ್ವೀಟ್

ನಿರಂತರ ಸಂಸ್ಥೆಯಿಂದ ಸಹಜರಂಗ ರಂಗ ತರಬೇತಿ ಶಿಬಿರ

ನಿರಂತರ ಫೌಂಡೇಶನ್ (ರಿ.) ಮೈಸೂರು

ಮೈಸೂರು, ಸೆ. 20– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ವೈವಿಧ್ಯಮಯ ಚಟುವಟಿಕೆಗಳಿಗೇನು ಕೊರತೆ ಇಲ್ಲ. ವರ್ಷ ಪೂರ್ತಿ ಒಂದಲ್ಲಾ ಒಂದು ಕಾರ್ಯಕ್ರಮ ನಡೆಯುತ್ತಿರುತ್ತವೆ.


ಈ ನಿಟ್ಟಿನಲ್ಲಿ ಹಲವಾರು ಸಂಸ್ಥೆಗಳು ಶ್ರಮಿಸುತ್ತಿವೆ. ಕಳೆದ ಎರಡೂವರೆ ದಶಕಗಳಿಂದ ಸಮಾಜದ ನಾನಾ ಕ್ಷೇತ್ರಗಳಲ್ಲಿ ಬದ್ಧತೆಯೊಂದಿಗೆ ಸಮಾಜಮುಖಿಯಾಗಿ ಕಾರ್ಯನಿರ್ವಹಿಸುತ್ತಿರುವ ಮುಂಚೂಣಿ ಸಂಸ್ಥೆಗಳಲ್ಲಿ ನಗರದ 'ನಿರಂತರ ಫೌಂಡೇಷನ್' ಒಂದು.

ನಿರಂತರ ಸಂಸ್ಥೆಯು ರಂಗಭೂಮಿ ಶಿಕ್ಷಣ, ಸಾಹಿತ್ಯ, ಸಂಸ್ಕೃತಿ, ಪರಿಸರ ಹಾಗೂ ಯುವ ಪೀಳಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹಲವಾರು ಚಟುವಟಿಕೆಗಳನ್ನು ರೂಪಿಸುತ್ತಿದೆ. ಕಳೆದ ಎರಡು ದಶಕಗಳಿಂದಲೂ ಸ್ಪಷ್ಟ ಉದ್ದೇಶ ಮತ್ತು ಸಾಮಾಜಿಕ ಆಶಯದೊಂದಿಗೆ ಮುನ್ನಡೆಯುತ್ತಿರುವ ಈ ಸಂಸ್ಥೆ, ಕಾಲೇಜು ವಿದ್ಯಾರ್ಥಿಗಳಿಗಾಗಿ ಕಳೆದ 19 ವರ್ಷಗಳಿಂದ ಸಹಜರಂಗ ರಂಗ ತರಬೇತಿ ಶಿಬಿರವನ್ನು ಆಯೋಜಿಸಿಕೊಂಡು ಬರುತ್ತಿದೆ. 1 ತಿಂಗಳ ಕಾಲ ನಡೆಯುವ ಈ ಶಿಬಿರದಲ್ಲಿ ರಂಗಭೂಮಿ ಇತಿಹಾಸ, ರಂಗ ಸಂಗೀತ, ಪರಿಸರ, ನಟನೆ, ಸಮರ ಕಲೆ ಸೇರಿದಂತೆ ಸಾಹಿತ್ಯ, ಪ್ರಚಲಿತ ವಿದ್ಯಮಾನಗಳ ಬಗ್ಗೆ ತರಗತಿಗಳು ರೂಪುಗೊಂಡಿರುತ್ತವೆ. ನಾಡಿನ ಸಾಹಿತಿಗಳು, ವಿಷಯ ಪರಿಣತರು, ರಂಗ ನಿರ್ದೇಶಕರು, ಸಂಗೀತ ನಿರ್ದೇಶಕರು ತರಗತಿಗಳನ್ನು ತೆಗೆದುಕೊಂಡು ಶಿಬಿರಾರ್ಥಿಗಳೊಂದಿಗೆ ಚರ್ಚೆ ಸಂವಾದಗಳಲ್ಲಿ ಪಾಲ್ಗೊಳ್ಳುತ್ತಾರೆ. ಹಾಗೆಯೇ ಪ್ರಸ್ತುತ ವಿದ್ಯಮಾನಗಳ, ಆಗುಹೋಗುಗಳ ಬಗ್ಗೆ ವಿಸ್ತೃತ ಚರ್ಚೆ ಕೈಗೊಂಡು, ಇದಕ್ಕೆ ಪೂರಕವಾದ ನಾಟಕವನ್ನು ಶಿಬಿರಾರ್ಥಿಗಳಿಂದಲೇ ಮಾಡಿಸಲಾಗುತ್ತದೆ. ಪ್ರತೀ ವರ್ಷದಂತೆ ಈ ವರ್ಷವೂ ಕೂಡ ಸೆ.20ರಿಂದ ಅ.15ರ ತನಕ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರ ಮಾನಸ ಗಂಗೋತ್ರಿಯ ಗಾಂಧಿ ಭವನದಲ್ಲಿ ಪ್ರತಿದಿನ ಸಾಯಂಕಾಲ 5ರಿಂದ 8ರತನಕ ನಡೆಯುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೊ: 9980273167, 9611974424, 9449271983 ಸಂಪರ್ಕಿಸಬಹುದು.

ನೀರಿನ ಮಟ್ಟ

ಕೆಆರ್‌ಎಸ್ ಅಣೆಕಟ್ಟು	ಕಬಿನಿ ಅಣೆಕಟ್ಟು	ಹಾರಂಗಿ ಅಣೆಕಟ್ಟು
ಗರಿಷ್ಠ ಮಟ್ಟ 124.80 ಅಡಿ	ಗರಿಷ್ಠ ಮಟ್ಟ 2,284.00 ಅಡಿ	ಗರಿಷ್ಠ ಮಟ್ಟ 2,859.00 ಅಡಿ
ಇಂದಿನ ಮಟ್ಟ 97.08 ಅಡಿ	ಇಂದಿನ ಮಟ್ಟ 2,275.97 ಅಡಿ	ಇಂದಿನ ಮಟ್ಟ 2,857.70 ಅಡಿ
ಹಿಂದಿನ ವರ್ಷದ ಮಟ್ಟ 124.42 ಅಡಿ	ಹಿಂದಿನ ವರ್ಷದ ಮಟ್ಟ 2,282.97 ಅಡಿ	ಹಿಂದಿನ ವರ್ಷದ ಮಟ್ಟ 2,857.86 ಅಡಿ
ನಿನ್ನೆಯ ಮಟ್ಟ 97.06 ಅಡಿ	ನಿನ್ನೆಯ ಮಟ್ಟ 2,276.18 ಅಡಿ	ನಿನ್ನೆಯ ಮಟ್ಟ 2,858.08 ಅಡಿ

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.9.2023 ಗುರುವಾರ, ಮಳೆ ನಕ್ಷತ್ರ: ಉತ್ತರಾ 14.09.2023ರಿಂದ 27.09.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ,
ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಅನುರಾಧ, ರಾಹುಕಾಲ: ಮಧ್ಯಾಹ್ನ 1.30ರಿಂದ 3ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ –ಮೈಸೂರಿನ ಎನ್.ರವಿಶಂಕರ್, 6.40 ಪದ ಸಂಸ್ಕೃತಿ, ಪ್ರಸ್ತುತಿ– ಪ್ರೊ.ಲಕ್ಷ್ಮೀನಾರಾಯಣ ಭಟ್ಟ, 7.15 ಭಾವಗೀತೆ, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ– ಮೈಸೂರು ಉಮೇಶ್, 10.00 ಡಾ.ಎಸ್.ವಿ.ಸಹನಾ–ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಮುದ್ದುಮೋಹನ, ವೃಂದಗಾನ, ಆರ್. ಚಂದ್ರಿಕಾ, 1.20 ಭಾವಗೀತೆ– ಹಂಸಿನಿ ಎಸ್.ಕುಮಾರ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 4.00 ಜನಪದ ಸಂಗೀತ–ಹಿರೇನಂದಿ ಚಾಮಮ್ಮ ಮತ್ತು ಸಂಗಡಿಗರು, 4.30 ವಿಜ್ಞಾನ ಭಾರತಿ–2023ಕ್ಕೆ ಹೊಸ ತಂತ್ರಜ್ಞಾನ ಪ್ರವೃತ್ತಿಗಳು ಕುರಿತು ಮಾತನಾಡುತ್ತಾರೆ ಪಿ.ಚಂದ್ರಶೇಖರ್, ನಿಸರ್ಗದಲ್ಲಿ ಪರಾಗಸ್ಪರ್ಶಕಗಳ ಪ್ರಾಮುಖ್ಯತೆ ಕುರಿತು ಮಾತನಾಡುತ್ತಾರೆ ಡಾ.ಎನ್.ನಂದಿನಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಗ್ರಾಮೀಣರಿಗೆ ಸ್ವ ಉದ್ಯೋಗ ತರಬೇತಿ ಕಾರ್ಯಕ್ರಮಗಳನ್ನು ಕುರಿತ ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಕೆ.ಎಸ್. ಸರಿತಾ ಹಾಗೂ ನವೀನ್ ಕುಮಾರ್ ಹೆಚ್.ಆರ್. 8.00 ಯುವವಾಣಿ–ಹಲೋ ಯುವವಾಣಿ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಕುರಿತ ರಸಪ್ರಶ್ನೆ ಕಾರ್ಯಕ್ರಮ,ಪ್ರಸ್ತುತಿ–ನಿವೇದಿತಾ ಎಚ್., 10.00 ನಾಟಕ 'ವಗ್ಗರಣೆ' ರಚನೆ–ಟಿ.ಸುನಂದಮ್ಮ, ನಿರ್ದೇಶನ– ಬಿ.ಗಂಗಪ್ಪ

■ **ಅಮೃತಾಂಶು ಟ್ರಸ್ಟ್, ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ಮೈಸೂರು ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕ, ಕೆ.ಆರ್.ಆಸ್ಪತ್ರೆ:** ಉಚಿತ ಕಣ್ಣಿನ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರ, ಸ್ಥಳ: 2767, ಪಾಂಚಜನ್ಯ, 5ನೇ ಮೇನ್, ಮೇದರಕೇರಿ, ಚಾಮುಂಡಿಪುರಂ, ಬೆಳಗ್ಗೆ 9ರಿಂದ.

■ **ಆಲ್ಜೀಮರ್ಸ್ ಅಂಡ್ ರಿಲೇಟೆಡ್ ಡಿಸಾರ್ಡರ್ಸ್ ಸೊಸೈಟಿ ಆಫ್ ಇಂಡಿಯಾ:** ವಿಶ್ವ ಆಲ್ಝೈಮಿರ್ಸ್ ದಿನದ ಅಂಗವಾಗಿ ನಮ್ಮ ನಡಿಗೆ ಆರೋಗ್ಯದೆಡೆಗೆ, ಉದ್ಘಾಟನೆ : ರೋಟರಿ ವೆಸ್ಟ್ ಉಪಾಧ್ಯಕ್ಷ ಡಾ.ರಾಘವೇಂದ್ರ ಪ್ರಸಾದ್, ಮುಖ್ಯ ಅತಿಥಿಗಳು : ಮಹರ್ಷಿ ಪಬ್ಲಿಕ್ ಸ್ಕೂಲ್ ಮ್ಯಾನೇಜಿಂಗ್ ಟ್ರಸ್ಟಿ ಡಾ. ಭವಾನಿಶಂಕರ್, ರೋ. ಗೌತಮ್ ಸಲೇಚಾ, ಡಾ. ಎಲ್.ಎನ್. ಶೆಣೈ, ಅಧ್ಯಕ್ಷತೆ : ಶಾರದಾ ವಿಲಾಸ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ. ಹನುಮಂತಾಚಾರ್ ಜೋಷಿ, ಸ್ಥಳ: ಚಾಮುಂಡಿಬೆಟ್ಟದ ತಪ್ಪಲು, ಬೆಳಗ್ಗೆ 9ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅನುಭವ ಟುಟೋರಿಯಲ್ಸ್ :** ಶಿಕ್ಷಕರಿಗೆ ಶಿಕ್ಷಕ ಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸನ್ಮಾನಿಸುವವರು: ಸಮಾಜ ಸೇವಕ ಡಾ.ರಘುರಾಂ ವಾಜಪೇಯಿ, ಮುಖ್ಯ ಅತಿಥಿಗಳು: ಪ್ರಭುಸ್ವಾಮಿ, ಸಂಗಪ್ಪ, ಮುತ್ತುಸ್ವಾಮಿ, ಸ್ಥಳ: ಶ್ರೀಕಾಂತ ಹಿರಿಯ ಪ್ರಾಥಮಿಕ ಶಾಲೆ, ಬೆಳಗ್ಗೆ 10ಕ್ಕೆ.

■ **ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್:** ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಅಧಿಕಾರಿಗಳಿಗೆ ಮಾಹಿತಿ ಶಿಬಿರ, ಉದ್ಘಾಟನೆ: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಪಾಂಡು, ಮುಖ್ಯ ಅತಿಥಿಗಳು: ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್.ಸಿಂಧ್ಯಾ, ಅತಿಥಿಗಳು: ರಾಜ್ಯ ಜಂಟಿ ಕಾರ್ಯದರ್ಶಿ ಬಿ.ಕೆ.ಬಸವರಾಜು, ಉಪನಿರ್ದೇಶಕ ರಾಮಚಂದ್ರ ರಾಜೇ ಅರಸ್, ಸ್ಥಳ: ಶ್ರೀ ಜಯಚಾಮರಾಜೇಂದ್ರ ಸ್ಕೌಟ್ ಮತ್ತು ಗೈಡ್ ಕೇಂದ್ರ ಕಚೇರಿ, ಬೆಳಗ್ಗೆ 10.30ಕ್ಕೆ.

■ **ರಿದಮ್ಸ್ ಲಲಿತ ಕಲಾ ಮಹಾವಿದ್ಯಾಲಯ :** ಸಂಗೀತ ಮತ್ತು ನೃತ್ಯ ಸಂಸ್ಥೆಗಳಿಗೆ ನೋಂದಾಯಿತ ಪರೀಕ್ಷಾ ಕೇಂದ್ರದ ಪ್ರಮಾಣ ಪತ್ರ ವಿತರಣಾ ಕಾರ್ಯಕ್ರಮ, ಉಪಸ್ಥಿತರು : ಡಾ. ವಿಶ್ವನಾಥ ಪ್ರಸಾದ್, ಉಸ್ತಾದ್ ಫೈಯಾಜ್ ಖಾನ್, ಸ್ಥಳ: ರೋಟರಿ ಮೈಸೂರು ಸೆಕ್ರೆಟರಿಯೇಟ್, ಕೃಷ್ಣ ವಿಲಾಸ ರಸ್ತೆ, ಚಾಮರಾಜಪುರಂ, ಬೆಳಗ್ಗೆ 10.30ರಿಂದ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು:** ವಿಶೇಷ ಸರಣಿ ಮಾಲಿಕೆ, ವಿಷಯ: ಶೇಕ್ಸ್‌ಪಿಯರ್ ಅಂಡ್ ಇಸ್ ರೈಟಿಂಗ್ಸ್, ಸಂಪನ್ಮೂಲ ವ್ಯಕ್ತಿ: ಪ್ರೊ.ಚಾರ್ಲಸ್ ಜೋಸೆಫ್, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಪ್ರಜ್ಞಾವಂತ ನಾಗರಿಕ ವೇದಿಕೆ, ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ :** ವಿಶ್ವಕರ್ಮ ಜಯಂತಿ ಅಂಗವಾಗಿ ಹಿರಿಯ ಶಿಲ್ಪಿಗಳಿಗೆ ಸನ್ಮಾನ ಕಾರ್ಯಕ್ರಮ, ಮುಖ್ಯ ಅತಿಥಿಗಳು : ವೆಂಗಿಪುರ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಮೇಯರ್ ಶಿವಕುಮಾರ್, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಪಾಲಿಕೆ ಸದಸ್ಯ ರಮಣಿ, ಜಿಲ್ಲಾ ವಿಶ್ವಕರ್ಮ ಸಂಘದ ಅಧ್ಯಕ್ಷ ರಿಷಿ ವಿಶ್ವಕರ್ಮ, ಪ್ರಧಾನ ಕಾರ್ಯದರ್ಶಿ ಸಿ.ಟಿ. ಆಚಾರ್ಯ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಅರ್ಚಕರ ಸಂಘದ ಅಧ್ಯಕ್ಷ ವಿದ್ವಾನ್ ಕೃಷ್ಣಮೂರ್ತಿ, ವೇದಿಕೆ ಅಧ್ಯಕ್ಷ ಕಡಕೊಳ ಜಗದೀಶ್, ಸ್ಥಳ: ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನದ ಆವರಣ, ಇರ್ವಿನ್ ರಸ್ತೆ, ಬೆಳಗ್ಗೆ 11ಕ್ಕೆ.

■ **ಹೋಟೆಲು ಮಾಲೀಕರ ಪತ್ತಿನ ಸಹಕಾರ ಸಂಘ :** ಬೆಳ್ಳಿ ಚಪ್ಪರ ಸಮಾರಂಭ, ಸಾನ್ನಿಧ್ಯ : ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷ ಶ್ರೀ ಮುಕ್ತಿದಾನಂದಜಿ ಮಹಾರಾಜ್, ಉದ್ಘಾಟನೆ : ವಿಧಾನಸಭಾ ಅಧ್ಯಕ್ಷ ಯು.ಟಿ. ಖಾದರ್, ಅಧ್ಯಕ್ಷತೆ : ಸಂಘದ ಅಧ್ಯಕ್ಷ ನಾರಾಯಣ ವಿ. ಹೆಗಡೆ, ಮುಖ್ಯ ಅತಿಥಿಗಳು : ಕೃಷಿ ಸಚಿವ ಚಲುವರಾಯಸ್ವಾಮಿ, ಮೇಯರ್ ಶಿವಕುಮಾರ್, ಶಾಸಕರಾದ ಟಿ.ಎಸ್. ಶ್ರೀವತ್ಸ, ಕೆ. ಹರೀಶ್‌ಗೌಡ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಕೆ.ಎಸ್. ಹರೀಶ್‌ಕುಮಾರ್, ಸ್ಥಳ: ಹೋಟೆಲ್ ಪೈ ವಿಸ್ತಾ, ಸಂಜೆ 5.30ಕ್ಕೆ.

■ **ಕಟ್ಟೆ ಬಳಗ :** 8ನೇ ವರ್ಷದ ಗಣೇಶೋತ್ಸವ, ವಿದ್ವಾನ್ ರಾಜೇಶ್ ಪಡಿಯಾರ್ ಮತ್ತು ತಂಡದವರಿಂದ ದಾಸವಾಣಿ, ಸ್ಥಳ: ಕೃಷ್ಣಮೂರ್ತಿಪುರಂ, ಸಂಜೆ 6.30ಕ್ಕೆ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** 62ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30 ರಿಂದ ಗೋಪಿ ಗೀತೆ (ಸಂಸ್ಕೃತ), ವಾಚನ : ಡಾ. ಸನತ್‌ಕುಮಾರ್ ಸೋಮಜಾಯಿ, ವ್ಯಾಖ್ಯಾನ : ನಾರಾಯಣ ದೇಸಾಯಿ, ಸಂಜೆ 6.45 ರಿಂದ ವಿದ್ವಾನ್ ಟಿ.ಎಂ. ಕೃಷ್ಣ ಅವರಿಂದ ಗಾಯನ, ವಿದ್ವಾನ್ ತ್ರಿವೇಂಡ್ರಂ ಸಂಪತ್ –ವಯೋಲಿನ್, ವಿದುಷಿ ರಂಜನಿ ವೆಂಕಟೇಶ್–ಮೃದಂಗ, ವಿದುಷಿ ಸುಕನ್ಯಾ ರಾಮಗೋಪಾಲ್–ಘಟಂ, ಸ್ಥಳ: 8ನೇ ಕ್ರಾಸ್, ವಿ.ವಿ.ಮೊಹಲ್ಲಾ.

■ **ಮೈಸೂರು ಧಾರ್ಮಿಕ ಪ್ರತಿಷ್ಠಾನ, ಮೈಸೂರು ಕಲಾ ಪ್ರತಿಷ್ಠಾನ:** ಮೈಸೂರು ಗಣೇಶ ಉತ್ಸವ–2023, ಸಂಜೆ 5.30 ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ಸಂಜೆ 6.30 ರಿಂದ ಶ್ಯಾಡೋ ಪ್ಲೇ ಪ್ರಹ್ಲಾದ್ ಆಚಾರ್ಯ, ಸಂಜೆ 7.30 ರಿಂದ ವಿದ್ವಾನ್ ಶಶಾಂಕ್ ಸುಬ್ರಮಣ್ಯಮ್ ಅವರಿಂದ ಕೊಳಲು, ಜಯತೀರ್ಥ ಮೇವುಂಡಿ–ಗಾಯನ, ಸ್ಥಳ: ಮಾಧವ ಕೃಪ

■ **ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಉತ್ತರಾದಿ ಮಠ :** ಶ್ರೀ ಧನ್ವಂತರಿ ಜಯಂತಿ ಪ್ರಯುಕ್ತ ಸಪ್ತರಾತ್ರೋತ್ಸವ, ಪಂಡಿತ್ ವ್ಯಾಸನಕೆರೆ ಪ್ರಭಂಜನಾಚಾರ್ಯ ಅವರಿಂದ ಶ್ರೀಮದ್ಭಾಗವತ ಸಪ್ತಾಹ ಪ್ರವಚನ, ಸ್ಥಳ: ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 7 ರಿಂದ.

■ **ಇಂಡಿಯನ್ ಥಿಯೇಟರ್ ಫೌಂಡೇಶನ್ :** ರಾಷ್ಟ್ರೀಯ ಮಕ್ಕಳ ರಂಗೋತ್ಸವ, ಮಧ್ಯಾಹ್ನ 3.30 ರಿಂದ ಎಕ್ಸ್ ವೈ ಜಡ್ (ಹಿಂದಿ), ಲಾ ಪೋ ಲಾ ಚಿಲ್ಡ್ರನ್ಸ್ ಫ್ರೆಂಡ್ (ಗಿಬ್ರಿಷ್), ಸಂಜೆ 7 ರಿಂದ ಥರ್ಸ್ಟಿ ಕ್ರೋ ರಿಟರ್ನ್ಸ್ (ಹಿಂದಿ), ಆಶ್ಚರ್ಯ ಚೂಡಾಮಣಿ (ಬಹುಭಾಷೆ) ನಾಟಕ ಪ್ರದರ್ಶನ, ಸ್ಥಳ: ಕಿರು ರಂಗಮಂದಿರ.

■ **ಶ್ರೀ ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್ :** ಶ್ರೀ ಗೌರಿ–ಗಣೇಶ ಹಬ್ಬ ಮತ್ತು ಶ್ರೀ 101 ಗಣಪತಿ ಪ್ರತಿಷ್ಠಾನ, 69ನೇ ವಾರ್ಷಿಕೋತ್ಸವದ ಪ್ರಯುಕ್ತ ವಿಶೇಷ ಪೂಜಾ ಮಹೋತ್ಸವ, ಶ್ರೀಮತಿ ಶಕುಂತಲಾ ವೃಂದದವರಿಂದ ಭಕ್ತಿಗೀತೆ, ಭಾವಗೀತೆ, ಜನಪದ ಗೀತೆಗಳು ಸ್ಥಳ:ದೇವಸ್ಥಾನ, ಕೆ.ಆರ್.ಮೊಹಲ್ಲಾ.

■ **ಸಾವರ್ಕರ್ ಪ್ರತಿಷ್ಠಾನ, ಅಯೋಧ್ಯಾ ಪ್ರಕಾಶನ:** ಕರಿ ನೀರ ವೀರ ಪುಸ್ತಕ ಬಿಡುಗಡೆ ಸಮಾರಂಭ, ಉಪಸ್ಥಿತರು: ದೆಹಲಿ ಸಂಗೀತ ನಾಟಕ ಅಕಾಡೆಮಿ ಸದಸ್ಯ ಡಾ.ಬಿ.ವಿ.ರಾಜಾರಾಂ, ಲೇಖಕ ರೋಹಿತ್ ಚಕ್ರವರ್ತಿ, ಆದಿತ್ಯ ಆಸ್ಪತ್ರೆ ಅಧ್ಯಕ್ಷ ಡಾ.ಚಂದ್ರಶೇಖರ್, ಹಿರಿಯ ರಂಗಕರ್ಮಿ ಸೇತುರಾಮ್, ಉದ್ಯಮಿ ಜಗನ್ನಾಥ್ ಶೆಣೈ, ಕರಿ ನೀರ ವೀರ ನಾಟಕದ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಸಾವರ್ಕರ್ ಪ್ರತಿಷ್ಠಾನದ ಅಧ್ಯಕ್ಷ ಡಾ. ಯಶಸ್ವಿ, ಸ್ಥಳ: ಹೋಟೆಲ್ ಸಿಪಾಯಿ ಗ್ರಾಂಡೆ ಸಭಾಂಗಣ, ವಾಣಿ ವಿಲಾಸ ರಸ್ತೆ, ಸಂಜೆ 6ಕ್ಕೆ.


■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್ :** ವಿದ್ವಾನ್ ಕೃಷ್ಣರಾವ್ ಪ್ರಕಾಶ್ ಅವರಿಂದ ಪತಾಂಜಲಿಯ ಯೋಗ ಸೂತ್ರಗಳು –ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಮೈಸೂರು ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಶ್ರೀ ಚಿನ್ಮಯ ಮಿಷನ್, ಗೋಕುಲಂ, ಸಂಜೆ 6ಕ್ಕೆ.

ಮೈಸೂರಿನ ಲಲಿತಮಹಲ್ ಪ್ಯಾಲೆಸ್ ರಸ್ತೆಯಲ್ಲಿ ಅತ್ಯಾಧುನಿಕ ಫುಡ್ ಸ್ಟ್ರೀಟ್ ನಿರ್ಮಾಣ

ಡಿಪಿಆರ್ ಪ್ರಕ್ರಿಯೆ ಆರಂಭ, ಅಕ್ಟೋಬರ್‌ನಲ್ಲಿ ಟೆಂಡರ್

- ಕೇಂದ್ರದ ಪ್ರಾಯೋಗಿಕ ಯೋಜನೆಗೆ ಮೈಸೂರು ಆಯ್ಕೆ
- ದೇಶದ 100 ನಗರಗಳಲ್ಲಿ ಸಾಂಸ್ಕೃತಿಕ ನಗರಿಗೂ ಸ್ಥಾನ
- ಇದಕ್ಕಾಗಿ ಕೇಂದ್ರ ಸರ್ಕಾರದಿಂದ ಒಂದು ಕೋಟಿ ನೆರವು
- ಶುಚಿತ್ವಕ್ಕೆ ಆದ್ಯತೆ; ವ್ಯಾಪಾರಿಗಳಿಗೆ ಎಲ್ಲಾ ರೀತಿಯ ಅನುಕೂಲ



ಬಾಪುಲಿಂಗರಾಜ್ ಅರಸ್

ಮೈಸೂರು, ಸೆ.20– ಶುಚಿ ವಾತಾವರಣದಲ್ಲಿ ತಿಂಡಿ ತಿನಿಸುಗಳ ಮಾರಾಟದ ವಿದೇಶಿ ಮಾದರಿಯ ಅತ್ಯಾಧುನಿಕ ಆಹಾರ ಪದಾರ್ಥ ಮಾರಾಟ ಮಾರ್ಗ (ಮಾಡ್ರನೈಸ್ಡ್ ಫುಡ್ ಸ್ಟ್ರೀಟ್) ಪ್ರಾಯೋಗಿಕ ಮಾಡುವ ಯೋಜನೆಗೆ ಮೈಸೂರು ನಗರ ಆಯ್ಕೆಯಾಗಿದೆ. ಮೈಸೂರಿನ ಲಲಿತಮಹಲ್ ಪ್ಯಾಲೆಸ್ ರಸ್ತೆಯಲ್ಲಿ ನಿರ್ಮಾಣ ಮಾಡಲುದ್ದೇಶಿಸಿರುವ ಈ ಯೋಜನೆಗೆ ಡಿಪಿಆರ್ (ಸಮಗ್ರ ಯೋಜನಾ ವರದಿ) ತಯಾರು ಮಾಡುವ ಪ್ರಕ್ರಿಯೆ ಆರಂಭಗೊಂಡಿದೆ.

ದೇಶಾದ್ಯಂತ ಬಹಳಷ್ಟು ಜನ ದೈನಂದಿನ ಊಟ ತಿಂಡಿಗೆ ಹೋಟೆಲ್, ರಸ್ತೆ ಬದಿಯ ಫಾಸ್ಟ್‌ಫುಡ್‌ಗಳನ್ನೇ ಅವಲಂಬಿಸಿದ್ದಾರೆ. ಕಡಿಮೆ ದರದಲ್ಲಿ ರುಚಿಯಾದ ತಿಂಡಿ ತಿನಿಸು ದೊರೆಯುವ ಕಾರಣ ಬೀದಿ ಬದಿಯ ತಿಂಡಿ ತಿನಿಸುಗಳಿಗೆ ಜನ ಸಾಮಾನ್ಯವಾಗಿ ಮಾರುಹೋಗುತ್ತಾರೆ. ಇದರಿಂದ ಹೋಟೆಲ್‌ಗಳಿಗಿಂತ ಫಾಸ್ಟ್‌ಫುಡ್ ವ್ಯಾಪಾರವೇ ಹೆಚ್ಚಿರುತ್ತದೆ. ಆದರೆ ಬೀದಿಬದಿಯ ಫಾಸ್ಟ್‌ಫುಡ್‌ಗಳಲ್ಲಿ ಶುಚಿತ್ವ ಇರುವುದಿಲ್ಲ. ಎಲ್ಲೆಂದರಲ್ಲಿ ಗಾಡಿಗಳನ್ನು ನಿಲ್ಲಿಸಿಕೊಂಡು ತಿಂಡಿ ತಿನಿಸು ಮಾರಾಟ ಮಾಡುತ್ತಾರೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಭಾರತದಲ್ಲಿ ವಿದೇಶಿ ಮಾದರಿ ಅತ್ಯಾಧುನಿಕ ಆಹಾರ ಪದಾರ್ಥ ಮಾರಾಟ ಮಾರ್ಗ ನಿರ್ಮಿಸುವ ಪ್ರಾಯೋಗಿಕ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಕೇಂದ್ರ ಆರೋಗ್ಯ ಸಚಿವಾಲಯ, ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ಸದುದ್ದೇಶದೊಂದಿಗೆ ಈ ಯೋಜನೆ ರೂಪಿಸಿದೆ.

ಭಾರತದ 100 ನಗರಗಳಲ್ಲಿ ಅತ್ಯಾಧುನಿಕ ಆಹಾರ ಪದಾರ್ಥ ಮಾರಾಟ ಮಾರ್ಗ ನಿರ್ಮಾಣ ಮಾಡಲು ಕೇಂದ್ರ ಸರ್ಕಾರ ಯೋಜನೆ ರೂಪಿಸಿದ್ದು, ಇದಕ್ಕೆ ಸಾಂಸ್ಕೃತಿಕ ನಗರಿ ಮೈಸೂರು ಕೂಡ ಆಯ್ಕೆಯಾಗಿದೆ.

ಭಾರತದ 100 ನಗರಗಳಲ್ಲಿ ಪ್ರಾಯೋಗಿಕವಾಗಿ ನಿರ್ಮಾಣ ಮಾಡುತ್ತಿರುವ ಯೋಜನೆಯ ಯಶಸ್ಸು ನೋಡಿಕೊಂಡು ಎರಡನೇ ಹಂತದಲ್ಲಿ ದೇಶದ ಇನ್ನು ಹಲವು ನಗರಗಳಲ್ಲಿ ಯೋಜನೆ ವಿಸ್ತರಣೆ ಮಾಡಲು ಕೇಂದ್ರ ಯೋಜಿಸಿದೆ. ಸಿಲಿಕಾನ್ ಸಿಟಿ ಬೆಂಗಳೂರು ಬಿಟ್ಟರೆ ಕರ್ನಾಟಕದಲ್ಲಿ ಅತೀ ಹೆಚ್ಚು ಬೆಳವಣಿಗೆ ಹೊಂದುತ್ತಿರುವ ನಗರವೆಂದರೆ ಅದು ಮೈಸೂರು. ಪಾರಂಪರಿಕ ನಗರ, ಸಾಂಸ್ಕೃತಿಕ ನಗರಿ, ಪ್ರವಾಸಿ ತಾಣ ಪ್ರಖ್ಯಾತಿ ಪಡೆದಿರುವ ಮೈಸೂರು ಪ್ರವಾಸಿಗರ ನೆಚ್ಚಿನ ಕೇಂದ್ರ, ದೇಶ–ವಿದೇಶಗಳಿಂದ ಕೋಟ್ಯಾಂತರ ಜನರು ಬರುತ್ತಾರೆ. ಆದರೆ ಮೈಸೂರಿನ ರಸ್ತೆ ಬದಿಯ ಫಾಸ್ಟ್‌ಫುಡ್‌ಗಳ ಅವ್ಯವಸ್ಥೆ ಪ್ರವಾಸಿ ತಾಣಗಳ ವೀಕ್ಷಣೆಗೆ ಬರುವ ಪ್ರವಾಸಿಗರನ್ನು ಮುಜುಗರಕ್ಕೀಡು ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಅತ್ಯಾಧುನಿಕ ಆಹಾರ ಪದಾರ್ಥ ಮಾರಾಟ ಮಾರ್ಗ ನಿರ್ಮಾಣ ಮಾಡುತ್ತಿರುವ ಯೋಜನೆಗೆ ಕೇಂದ್ರ ಸರ್ಕಾರ ಮೈಸೂರು ನಗರವನ್ನು ಆಯ್ಕೆ ಮಾಡಿದೆ.

ಮೈಸೂರಿನ ಲಲಿತಮಹಲ್ ಪ್ಯಾಲೆಸ್ ರಸ್ತೆಯಲ್ಲಿ ಮಾಡ್ರನೈಸ್ಡ್ ಫುಡ್ ಸ್ಟ್ರೀಟ್ ನಿರ್ಮಾಣ ಮಾಡಲಾಗುತ್ತಿದೆ. ಪಿಪಿಪಿ (ಸಾರ್ವಜನಿಕ ಖಾಸಗಿ ಸಹಭಾಗಿತ್ವ) ಮಾದರಿಯಡಿ ನಿರ್ಮಾಣ ಮಾಡುತ್ತಿರುವ ಈ ಮಹದುದ್ದೇಶಿತ ಯೋಜನೆಗೆ ಕೇಂದ್ರ ಸರ್ಕಾರ ಕೋಟಿ ರೂ. ನೆರವು ನೀಡುತ್ತಿದೆ.

ಶುಚಿತ್ವ ವಾತಾವರಣದಲ್ಲಿ ನಿರ್ಮಾಣ ಮಾಡುತ್ತಿರುವ ಮಾಡ್ರನೈಸ್ಡ್ ಫುಡ್ ಸ್ಟ್ರೀಟ್‌ನಲ್ಲಿ ಬೀದಿಬದಿ ಟೈಲ್ಸ್ ಫ್ಲೋರಿಂಗ್, ಅಲ್ಲಲ್ಲಿ ಡಸ್ಟ್ ಬಿನ್ ಅಳವಡಿಕೆ, ಆಹಾರ ಹಾಗೂ ದರ ಪಟ್ಟಿ ಕಡ್ಡಾಯ, ಸೂಕ್ತ ಬೆಳಕಿನ ವ್ಯವಸ್ಥೆ, ಘನ ಹಾಗೂ ದ್ರವ ತ್ಯಾಜ್ಯದ ಸೂಕ್ತ ವಿಲೇವಾರಿ ಸೇರಿದಂತೆ ಹಲವು ಸೌಲಭ್ಯಗಳನ್ನು ಕಲ್ಪಿಸಲಾಗುತ್ತದೆ. ಜೊತೆಗೆ ಶೌಚಾಲಯ, ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಕೂಡ ಮಾಡಲಾಗುತ್ತಿದೆ. ಜನರು ಕುಳಿತು ಆಹಾರ ಸೇವಿಸಲು ಆಸನ ವ್ಯವಸ್ಥೆ ಕೂಡ ಮಾಡಿಕೊಡಲಾಗುತ್ತಿದೆ. ಈಗಿರುವ ಫಾಸ್ಟ್‌ಫುಡ್‌ಗಳಲ್ಲಿ ರಸ್ತೆಬದಿಯಲ್ಲಿ ಜನರು ತಿಂಡಿ ತಿನಿಸು ತಿನ್ನುವ ವೇಳೆ ಧೂಳು ಆಹಾರದ ಮೇಲೆ ಬೀಳುತ್ತದೆ. ಇದರಿಂದ ರೋಗ ರುಜಿನಗಳು ಹರಡುತ್ತವೆ. ಮಳೆ ಬಂದಾಗ ರಕ್ಷಣೆ ಇಲ್ಲ. ಜೊತೆಗೆ ರಸ್ತೆ ಪಕ್ಕದಲ್ಲೇ ವಾಹನಗಳನ್ನು ಕಂಡ ಕಂಡಲ್ಲಿ ನಿಲ್ಲಿಸುವುದರಿಂದ ಇತರ ವಾಹನಗಳ ಸಂಚಾರಕ್ಕೆ ಅಡೆತಡೆ, ಅಪಘಾತಗಳು ಸಂಭವಿಸುವ ಸಾಧ್ಯತೆಗಳಿವೆ.

ಮಾಡ್ರನೈಸ್ಡ್ ಫುಡ್ ಸ್ಟ್ರೀಟ್ ನಿರ್ಮಾಣವಾದರೆ ಜನರು ಮಳೆಯಿಂದ ಆಶ್ರಯದ ವ್ಯವಸ್ಥೆ ಮಾಡಲಾಗುತ್ತದೆ. ಶುಚಿತ್ವಕ್ಕೆ ಹೆಚ್ಚಿನ ಆದ್ಯತೆ ನೀಡುವುದರಿಂದ ಜನ ಸಾಮಾನ್ಯರಿಗೂ ಅನುಕೂಲವಾಗುತ್ತದೆ.

ವಿದೇಶದಲ್ಲಿ ರಸ್ತೆ ಬದಿ ವ್ಯಾಪಾರಕ್ಕೆ ಪ್ರತ್ಯೇಕವಾದ ಫುಡ್ ಸ್ಟ್ರೀಟ್ ಇದ್ದೇ ಇರುತ್ತದೆ. ಆದರೆ ಭಾರತದಲ್ಲಿ ಇಂತಹ ವ್ಯವಸ್ಥೆ ಇಲ್ಲ. ಈಗ ಮೈಸೂರು ಸೇರಿದಂತೆ ಪ್ರಮುಖ ನಗರಗಳಲ್ಲಿ ಈ ಯೋಜನೆ ಹಂತ ಹಂತವಾಗಿ ಅನುಷ್ಠಾನಗೊಂಡರೆ ಶುಚಿತ್ವ ವಾತಾವರಣದಲ್ಲಿ ತಿಂಡಿ ತಿನಿಸುಗಳ ವ್ಯಾಪಾರಕ್ಕೆ ಆದ್ಯತೆ ನೀಡಿದಂತಾಗುತ್ತದೆ.

> ಮೈಸೂರಿನ ಲಲಿತಮಹಲ್ ಪ್ಯಾಲೆಸ್ ರಸ್ತೆಯಲ್ಲಿ ಮಾಡ್ರನೈಸ್ಡ್ ಫುಡ್ ಸ್ಟ್ರೀಟ್ ನಿರ್ಮಾಣ ಮಾಡಲಾಗುತ್ತಿದೆ. ಈ ಸಂಬಂಧ ಡಿಪಿಆರ್ ತಯಾರಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈ ತಿಂಗಳಾಂತ್ಯಕ್ಕೆ ನೀಡುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದ್ದೇನೆ. ತರುವಾಯ ಅಕ್ಟೋಬರ್ ಅಂತ್ಯಕ್ಕೆ ಟೆಂಡರ್ ಕರೆಯಲಾಗುತ್ತದೆ. ಕೇಂದ್ರ ಸರ್ಕಾರ 1 ಕೋಟಿ ರೂ. ನೆರವು ನೀಡುತ್ತಿದ್ದು, ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಈ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ.
>
> ಲಲಿತಮಹಲ್ ಪ್ಯಾಲೆಸ್ ರಸ್ತೆಯಲ್ಲಿ ಈಗ ವ್ಯಾಪಾರ ಮಾಡುತ್ತಿರುವ ವ್ಯಾಪಾರಸ್ಥರ ಬಗ್ಗೆ ಸಮಗ್ರ ಮಾಹಿತಿ ಪಡೆಯಲಾಗಿದೆ. ಮಾಡ್ರನೈಸ್ಡ್ ಫುಡ್ ಸ್ಟ್ರೀಟ್‌ನಲ್ಲಿ ಈಗಿರುವ ವ್ಯಾಪಾರಿಗಳಿಗೆ ಮೊದಲ ಆದ್ಯತೆ ನೀಡಲಾಗುತ್ತದೆ. ಉಳಿದ ಜಾಗದಲ್ಲಿ ಬೇರೆ ಕಡೆ ವ್ಯಾಪಾರ ಮಾಡುತ್ತಿರುವವರಿಗೆ ಅವಕಾಶ ನೀಡಲಾಗುತ್ತದೆ. ಒಟ್ಟಾರೆ ಮಾಡ್ರನೈಸ್ಡ್ ಫುಡ್ ಸ್ಟ್ರೀಟ್ ಯೋಜನೆಯನ್ನು ವ್ಯವಸ್ಥಿತವಾಗಿ ಅನುಷ್ಠಾನ ಮಾಡಲಾಗುವುದು.
>
> **–ಅಶಾದ್ ಉರ್ ರೆಹಮಾನ್ ಷರೀಫ್, ನಗರಪಾಲಿಕೆ ಆಯುಕ್ತ.**

> ಲಲಿತಮಹಲ್ ರಸ್ತೆ ಪಕ್ಕ ರಾಷ್ಟ್ರೀಯ ಹೆದ್ದಾರಿ ಹಾದು ಹೋಗಿರುವ ಕಾರಣ ರಸ್ತೆ ಅಗಲೀಕರಣ ಮಾಡಲು ಅಲ್ಲಿನ ಜಾಗ ನೀಡಬೇಕಿದೆ. ಈ ಹಿನ್ನೆಲೆಯಲ್ಲಿ ಲಲಿತಮಹಲ್ ರಸ್ತೆಯಲ್ಲಿ ಮಾಡ್ರನೈಸ್ಡ್ ಫುಡ್ ಸ್ಟ್ರೀಟ್ ಮಾಡಲು ಸಾಧ್ಯವಿಲ್ಲ. ಮೈಸೂರಿನ ವಾಲ್ಮೀಕಿ ರಸ್ತೆಯಲ್ಲಿ ನಿರ್ಮಾಣ ಮಾಡಲು ಚಿಂತಿಸಲಾಗಿದೆ. ವಾಲ್ಮೀಕಿ ರಸ್ತೆ ವಿಶಾಲವಾಗಿರುವ ಕಾರಣ ಮಾಡ್ರನೈಸ್ಡ್ ಫುಡ್ ಸ್ಟ್ರೀಟ್ ಯೋಜನೆಗೆ ಹೇಳಿ ಮಾಡಿಸಿದ ಸ್ಥಳವಾಗಿದೆ. ಈ ಸಂಬಂಧ ಚಾಮರಾಜ ಕ್ಷೇತ್ರದ ಶಾಸಕ ಹರೀಶ್ ಗೌಡ ಅವರ ಜೊತೆ ಸ್ಥಳ ಪರಿಶೀಲನೆ ಕೂಡ ಮಾಡಿದ್ದೇನೆ. **–ಶಿವಕುಮಾರ್, ಮೇಯರ್**





ಕಳೆದ ಭಾನುವಾರ ಮೈಸೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಸರ್ವ ಸದಸ್ಯರ ಸಭೆ ಚಂದ್ರಗುಪ್ತ ರಸ್ತೆಯ ಎಂ.ಎಲ್. ವರ್ಧಮಾನಯ್ಯ ಸ್ಮಾರಕ ಭವನದಲ್ಲಿ ನಡೆಯಿತು. ಸಭೆಯಲ್ಲಿ ಅಧ್ಯಕ್ಷರಾದ ಸ್ವರೂಪ್, ಉಪಾಧ್ಯಕ್ಷ ಜೆ.ಪ್ರಕಾಶ್, ನಿರ್ದೇಶಕರಾದ ಎಸ್.ಬಿ.ಶಿವು, ಎನ್.ಧ್ರುವರಾಜ್, ವಿ.ಮಧು, ಎಂ.ಪುಟ್ಟಸ್ವಾಮಿ, ಪ್ರಸನ್ನ ಎನ್.ಲಕ್ಷ್ಮಣ್, ದಿನೇಶ್ ಎಂ.ವೆಂಕಟಲಿಂಗಯ್ಯ, ಜಯಕುಮಾರ್, ಎಸ್.ಸ್ವಾಮಿ, ಎಂ.ಕೆ.ಅಶೋಕ, ಹೇಮಾ, ಪುಷ್ಪಾ ಇನ್ನಿತರರು ಉಪಸ್ಥಿತರಿದ್ದಾರೆ.

ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕರ ತಂಡದ ಅಮೇರಿಕಾ ಪ್ರವಾಸ



ಮೈಸೂರು, ಸೆ.20–ಇಂಜಿನಿಯರಿಂಗ್ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಂಶೋಧನೆ ಉದ್ದೇಶಕ್ಕೆ ಮೈಸೂರಿನ ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಪ್ರೊ.ಬಿ.ಸದಾಶಿವೇಗೌಡರ ನೇತೃತ್ವದಲ್ಲಿ 8 ಜನ ಪ್ರಾಧ್ಯಾಪಕರ ತಂಡ ಸೆ.21ರಂದು ಅಮೇರಿಕಾ ಪ್ರವಾಸ ಕೈಗೊಳ್ಳುತ್ತಿದೆ. ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯದ ವತಿಯಿಂದ ಬುಧವಾರ ಪ್ರಾಧ್ಯಾಪಕರ ತಂಡಕ್ಕೆ ಸಂಸ್ಥೆಯ ಕಚೇರಿಯಲ್ಲಿ ಬೀಳ್ಕೊಡಲಾಯಿತು. ಪ್ರವಾಸದಲ್ಲಿ ಇಂದಿನ ಕಾಲಘಟ್ಟಕ್ಕೆ ಅನುಗುಣವಾಗಿ ಇಂಜಿನಿಯರಿಂಗ್ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪಠ್ಯಕ್ರಮ, ಪಠ್ಯಪುಸ್ತಕ ಮಾರ್ಗದರ್ಶನ, ಬೋಧನಾ ವಿಧಾನ, ಆಡಳಿತ, ಮೌಲ್ಯಮಾಪನ ಮತ್ತಿತರ ಪರಿಕಲ್ಪನೆಗಳಿಗೆ ಹಾಗೂ ಸಮಸ್ಯೆಗಳಿಗೆ ಸಂಬಂಧಿಸಿದಂತೆ ವೈಜ್ಞಾನಿಕವಾಗಿ ಕೈಗೊಳ್ಳಬಹುದಾದ ಮಾರ್ಗಗಳು ಹಾಗೂ ಪರಿಹಾರಗಳ ಬಗ್ಗೆ ಹೆಚ್ಚಿನ ಸಂಶೋಧನೆ ಕೈಗೊಳ್ಳಲಿದ್ದಾರೆ. ಈ ತಂಡವು ಪ್ರವಾಸದ ವೇಳೆ ಅಮೇರಿಕಾದ ಅತ್ಯುತ್ತಮ ವಿಶ್ವವಿದ್ಯಾಲಯಗಳಾದ ಸ್ಟ್ಯಾನ್‌ಫೋರ್ಡ್ ಯೂನಿವರ್ಸಿಟಿ, ಮ್ಯಾಸಚೂಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಪರ್ಡೀಯು ಯೂನಿವರ್ಸಿಟಿ, ಅರಿಜೋನಾ ಯೂನಿವರ್ಸಿಟಿ, ನಾರ್ತ್‌ಈಸ್ಟರ್ನ್ ಯೂನಿವರ್ಸಿಟಿ, ರಾಟ್ಗೆರ್ಸ್ ಯೂನಿವರ್ಸಿಟಿ, ನ್ಯೂ ಜೆರ್ಸಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಸ್ಟೀವೆನ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಸ್ಯಾನ್‌ಓಸೆ ಸ್ಟೇಟ್ ಯೂನಿವರ್ಸಿಟಿ, ಯೂನಿವರ್ಸಿಟಿ ಆಫ್ ಸ್ಯಾನ್‌ಫ್ರಾನ್ಸಿಸ್ಕೋ ಪ್ರಾಧ್ಯಾಪಕರೊಂದಿಗೆ ಚರ್ಚಿಸಲಿದ್ದಾರೆ. ವಿವಿಧ ಐಟಿ ಕಂಪನಿಗಳ ಮುಖ್ಯಸ್ಥರನ್ನು ಭೇಟಿಮಾಡಲಿದ್ದಾರೆ. ಅಮೇರಿಕಾದ ನ್ಯೂ ಜೆರ್ಸಿ ಮತ್ತು ಸ್ಯಾನ್ ಓಸೆ ರಾಜ್ಯದಲ್ಲಿ ವಿದ್ಯಾವರ್ಧಕ ಕಾಲೇಜಿನ ಹಳೆ ವಿದ್ಯಾರ್ಥಿಗಳ ಕೂಟದಲ್ಲಿ ಭಾಗವಹಿಸಲಿದ್ದಾರೆ. ಹಾಗೂ ವಿವಿಧ ವಿಶ್ವ ವಿದ್ಯಾಲಯಗಳೊಂದಿಗೆ ಹಲವಾರು ಒಡಂಬಡಿಕೆಗಳಿಗೂ ಸಹಿ ಹಾಕಲಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ ಮೈಸೂರು ನಗರ, ಕೆ.ಆರ್ ಮೊಹಲ್ಲಾ, ಲಕ್ಷ್ಮಿಪುರಂ, ಹೊಸಬಂಡೀಕೇರಿ, 1ನೇ ಅಡ್ಡರಸ್ತೆ, ಮನೆ ನಂ.2410 ರಲ್ಲಿ ವಾಸವಾಗಿರುವ ಎಚ್.ಎಸ್ ನಂಜುಂಡಸ್ವಾಮಿ ರವರ ಮಗಳಾದ ಶ್ರೀಮತಿ ಎಚ್.ಎನ್ ಪ್ರತಿಭಾ ರವರು ಈ ಕೆಳಕಂಡ ಸ್ವತ್ತನ್ನು ಅದರ ಮಾಲೀಕರಾದ ಚಿಕ್ಕಮಗಳೂರು ಜಿಲ್ಲೆ, ಅಣ್ಣೀಗೆರೆ, ಕಡೂರು ತಾಲ್ಲೂಕು, ವೈ.ಬಸವನಹಳ್ಳಿಯಲ್ಲಿ ವಾಸವಾಗಿರುವ ಶ್ರೀ ಶಶಿಧರ ರವರ ಮಗನಾದ ಸುಮಾರು 33 ವರ್ಷ ವಯಸ್ಸುಳ್ಳ ಶ್ರೀ ಸಂತೋಷ ಕವಾಡ ಇವರಿಂದ ಖರೀದಿಸಲು ಇಚ್ಛಿಸಿ ದಿನಾಂಕ: 05-05-2022 ರಂದು ಕ್ರಯದ ಕರಾರನ್ನು ಮಾಡಿಕೊಂಡಿದ್ದು, ಸದರಿ ಕರಾರಿನ ಅನುಷ್ಠಾನಕ್ಕಾಗಿ ನಮ್ಮ ಕಕ್ಷಿದಾರರು ನಿರ್ದಿಷ್ಟ ಪರಿಹಾರ ಅಧಿನಿಯಮದಡಿ ದಾವೆಯನ್ನು ಹೂಡಿದ್ದು ಸದರೀ ದಾವೆಯು ಘನ 6ನೇ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮೈಸೂರು ರವರಲ್ಲಿ ಓ.ಎಸ್ ಸಂಖ್ಯೆ: 1120/2023 ರಂತೆ ದಾವಾ ದಾಖಲಾಗಿ ಸಂತೋಷ ಕವಾಡ ರವರ ವಿರುದ್ಧ ಘನ ನ್ಯಾಯಾಲಯವು ಷೆಡ್ಯೂಲ್ ಸ್ವತ್ತನ್ನು ಪರಾಭಾರೆ, ಮಾರಾಟ ಮಾಡದಂತೆ ತಡೆಯಾಜ್ಞೆ ನೀಡಿದ್ದು ಸಾರ್ವಜನಿಕರು ಯಾರೂ ಕೂಡ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ವ್ಯವಹರಿಸ ಬಾರದೆಂದು ಈ ಮೂಲಕ ನಮ್ಮ ಕಕ್ಷಿದಾರರು ತಿಳಿಸಲು ಇಚ್ಛಿಸುತ್ತಾರೆ ಒಂದೊಮ್ಮೆ ಯಾರಾದರೂ ಷೆಡ್ಯುಲ್ ಸ್ವತ್ತಿಗೆ ಸಂಬಂಧಿಸಿದಂತೆ ವ್ಯವಹರಿಸಿದಲ್ಲಿ ಅದಕ್ಕೆ ನಮ್ಮ ಕಕ್ಷಿದಾರರು ಬಾಧ್ಯಾರಾಗಿರುವುದಿಲ್ಲವೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗುತ್ತಿದೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ನಗರ, ಕಸಬಾ ಹೋಬಳಿ, ಶ್ರೀರಾಂಪುರ ಗ್ರಾಮದ ಸರ್ವೆ ನಂ.17/3 ಮತ್ತು 18/3ರಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ದಿನಾಂಕ:06-05-2003 ರಂದು ಸಂಖ್ಯೆ.ವೈ.ನ.ಪ್ರಾ.ನ.ಯೋ.ರೂ.ವೆ.185/2001-02 ಮೇರೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಅನ್ವಯ ಕರ್ನಾಟಕ ರಾಜ್ಯ ಕಂದಾಯ ಇಲಾಖೆ ನೌಕರರ ಸಂಘ(ರಿ) ಜಿಲ್ಲಾ ಶಾಖೆ ಮೈಸೂರು ಇವರು ನಿರ್ಮಿಸಿ ಅಭಿವೃದ್ಧಿಪಡಿಸಿರುವ (ಕಂದಾಯ ನಗರ) ಬಡಾವಣೆಯ ನಿವೇಶನ ನಂ.23 ರಲ್ಲಿ ಕಟ್ಟಿರುವ ಮನೆಯ ವಿಸ್ತೀರ್ಣ ಪೂರ್ವ–ಪಶ್ಚಿಮ 15.00 ಮೀಟರ್, ಉತ್ತರ–ದಕ್ಷಿಣ 24.00 ಮೀಟರ್‌ಗಳ ಸ್ವತ್ತಿಗೆ ಚಕ್ಕುಬಂದಿ:- ಪೂರ್ವಕ್ಕೆ : ನಿವೇಶನ ನಂ.22, ಪಶ್ಚಿಮಕ್ಕೆ : ಬಡಾವಣೆ ಎಲ್ಲೆ, ಉತ್ತರಕ್ಕೆ : 9.00 ಮೀಟರ್ ರಸ್ತೆ, ದಕ್ಷಿಣಕ್ಕೆ :ಬಡಾವಣೆ ಎಲ್ಲೆ

ಸಹಿ/- ಮನುಕುಮಾರ್ ಬಿಎಎಲ್.ಎಲ್‌ಎಲ್‌ಬಿ
ವಕೀಲರು, #35, ಕುವೆಂಪು ಟ್ರಸ್ಟ್ ಬಿಲ್ಡಿಂಗ್, ಕಾಳಿದಾಸ ರಸ್ತೆ, ಜಯಲಕ್ಷ್ಮೀಪುರಂ, ಮೈಸೂರು – 570018
ಸ್ಥಳ: ಮೈಸೂರು
ದಿನಾಂಕ: 20.09.2023
ಫೋ: 9620828974

ಮೈಸೂರು ಮಿತ್ರ – ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಹಸಿರು ನಮ್ಮ ಉಸಿರು

ಸ್ಥಾಪನೆ: 1935 ನೋಂದಣಿ ಸಂಖ್ಯೆ: 1520/18/12-1935

ಅರಸು ಮಂಡಳಿ ಸಹಕಾರ ಸಂಘ ನಿಯಮಿತ
ನಂ. 1483/1, 5ನೇ ಕ್ರಾಸ್, ತ್ಯಾಗರಾಜ ರಸ್ತೆ, ಕೆ.ಆರ್ ಮೊಹಲ್ಲಾ, ಮೈಸೂರು – 570004
7019480195 | 0821-2439609 E-mail: umcsociety 1935@gmail.com

ಆಹ್ವಾನ ಪತ್ರಿಕೆ

ದಿನಾಂಕ : 19.09.2023

ಮಾನ್ಯ ಸದಸ್ಯರುಗಳ ಗಮನಕ್ಕೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನಮ್ಮ ಅರಸು ಮಂಡಳಿ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಎ ಆರ್ ಮಲ್ಲರಾಜೇಅರಸ್ (ಅಚ್ಯುತ) ರವರ ಅಧ್ಯಕ್ಷತೆಯಲ್ಲಿ 88 ನೇ ವಾರ್ಷಿಕ ಮಹಾಸಭೆಯು ದಿ:- 24.09.2023 ರ ಭಾನುವಾರ ಬೆಳಗ್ಗೆ 11.00 ಗಂಟೆಗೆ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಮುದಾಯ ಭವನ ತ್ಯಾಗರಾಜ ರಸ್ತೆ ಮೈಸೂರು. ಇಲ್ಲಿ ನಡೆಯುವುದರಿಂದ ಆಹ್ವಾನ ಪತ್ರಿಕೆ ತಲುಪದೆ ಇರುವ ಸದಸ್ಯರು ಇದನ್ನೆ ಆಹ್ವಾನ ಪತ್ರಿಕೆ ಎಂದು ಪರಿಗಣಿಸಿ ವಾರ್ಷಿಕ ಮಹಾ ಸಭೆಗೆ ಆಗಮಿಸಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇವೆ. **ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಬಂದು ಸಂಪರ್ಕಿಸುವುದು.**

ಕಛೇರಿ ವೇಳೆ
ಬೆಳಗ್ಗೆ 10.00 ರಿಂದ, ಸಂಜೆ 8.00 ರವರೆಗೆ

ಆಡಳಿತ ಮಂಡಳಿ ಪರವಾಗಿ
ಸಹಿ/–ಕಾರ್ಯದರ್ಶಿ

ಮೈಸೂರು ಮಹಾನಗರಪಾಲಿಕೆ

ಕಾರ್ಯಪಾಲಕ ಅಭಿಯಂತರವರ ಕಛೇರಿ,
ನೀಸ & ಒಚ (ಪಶ್ಚಿಮ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು.

ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ನೀಸ&ಒಚ (ಪೂರ್ವ)/ಟಿಎನ್–5/509/2023–24 ದಿನಾಂಕ: 20.09.2023

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ಸಾಮಾನ್ಯನಿಧಿ ಹಾಗೂ ದಸರಾ ಅನುದಾನದಡಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಈ ಕೆಳಕಂಡಂತಿರುತ್ತದೆ.

				ಸಂಜೆ 5.30 ಗಂಟೆ ನಂತರ	ಬೆಳಿಗ್ಗೆ 11.25 ಗಂಟೆ	ಬೆಳಿಗ್ಗೆ 11.30 ಗಂಟೆ
ಕ್ರ.ಸಂ.	ವಿವರ	ಕಾಮಗಾರಿಗಳು	ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ)	ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1.	Kw-2	1 ಸಂಖ್ಯೆ	21.00	21.09.2023	29.09.2023	30.09.2023
2.	Kw-1 & Kw-2	3 ಸಂಖ್ಯೆ	44.20	21.09.2023	05.10.2023	06.10.2023

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ / ಬದಲಾವಣೆ/ ತಿದ್ದುಪಡಿಗಳಿದ್ದರೆ ಇ –ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು
ನೀಸ & ಒಚ (ಪಶ್ಚಿಮ) ವಿಭಾಗ, ಮೈಸೂರು ಮಹಾನಗರಪಾಲಿಕೆ, ಮೈಸೂರು

ನಕ್ಕರೆ ಅದೇ ಸ್ವರ್ಗ

ಕಸ್ಟಮರ್ ಕೇರ್ ಹುಡುಗಿ : ಯಾಕೆ ಸರ್ ಪದೇ ಪದೇ ಕಸ್ಟಮರ್ ಕೇರ್‌ಗೆ ಫೋನ್ ಮಾಡ್ತೀರಾ?"

ಬಸ್ಯಾ : "ಏನಿಲ್ಲಾ ಮೇಡಂ. ಡಿ.ಎಡ್ ಮುಗಿಸಿ ನಾಲ್ಕು ವರ್ಷ ಆಯಿತು. ಇನ್ನು ಟೀಚರ್ ಕೆಲಸ ಸಿಕ್ಕಿಲ್ಲ. ಅಟ್ಲೀಸ್ಟ್ ನೀವು 'ಸರ್' ಅಂದಾಗ ಏನೋ ಒಂದು ರೀತಿ ಸಮಾಧಾನ ಆಗುತ್ತೆ ಅದಕ್ಕೆ!"

ಮೈಸೂರು ಮಿತ್ರ

ಗುರುವಾರ, 21 ಸೆಪ್ಟೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನಂಬಿಕೆ ಸಿಗಬೇಕಾದರೆ ಯೋಗ ಇರಬೇಕು. ನಂಬಿಕೆ ಉಳಿಸಿಕೊಳ್ಳಬೇಕಾದರೆ ಯೋಗ್ಯತೆ ಇರಬೇಕು. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ

ನಿಮ್ಮ ಪತ್ರಗಳು

ಯುಪಿಎಸ್ಸಿ ಪರೀಕ್ಷೆ ಪುಸ್ತಕಗಳು ಕನ್ನಡಕ್ಕೆ ತರ್ಜುಮೆ ಆಗಲಿ

ಮಾನ್ಯರೇ,

ಕೇಂದ್ರ ನಾಗರಿಕ ಸೇವಾ ಪರೀಕ್ಷೆ ಯುಪಿಎಸ್ಸಿಗೆ ವರ್ಷದಿಂದ ವರ್ಷಕ್ಕೆ ರಾಜ್ಯದಿಂದ ಗಣನೀಯ ಪ್ರಮಾಣದಲ್ಲಿ ಆಕಾಂಕ್ಷಿ ಅಭ್ಯರ್ಥಿಗಳು ಹೆಚ್ಚಾಗಿ ಅರ್ಜಿ ಸಲ್ಲಿಸುತ್ತಿರುವುದು ಶ್ಲಾಘನೀಯ.

ಬಹುತೇಕವಾಗಿ ಇಂಗ್ಲಿಷ್ ಮತ್ತು ಹಿಂದಿ ಮಾಧ್ಯಮದಲ್ಲಿ ಮಾತ್ರ ಇರುವ ಯುಪಿಎಸ್ಸಿ ಪರೀಕ್ಷೆ ಪುಸ್ತಕಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿಸಿದರೆ ಆಂಗ್ಲ ಮಾಧ್ಯಮ ತೊಡಕಾಗಿರುವ ಗ್ರಾಮಾಂತರ ಪ್ರದೇಶಗಳ ಹಾಗೂ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಪೂರೈಸಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ರಾಷ್ಟ್ರಮಟ್ಟದ ಈ ಕಠಿಣ ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಲು ಅನುಕೂಲವಾಗುತ್ತದೆ. ನೆರೆಯ ರಾಜ್ಯಗಳಾದ ತಮಿಳುನಾಡು, ಆಂಧ್ರ ಪ್ರದೇಶದಲ್ಲಿ ಯುಪಿಎಸ್ಸಿ ಪರೀಕ್ಷೆ ಸಂಬಂಧ ತಮಿಳು, ತೆಲುಗು ಭಾಷೆಯಲ್ಲಿ ಆಂಗ್ಲ ಭಾಷೆಯಿಂದ ಸಾಕಷ್ಟು ಪುಸ್ತಕಗಳನ್ನು ಅಲ್ಲಿನ ಲೇಖಕರು, ಪ್ರಕಾಶನ ಸಂಸ್ಥೆಗಳು ಅನುವಾದಿಸಿದ್ದಾರೆ. ಕಳೆದ ಒಂದು ದಶಕದಲ್ಲಿ ಈ ಎರಡು ರಾಜ್ಯಗಳಿಂದ ಕರ್ನಾಟಕಕ್ಕಿಂತ ಹೆಚ್ಚು ಅಭ್ಯರ್ಥಿಗಳು ಆಯ್ಕೆ ಆಗಿದ್ದು, ಅಧ್ಯಯನ ವಿಷಯಗಳ ಭಾಷಾ ಮಾಧ್ಯಮ ಮಾತೃಭಾಷೆಯಲ್ಲಿ ದೊರೆತರೆ ನಮ್ಮ ರಾಜ್ಯದಲ್ಲೂ ಹೆಚ್ಚಿನ ಅಭ್ಯರ್ಥಿಗಳು ಆಯ್ಕೆ ಆಗಬಹುದು. ಆದ್ದರಿಂದ, ಆಂಗ್ಲ ಪುಸ್ತಕಗಳ ಕನ್ನಡ ಅನುವಾದಕ್ಕೆ ರಾಜ್ಯ ಸರ್ಕಾರ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಉತ್ಸುಕತೆಯಿಂದ ಕ್ರಮ ವಹಿಸಬೇಕಿದೆ. ಜೊತೆಗೆ ಸಮಸ್ತ ಪುಸ್ತಕ ಪ್ರಕಾಶನ ಸಂಸ್ಥೆಗಳು ರಾಜ್ಯದ ವಿದ್ಯಾರ್ಥಿಗಳ ಹಿತ ಕಾಯುವ ನಿಟ್ಟಿನಲ್ಲಿ ಶೀಘ್ರ ಕಾರ್ಯೋನ್ಮುಖವಾಗಬೇಕು.

– ಅನಿಲ್ ಕುಮಾರ್, ನಂಜನಗೂಡು

ಮಹಿಳಾ ಮೀಸಲಾತಿ ಮಸೂದೆ ಶ್ಲಾಘನೀಯ

ಮಾನ್ಯರೆ,

ಲೋಕಸಭೆ ಹಾಗೂ ರಾಜ್ಯಗಳ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33 ರಷ್ಟು ಮೀಸಲಾತಿ ಒದಗಿಸುವ ಮಸೂದೆಯನ್ನು ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಮಂಗಳವಾರ ಮಂಡಿಸಿರುವುದು ಶ್ಲಾಘನೀಯ. ಹಲವು ದಶಕಗಳಿಂದ ಬಾಕಿ ಉಳಿದಿದ್ದ ಮಹಿಳಾ ಮೀಸಲಾತಿ ಮಸೂದೆಯನ್ನು ಜಾರಿ ತರುವ ನಿಟ್ಟಿನಲ್ಲಿ ಹೆಜ್ಜೆ ಇರಿಸಿರುವ ಪ್ರಧಾನಿ ನರೇಂದ್ರ ಮೋದಿಯವರ ನಡೆ ಪ್ರಶಂಸನೀಯವಾಗಿದೆ.

ಇದರಿಂದ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ನೀತಿ ನಿರೂಪಣೆಯಲ್ಲಿ ಮಹಿಳೆಯರ ದೊಡ್ಡ ಮಟ್ಟದ ಪಾಲ್ಗೊಳ್ಳುವಿಕೆಗೆ ಇದು ನೆರವಾಗಲಿದೆ. ಸಾಮಾಜಿಕ ನ್ಯಾಯದ ತತ್ವಗಳಿಗೆ ಬದ್ಧವಾಗಿರುವುದು ಹಾಗೂ ಲಿಂಗ ಸಮಾನ ನ್ಯಾಯಕ್ಕಾಗಿ ಈ ಮಹತ್ತರವಾದ ವಿಧೇಯಕದ ಅಗತ್ಯವಿದೆ. ಈ ನಿರ್ಧಾರ ಸಂಸತ್ತು ಮತ್ತು ರಾಜ್ಯ ವಿಧಾನಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ಹೆಚ್ಚಿಸಲು ನಿರ್ಣಾಯಕ ಹಾಗೂ ಸಮರ್ಥನೀಯವಾಗಿದೆ.

ಮಹಿಳೆಯರ ಸಬಲೀಕರಣ ಮತ್ತು ನಾರಿಶಕ್ತಿಯನ್ನು ಗಟ್ಟಿಗೊಳಿಸಲು ಮಹಿಳಾ ಮೀಸಲಾತಿ ವಿಧೇಯಕವನ್ನು ಪ್ರಸ್ತುತ ಮಂಡಿಸಲಾಗಿದ್ದು, 2024ರಲ್ಲಿ ಲೋಕಸಭೆಗೆ ನಡೆಯುವ ಸಾರ್ವತ್ರಿಕ ಚುನಾವಣೆಗೂ ಮುನ್ನ ಮಹಿಳಾ ಮೀಸಲಾತಿ ಮಸೂದೆಯನ್ನು ಅಂಗೀಕರಿಸಲು ಪ್ರಧಾನಿ ಮೋದಿಯವರು ಶ್ರಮಿಸಲಿ ಎಂಬುದೇ ಎಲ್ಲರ ಆಶಯವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಪ್ರತಾಪ್ ಸಿಂಹರವರಿಗೆ ಕೃತಜ್ಞತೆ

ಮಾನ್ಯರೆ,

ಮೈಸೂರು–ಕೊಡಗು ಲೋಕಸಭಾ ಸದಸ್ಯ ಹಾಗೂ ಬಿಜೆಪಿಯ ನಿಷ್ಠಾವಂತ ಕಾರ್ಯಕರ್ತರಾದ ಪ್ರತಾಪ್ ಸಿಂಹ ಅವರು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಸಾಕಷ್ಟು ಅಭಿವೃದ್ಧಿ ಯೋಜನೆಗಳನ್ನು ತಂದಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಅದರಲ್ಲಿ, ಇತ್ತೀಚೆಗೆ ಮೈಸೂರು–ಮಂಗಳೂರು ರೈಲನ್ನು ಮುರುಡೇಶ್ವರಕ್ಕೆ ವಿಸ್ತರಣೆ ಮಾಡಿರುವುದು ಹಾಗೂ ಮೈಸೂರು–ಧಾರವಾಡ ರೈಲನ್ನು ಬೆಳಗಾವಿಗೆ ವಿಸ್ತರಣೆ ಮಾಡುತ್ತಿರುವುದು ನಿಜಕ್ಕೂ ಸಂತಸದ ವಿಷಯ. ಇದರಿಂದ ಉಡುಪಿ, ಕೊಲ್ಲೂರು, ಮೂಕಾಂಬಿಕೆ, ಮುರುಡೇಶ್ವರ, ಗೋಕರ್ಣ ಇನ್ನೂ ಮುಂತಾದ ಧಾರ್ಮಿಕ ಕ್ಷೇತ್ರಗಳಿಗೆ ಹೋಗುವವರಿಗೆ ಹಾಗೂ ಉದ್ಯೋಗಸ್ಥರಿಗೆ, ವ್ಯಾಪಾರಸ್ಥರಿಗೆ ತುಂಬಾ ಅನುಕೂಲವಾಗಿದೆ. ಇದಕ್ಕೆ ಕಾರಣರಾದ ಲೋಕಸಭಾ ಸದಸ್ಯರಿಗೆ ಕೃತಜ್ಞತೆ ಸಲ್ಲಿಸುತ್ತಾ, ಮುಂದಿನ ದಿನಗಳಲ್ಲಿ ಇನ್ನೂ ಸಾಕಷ್ಟು ಶಾಶ್ವತ ಕೆಲಸ ಮಾಡಲೆಂದು ಹಾರೈಸುತ್ತೇವೆ.

–ಸಂತೋಷ, ಮೈಸೂರು

ಇಸ್ರೋ ಬಾಹ್ಯಾಕಾಶ ಪ್ರವಾಸೋದ್ಯಮ ಸ್ವಾಗತಾರ್ಹ

ಮಾನ್ಯರೆ,

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಇತ್ತೀಚೆಗೆ ಕಡಿಮೆ ವೆಚ್ಚದಲ್ಲಿ ಚಂದ್ರನ ದಕ್ಷಿಣ ಧ್ರುವದಲ್ಲಿ ವಿಕ್ರಮ್ ಲ್ಯಾಂಡರ್ ಅನ್ನು ಇಳಿಸುವ ಮೂಲಕ ಹೊಸ ಮೈಲಿಗಲ್ಲನ್ನು ಸ್ಥಾಪಿಸಿ ಜಗತ್ತಿಗೆ ಮಾದರಿಯಾಗುವ ಕೆಲಸ ಮಾಡಿದೆ. ಪ್ರಸ್ತುತ ಕೇವಲ 6 ಕೋಟಿ ವೆಚ್ಚದಲ್ಲಿ ಜನರನ್ನು ಬಾಹ್ಯಾಕಾಶಕ್ಕೆ ಕರೆದುಕೊಂಡು ಹೋಗುವ ಕ್ರಾಂತಿಕಾರಿ ಕ್ರಮಕ್ಕೆ ಮುಂದಾಗಿರುವುದು ಇಸ್ರೋದ ಕಾರ್ಯಕ್ಷಮತೆಗೆ ಹಿಡಿದ ಕನ್ನಡಿಯಾಗಿದೆ.

ಇಸ್ರೋ 2030ರ ವೇಳೆಗೆ ದೇಶಕ್ಕೆ ಬಾಹ್ಯಾಕಾಶ ಪ್ರವಾಸೋದ್ಯಮವನ್ನು ಪರಿಚಯಿಸಲಿದ್ದು, ಇದು ಬಹುಕೋಟಿ ವೆಚ್ಚದ ಯೋಜನೆಯಾಗಿದೆ. ಬಾಹ್ಯಾಕಾಶ ಪಯಣ ಕೈಗೊಳ್ಳಲು ಇಚ್ಛಿಸುವ ಪ್ರತಿ ವ್ಯಕ್ತಿಗೂ 6 ಕೋಟಿ ರೂ. ಶುಲ್ಕ ವಿಧಿಸುವ ಸಾಧ್ಯತೆಯಿದೆ ಎಂದು ಇಸ್ರೋ ಅಧ್ಯಕ್ಷ ಎಸ್.ಸೋಮನಾಥ್ ಹೇಳಿದ್ದಾರೆ. ಇತರೆ ದೇಶಗಳಿಗೆ ಹೋಲಿಕೆ ಮಾಡಿದರೆ, ನಮ್ಮ ಸಂಸ್ಥೆ ನಿಗದಿ ಮಾಡುವ ದರವೇ ಅತ್ಯಂತ ಕಡಿಮೆಯಾಗಿರಲಿದೆ ಎಂದಿರುವುದು ಉತ್ತಮ ಬೆಳವಣಿಗೆಯಾಗಿದೆ.

ಈ ಬಾಹ್ಯಾಕಾಶ ಪ್ರವಾಸದ ಅವಧಿ 15 ನಿಮಿಷಗಳಾಗಿದ್ದು, ಕೆಲ ನಿಮಿಷಗಳ ಕಾಲ ಗುರುತ್ವಾಕರ್ಷಣೆ ಬಲ ಕಡಿಮೆ ಇರುವ ಪ್ರದೇಶದಲ್ಲಿ ಕಳೆಯುವ ಯೋಜನೆಯೂ ಇದೆ. ಭೂಮಿಯಿಂದ 100 ಕಿಮೀ ಎತ್ತರ ಅಂದರೆ ಉಪ ಕಕ್ಷೆಯ ವ್ಯಾಪ್ತಿಗೆ ಕರೆದೊಯ್ಯಲಾಗುತ್ತದೋ ಅಥವಾ ಬಾಹ್ಯಾಕಾಶದ ಅಂಚಿಗೆ (ಭೂಮಿಯಿಂದ 400 ಕಿಮೀ ಎತ್ತರ) ತೆರಳುವುದು ಬಾಹ್ಯಾಕಾಶ ಪ್ರವಾಸೋದ್ಯಮದ ಗುರಿಯಾಗಿದೆ.

ಇಸ್ರೋದ ಬಾಹ್ಯಾಕಾಶ ಪ್ರವಾಸೋದ್ಯಮದಿಂದಾಗಿ ಮಕ್ಕಳಲ್ಲಿ ಬಾಹ್ಯಾಕಾಶದ ಕುರಿತಾಗಿ ಕೌತುಕ ಹೆಚ್ಚಾಗುತ್ತದೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಬಾಹ್ಯಾಕಾಶಕ್ಕೆ ಸಂಬಂಧಿಸಿದಂತಹ ಕೋರ್ಸ್‌ಗಳನ್ನು ಪ್ರಾಥಮಿಕ ಶಾಲಾ ಹಂತದಲ್ಲಿ ಪರಿಚಯಿಸುವ ಮೂಲಕ ಇಸ್ರೋದ ಬಾಹ್ಯಾಕಾಶ ಪ್ರವಾಸೋದ್ಯಮಕ್ಕೆ ಅನುಕೂಲವಾಗವಂತೆ ಮಾಡಬೇಕು. ಇಸ್ರೋದ ಬಾಹ್ಯಾಕಾಶ ಪ್ರವಾಸೋದ್ಯಮ ಯಶಸ್ವಿಯಾಗಲೆಂದು ಎಲ್ಲಾ ಭಾರತೀಯರ ಪರವಾಗಿ ಆಶಿಸೋಣ.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಬಹು ಜನರಿಗೆ ಗಗನಕುಸುಮ ಆಗದಿರಲಿ ಮಹಿಳಾ ಮೀಸಲಾತಿ



"ಇನ್ನು ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ಬರುವುದು ಎಷ್ಟು ಮುಖ್ಯವೋ ಈ ಮೀಸಲಾತಿಯನ್ನು ಜಾತಿ ಮತ್ತು ವರ್ಗಗಳ ಚೌಕಟ್ಟಿನಲ್ಲಿ ವಿಮರ್ಶಿಸಿ, ವಿಶ್ಲೇಷಿಸುವುದೂ ಅಷ್ಟೇ ಮುಖ್ಯ. ಮೀಸಲಾತಿಯಲ್ಲಿ ಒಳ ಮೀಸಲಾತಿಯ ಪ್ರಶ್ನೆಗಳು ಎದ್ದಿರುವುದು ಸಹಜ ಮತ್ತು ಸರಿ, ಏಕೆಂದರೆ ಮಹಿಳೆಯರು ಸಮರೂಪವಾದ ಒಂದು ವರ್ಗವಲ್ಲ. ಈಗ ರಾಜಕಾರಣವನ್ನು ಪ್ರವೇಶಿಸಿರುವ ಬಹುತೇಕ ಮಹಿಳೆಯರು ರಾಜಕೀಯ ಹಿನ್ನೆಲೆಯಿರುವ, ಪ್ರಭಾವಿ, ಪ್ರತಿಷ್ಠಿತ ಕುಟುಂಬಗಳಿಂದಲೇ ಬಂದವರಾಗಿದ್ದು, ಮೀಸಲಾತಿ ಬಂದ ಮಾತ್ರಕ್ಕೆ ಅಧಿಕಾರ ಸಮಾಜದ ಅಂಚಿನಲ್ಲಿರುವ ವರ್ಗಗಳು ಇದರ ಪ್ರಯೋಜನವನ್ನು ಪಡೆಯಲು ಸಾಧ್ಯವಾಗುವುದಿಲ್ಲ.

ಮೊನ್ನೆಯಷ್ಟೆ ಲೋಕಸಭೆಯಲ್ಲಿ ಮಂಡನೆಯಾದ ಮಹಿಳಾ ಮೀಸಲಾತಿ ಮಸೂದೆ ಲಿಂಗ ಸಮಾನತೆಯನ್ನು ಸಾಧಿಸುವ ಹಾದಿಯಲ್ಲಿ ಭಾರತ ಇಟ್ಟಿರುವ ಬಹು ಮಹತ್ವದ ಹೆಜ್ಜೆ ಎಂದು ಬಿಂಬಿಸಲಾಗುತ್ತಿದೆ. ಸುಮಾರು ಮೂವತ್ತು ವರ್ಷಗಳಿಂದಲೂ ಸಂಸತ್ತಿನಲ್ಲಿ ಮಂಡನೆ, ಅದರ ಪರ–ವಿರೋಧಗಳ ನಡುವೆ ತಿಕ್ಕಾಟ, ಕೆಲವೊಮ್ಮೆ ಪ್ರಜಾಸತ್ತಾತ್ಮಕ ಸೌಜನ್ಯವನ್ನು ಮೀರಿ ಅದರ ಮೇಲೆ ಆಕ್ರೋಶವನ್ನು ಹರಿಬಿಡುತ್ತಿದ್ದ ಅನೇಕ ಸದಸ್ಯರು, ಎಲ್ಲಕಿಂತ ಮಿಗಿಲಾಗಿ ಪರಸ್ಪರ ದೋಷಾರೋಪಣೆಯಲ್ಲಿ ನಿರತರಾಗಿ ಯಾವುದೇ ವಿಷಯದ ಬಗ್ಗೆ ಒಮ್ಮತಕ್ಕೆ ಬಾರದ ರಾಜಕೀಯ ಪಕ್ಷಗಳು, ಅಧಿಕಾರವನ್ನು ಮಹಿಳೆಯರಿಗೆ ಕೊಡುವ ವಿಚಾರ ಬಂದಾಗ ಮಾತ್ರ ಅದನ್ನು ವಿರೋಧಿಸಲು ಒಂದಾಗುವುದು– ಇವು ಮಹಿಳಾ ಮೀಸಲಾತಿ ಮಸೂದೆ ಚರ್ಚೆಗೆ ಬಂದಾಗಲೆಲ್ಲ ನಾವು ಕಾಣುತ್ತಿದ್ದ ಚಿತ್ರಣಗಳು. ಆದರೆ ಮೊನ್ನೆ ಹೊಸ ಸಂಸತ್ ಭವನದಲ್ಲಿ ನಡೆದ ಮೊದಲ ಸಭೆಯಲ್ಲಿ ಹೊಸ ಹೆಸರಿನಿಂದ ಮಂಡನೆಯಾದ ಮಹಿಳಾ ಮೀಸಲಾತಿ ಮಸೂದೆ ಪಕ್ಷಾತೀತವಾಗಿ ಸ್ವೀಕೃತಿಯನ್ನು ಪಡೆದಿದೆ ಎಂದರೆ ಇದು ಸಂತೋಷಪಡುವ ವಿಚಾರವೇ. ಆದರೆ ಇದರ ಅನುಷ್ಠಾನವನ್ನು ಸುತ್ತುವರೆದಿರುವ ಗೋಚರ–ಅಗೋಚರ ನಿರ್ಬಂಧಗಳು ಅಧಿಕಾರದ ಮರುಹಂಚಿಕೆಯ ತತ್ವಾಚರಣೆಯಲ್ಲಿ ನಂಬಿಕೆ ಇಟ್ಟವರಲ್ಲಿ ತೀವ್ರ ಸ್ವರೂಪದ ಅನುಮಾನಗಳನ್ನು ಸೃಷ್ಟಿಸಿವೆ.

ಸಂವಿಧಾನದ 128 ನೇ ತಿದ್ದುಪಡಿಯಾಗಿ ಹೊರಹೊಮ್ಮಲಿದ್ದು 'ನಾರಿ ಶಕ್ತಿ ಅಧಿನಿಯಮ್' ಎಂಬ ಹೊಸ ಹೆಸರಿನಿಂದ ಮಂಡನೆಯಾಗಿರುವ ಮಹಿಳಾ ಮೀಸಲಾತಿ ಮಸೂದೆ ಕಾಯಿದೆಯ ಸ್ವರೂಪವನ್ನು ತಳೆದ ಮೇಲೆ ದೇಶದ ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳಾ ಸದಸ್ಯರ ಪ್ರಮಾಣ ಶೇಕಡಾ 33ರಷ್ಟು ಆಗಲಿದೆ. ಈ ಕಾಯಿದೆ ಜಾರಿಗೆ ಬಂದ ನಂತರ ನಡೆಯುವ ಮೊದಲನೆಯ ಜನಗಣತಿಯ ಮಾಹಿತಿಯ ಆಧಾರದ ಮೇಲೆ ಕ್ಷೇತ್ರಗಳ ವರ್ಗೀಕರಣ ಆಗುವುದಾದರೆ, ಜನಗಣತಿ ನಡೆಯುವುದು ಯಾವಾಗ? ಮಸೂದೆಯನ್ನು ಮಂಡನೆ ಮಾಡುವಾಗ ಲೋಕಸಭೆಯಲ್ಲಿ ಹಾಲಿ 82 ಇರುವ ಮಹಿಳಾ ಸದಸ್ಯರ ಸಂಖ್ಯೆ 186 ಆಗಲಿದೆ ಎಂದು ಹೇಳಿರುವುದು ಯಾವ ಆಧಾರದ ಮೇಲೆ? ಈ ಸಂಖ್ಯೆ ಹಾಲಿ ಇರುವ ಸದಸ್ಯರ ಸಂಖ್ಯೆಯಲ್ಲಿ ಶೇಕಡಾ 33 ರಷ್ಟಾಗುತ್ತದೆ ಸರಿ. ಆದರೆ ಈ ಕಾಯಿದೆ 2024ರ ಲೋಕಸಭಾ ಮತ್ತು ದೇಶದ 8 ರಾಜ್ಯಗಳಲ್ಲಿ ನಡೆಯುವ ಚುನಾವಣೆಗಳಿಗೆ ಅನ್ವಯಿಸುತ್ತದೆಯೇ ಎನ್ನುವುದು ಮೂಲಭೂತ ಪ್ರಶ್ನೆ. ಜನಗಣತಿಯಾಗಲಿ, ಕ್ಷೇತ್ರ ಪುನರ್ವಿಂಗಡಣೆಯಾಗಲೀ 2024ರಲ್ಲಿ ನಡೆಯಲಿರುವ ಚುನಾವಣೆಗಳ ವೇಳೆಗೆ ಮುಗಿಯಲು ಸಾಧ್ಯವೇ ಎಂಬುದರ ಬಗ್ಗೆ ತೀವ್ರ ಅನುಮಾನಗಳು ವ್ಯಕ್ತವಾಗುತ್ತಿವೆ. ಈಗಿನ ಪರಿಸ್ಥಿತಿಗಳನ್ನು ಗಮನಿಸಿದಾಗ ಪ್ರಾಯಶಃ ಮಹಿಳಾ ಮೀಸಲಾತಿಯ ಕಾಯಿದೆ ಅನ್ವಯಿಸುವುದು ಮುಂದಿನ, ಎಂದರೆ, 2029 ರಲ್ಲಿ ನಡೆಯುವ ಚುನಾವಣೆಗಳಿಗೆ ಎನ್ನಿಸುತ್ತಿದೆ.



27 ವರ್ಷಗಳಿಂದ ಮಸೂದೆಗೆ ವ್ಯಕ್ತವಾಗುತ್ತ ಬಂದಿರುವ ವಿರೋಧ ಇಂದು ಇಲ್ಲ ನಿಜ. ಆದರೆ ಈಗ ನಮ್ಮ ಮುಂದಿರುವ ಪ್ರಶ್ನೆ ಎಂದರೆ ಈಗ ನಡೆಯಬೇಕಾಗಿರುವುದು ಎರಡು ಬಗೆಯ ಕ್ಷೇತ್ರ ಪುನರ್ವಿಂಗಡಣೆಗಳು–ಒಂದು ಜನಸಂಖ್ಯೆಯ ಆಧಾರದ ಮೇಲೆ ನಡೆಯುವ ಕ್ಷೇತ್ರಗಳ ಮರು ವಿಂಗಡಣೆ, ಮತ್ತೊಂದು ಮಹಿಳೆಯರಿಗೆ ಮೀಸಲಾಗುವ ಕ್ಷೇತ್ರಗಳ ಗುರುತಿಸುವಿಕೆ ಮತ್ತು ಲಿಂಗಾಧಾರಿತ ಕ್ಷೇತ್ರ ವಿಂಗಡಣೆ. ಇವು ಅಷ್ಟು ಸುಲಭವಾಗಿ ನಡೆಯುವಂಥ ಕೆಲಸಗಳೇ?

ಸಂಸತ್ ಕ್ಷೇತ್ರಗಳ ಪುನರ್ವಿಂಗಡನೆಯಾಗುವುದು ಮುಂದಿನ ಜನಗಣತಿಯ ಮಾಹಿತಿಯ ಆಧಾರದ ಮೇಲೆ. ಮುಂದಿನ ಜನಗಣತಿ ನಡೆಯುವುದು 2026ರ ನಂತರವೇ. ಆದ್ದರಿಂದ ಈ ಜನಗಣತಿಯನ್ನು ಹೊರತುಪಡಿಸಿ ಮಹಿಳಾ ಮೀಸಲಾತಿ ಕಾಯಿದೆಯ ವಿಶ್ಲೇಷಣೆ ಸಾಧ್ಯವಿಲ್ಲ. 2021 ರಲ್ಲಿ ನಡೆಯಬೇಕಾಗಿದ್ದ ಜನಗಣತಿ ಕೋವಿಡ್ ಕಾರಣದಿಂದಾಗಿ ನಡೆಯದಿರುವುದರಿಂದ ಮುಂದಿನ ಜನಗಣತಿ ಯಾವಾಗ ನಡೆಯಲಿದೆ ಎಂಬುದು ಮೊದಲನೆಯ ಪ್ರಶ್ನೆ. ಸಂವಿಧಾನದ 81ನೇ ವಿಧಿಯ ಅನ್ವಯ ರಾಜ್ಯಗಳ ಜನಸಂಖ್ಯೆಯ ಆಧಾರದ ಮೇಲೆ ಸಂಸತ್ ಕ್ಷೇತ್ರಗಳ ನಿಗದಿಯಾಗಬೇಕಾಗಿದ್ದು, ಈ ಪ್ರಕ್ರಿಯೆ ಕೊನೆಯ ಬಾರಿ ನಡೆದಿದ್ದು 1971ರಲ್ಲಿ. ಅಂದಿನಿಂದ ಇಂದಿನವರೆಗೆ 543 ಸದಸ್ಯರನ್ನು ಹೊಂದಿರುವ ಲೋಕಸಭೆಯಲ್ಲಿ, ಅರ್ಧ ಶತಮಾನದ ನಂತರ ನಡೆಯಲಿರುವ ಕ್ಷೇತ್ರ ಪುನರ್ವಿಂಗಡಣೆಯ ಪ್ರಕ್ರಿಯೆಯಲ್ಲಿ ವಿವಿಧ ರಾಜ್ಯಗಳ ಸಂಸತ್ ಕ್ಷೇತ್ರಗಳ ಸಂಖ್ಯೆಯಲ್ಲಿ ಬದಲಾವಣೆಗಳಾಗುವುದು ನಿಸ್ಸಂದೇಹ. ಜನಸಂಖ್ಯಾ ಆಧಾರದ ಮೇಲೆ ಕ್ಷೇತ್ರಗಳ ಮರುಹಂಚಿಕೆ ನಡೆದಾಗ ಲೋಕಸಭೆಯ ಒಟ್ಟು ಸದಸ್ಯರ ಸಂಖ್ಯೆ 846–848 ರಷ್ಟಾಗಬಹುದ ಎಂಬುದು ಒಂದು ಅಂದಾಜು. ಏಕೆಂದರೆ 1971ರಲ್ಲಿ 55 ಕೋಟಿಯಷ್ಟಿದ್ದ ಭಾರತದ ಒಟ್ಟು ಜನಸಂಖ್ಯೆ ಇಂದು 139 ಕೋಟಿಯಾಗಿದೆ. ಈ ಹೆಚ್ಚಳ ಎಲ್ಲ ರಾಜ್ಯಗಳಲ್ಲೂ ಏಕಪ್ರಕಾರವಾಗಿ ಆಗಿಲ್ಲ. ಸಹಜವಾಗಿಯೇ ಸಂಸತ್ತಿನ ಸಂಖ್ಯೆ ಹೆಚ್ಚಾಗುತ್ತದೆ, ಆವಾಗ 186 ಎಂಬ ಸಂಖ್ಯೆ ತನ್ನ ಅರ್ಥವನ್ನು ಕಳೆದುಕೊಳ್ಳುತ್ತದೆ, ಆಗಿನ ಸಂಸತ್ತಿನ ಒಟ್ಟು ಸಂಖ್ಯೆಗೆ ಅನುಗುಣವಾಗಿ ಮಹಿಳಾ ಮೀಸಲಾತಿಯ ಪ್ರಮಾಣ ನಿರ್ಧಾರಿತವಾಗಬೇಕು. ಈ ವಿಷಯದ ಬಗ್ಗೆ ಚರ್ಚೆಗಳಾಗುತ್ತಿವೆಯೇ?

ಮಹಿಳಾ ಮೀಸಲಾತಿಯ ಮಸೂದೆಗೆ 27 ವರ್ಷಗಳ ಇತಿಹಾಸವಿದೆ. ಪ್ರಥಮ ಬಾರಿಗೆ 12 ನೇ ಸೆಪ್ಟೆಂಬರ್ 1996ರಲ್ಲಿ ಮಂಡನೆಯಾದಾಗಿನಿಂದ 2023ರ ಸೆಪ್ಟೆಂಬರ್ 20ರವರೆಗೆ, ಅದಕ್ಕೆ ಸ್ವೀಕೃತಿ ದೊರೆಯಲಿಲ್ಲ, ಏಕೆ ದೊರೆಯಲಿಲ್ಲ ಎಂದರೆ ಇದು ಅಧಿಕಾರದ ಮರುಹಂಚಿಕೆಯ ಪ್ರಶ್ನೆ. ಮಹಿಳೆಯರಿಗೆ ಶೇಕಡಾ 33ರಷ್ಟು ಮೀಸಲಾತಿಯನ್ನು ನೀಡಿದರೆ, ಲಿಂಗಾಧಾರಿತ ಕ್ಷೇತ್ರ ಪುನರ್ವಿಂಗಡಣೆಯಾದರೆ ಅಷ್ಟು ಜನ ಪುರುಷರು ಅಧಿಕಾರವನ್ನು ಕಳೆದುಕೊಳ್ಳುತ್ತಾರೆಂಬ ಭಯವೇ ಈ ಮಸೂದೆಗೆ ಇಷ್ಟೊಂದು ಅಡ್ಡಿಗಳು ಬರಲು ಕಾರಣ. ಆದರೆ ಸಾಮಾಜಿಕ ನ್ಯಾಯ ಸ್ಥಾಪನೆಯಾಗಬೇಕಾದರೆ ಶತಮಾನಗಳಿಂದ ಅಧಿಕಾರ ವಂಚಿತ ವರ್ಗಗಳಿಗೆ ಅಧಿಕಾರ ದೊರೆಯಲೇಬೇಕು.

ಮಹಿಳೆಯರನ್ನು ಮತದಾರರನ್ನಾಗಿ ಒಪ್ಪಿಕೊಳ್ಳಲು ಯಾವ ಹಿಂಜರಿಕೆಯನ್ನೂ ತೋರದ ಪುರುಷ ಪ್ರಧಾನ ರಾಜಕಾರಣ, ಅವರಿಗೆ ನ್ಯಾಯಯುತವಾಗಿ ಸಲ್ಲಬೇಕಾದ ಅಧಿಕಾರದ ಹಕ್ಕನ್ನು ವಂಚಿಸುತ್ತಲೇ ಬಂದಿರುವುದೇಕೆ? ನಮ್ಮ ಸಂವಿಧಾನ 1951ರಲ್ಲಿ ನಡೆದ ಮೊದಲ ಚುನಾವಣೆಯಿಂದಲೇ ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಿದ್ದು ಅನೇಕ ದೇಶಗಳಲ್ಲಿ ಮಹಿಳೆಯರು ಮತದಾನದ ಹಕ್ಕನ್ನು ಪಡೆಯಲು ದೊಡ್ಡ ಹೋರಾಟವನ್ನೇ ನಡೆಸ ಬೇಕಾಯ್ತು. ಆದರೆ ಇಂದಿಗೂ ಅವರ ಪ್ರಾತಿನಿಧ್ಯ ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಶೇಕಡಾ 15 ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಶೇಕಡಾ 10 ಅನ್ನು ದಾಟಿಲ್ಲವೇಕೆ?

ಹೆಚ್ಚು–ಕಡಿಮೆ ಮೂರು ದಶಕಗಳ ನಂತರ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇಕಡಾ 33 ರಷ್ಟು ಮೀಸಲಾತಿಯನ್ನು ನೀಡಲು ಸ್ವೀಕೃತಿ ದೊರೆತಿದ್ದು ರಾಜ್ಯಸಭೆ ಮತ್ತು ರಾಜ್ಯ ವಿಧಾನಪರಿಷತ್ತುಗಳ ಸ್ಥಾನಗಳಿಗೆ ಏಕೆ ಈ ಮೀಸಲಾತಿ ಅನ್ವಯಿಸುತ್ತಿಲ್ಲ? ಈ ಎರಡು ಸಂಸ್ಥೆಗಳೂ ಪ್ರಜಾಸತ್ತಾತ್ಮಕ ನಿರ್ಧಾರಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗಿಗಳಲ್ಲವೇ? ಈ ನಿರ್ಧಾರಕ್ಕೆ ಕಾರಣಗಳೇನು? ಇದು ಕೂಡ ಮುಕ್ತ ಚರ್ಚೆ–ಸಂವಾದಕ್ಕೆ ತೆರೆದುಕೊಳ್ಳಬೇಕಾದ ವಿಚಾರ.

ಇನ್ನು ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ಬರುವುದು ಎಷ್ಟು ಮುಖ್ಯವೋ ಈ ಮೀಸಲಾತಿಯನ್ನು ಜಾತಿ ಮತ್ತು ವರ್ಗಗಳ ಚೌಕಟ್ಟಿನಲ್ಲಿ ವಿಮರ್ಶಿಸಿ, ವಿಶ್ಲೇಷಿಸುವುದೂ ಅಷ್ಟೇ ಮುಖ್ಯ. ಮೀಸಲಾತಿಯಲ್ಲಿ ಒಳ ಮೀಸಲಾತಿಯ ಪ್ರಶ್ನೆಗಳು ಎದ್ದಿರುವುದು ಸಹಜ ಮತ್ತು ಸರಿ, ಏಕೆಂದರೆ ಮಹಿಳೆಯರು ಸಮರೂಪವಾದ ಒಂದು ವರ್ಗವಲ್ಲ. ಈಗ ರಾಜಕಾರಣವನ್ನು ಪ್ರವೇಶಿಸಿರುವ ಬಹುತೇಕ ಮಹಿಳೆಯರು ರಾಜಕೀಯ ಹಿನ್ನೆಲೆಯಿರುವ, ಪ್ರಭಾವಿ, ಪ್ರತಿಷ್ಠಿತ ಕುಟುಂಬಗಳಿಂದಲೇ ಬಂದವರಾಗಿದ್ದು, ಮೀಸಲಾತಿ ಬಂದ ಮಾತ್ರಕ್ಕೆ ಅಧಿಕಾರ ಸಮಾಜದ ಅಂಚಿನಲ್ಲಿರುವ ವರ್ಗಗಳು ಇದರ ಪ್ರಯೋಜನವನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಹೊರನೋಟಕ್ಕೆ 'ಮುಕ್ತ ಪ್ರವೇಶ'ದಂತೆ ಭಾಸವಾಗುವ ಅವಕಾಶಗಳು ಇಂದಿಗೂ ಬಹುಜನರ ಪಾಲಿಗೆ ಗಗನಕುಸುಮಗಳೆ ಆಗಿವೆ. ಆದ್ದರಿಂದಲೇ ಅಧಿಕಾರ ಹಂಚಿಕೆಯ ಪ್ರಕ್ರಿಯೆಯಲ್ಲಿ ಅವರ ಸಾಮಾಜಿಕ–ಆರ್ಥಿಕ ಹಿನ್ನೆಲೆಯನ್ನು ಪರಿಗಣಿಸಲೇಬೇಕು. ಆದ್ದರಿಂದ ಈಗ ರಾಜಕೀಯ ಪಕ್ಷಗಳು ಮತ್ತು ಪ್ರಗತಿಪರ ಚಳವಳಿಗಳು ಎತ್ತುತ್ತಿರುವ ಪ್ರಶ್ನೆಗಳನ್ನು ಗಂಭೀರವಾಗಿ ಪರಿಗಣಿಸಿ, ಪಕ್ಷಾತೀತವಾಗಿ ಎಲ್ಲ ಮಹಿಳೆಯರೂ ಒಟ್ಟಾಗಿ, ಈ ಮಸೂದೆಯನ್ನು ಒಂದು ಅರ್ಥಪೂರ್ಣ ಮಾದರಿಯನ್ನಾಗಿಸಲು ಪ್ರಯತ್ನಿಸಿದರೆ ಮಾತ್ರ ಇಷ್ಟು ವರ್ಷಗಳ ಕಾಲ ಕಾದಿದ್ದು ಸಾರ್ಥಕವಾಗುತ್ತದೆ.

ಲಿಂಗ ಸಮಾನತೆ ನ್ಯಾಯಕ್ಕಾಗಿ ಮಹಿಳಾ ಮೀಸಲಾತಿ ಮಸೂದೆ ಅತ್ಯಂತ ಪರಿವರ್ತಕ ಕ್ರಾಂತಿ

ರಾಷ್ಟ್ರಪತಿ ದ್ರೌಪದಿ ಮುರ್ಮು ಅಭಿಮತ



ನವದೆಹಲಿ, ಸೆ.20– ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಕಲ್ಪಿಸುವ ಮಸೂದೆಯನ್ನು ಸರ್ಕಾರ ಮಂಡಿಸಿದ ಒಂದು ದಿನದ ನಂತರ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಲಿಂಗ ಸಮಾನತೆ ನ್ಯಾಯಕ್ಕಾಗಿ ಇದು ನಮ್ಮ ಕಾಲದಲ್ಲಿ ಅತ್ಯಂತ ಪರಿವರ್ತನೆಯ ಕ್ರಾಂತಿಯಾಗಲಿದೆ ಎಂದು ಬುಧವಾರ ಹೇಳಿದ್ದಾರೆ.

ದೆಹಲಿಯ ವಿಜ್ಞಾನ ಭವನದಲ್ಲಿ ನಡೆದ ಏಷ್ಯಾ ಪೆಸಿಫಿಕ್‌ನ ರಾಷ್ಟ್ರೀಯ ಮಾನವ ಹಕ್ಕುಗಳ ಸಂಸ್ಥೆಗಳ (ಎನ್‌ಎಚ್‌ಆರ್‌ಐ) ದ್ವೈವಾರ್ಷಿಕ ಸಮ್ಮೇಳನವನ್ನು ಉದ್ಘಾಟಿಸಿದ ನಂತರ ಸಭೆಯನ್ನು ಉದ್ದೇಶಿಸಿ ಮುರ್ಮು ಮಾತನಾಡಿದರು. ಈ ವೇಳೆ ಕೇಂದ್ರ ಸರ್ಕಾರ ಮಂಡಿಸಿರುವ ಮಹಿಳಾ ಮೀಸಲಾತಿ ಮಸೂದೆ ಐತಿಹಾಸಿಕ ಕ್ರಮವಾಗಿದ್ದು. ಲಿಂಗ ಸಮಾನತೆಗಾಗಿ ಮಹಿಳಾ ಮೀಸಲಾತಿ ಮಸೂದೆ ಅತ್ಯಂತ ಪರಿವರ್ತಕ ಕ್ರಾಂತಿಯಾಗಿದೆ ಎಂದು ಬಣ್ಣಿಸಿದ್ದಾರೆ.

ನಾವು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮಹಿಳೆಯರಿಗೆ ಕನಿಷ್ಠ ಶೇ.33ರಷ್ಟು ಮೀಸಲಾತಿ ಕಲ್ಪಿಸುವ ಭರವಸೆ ನೀಡಿದ್ದೇವೆ. ಇನ್ನೊಂದು ಸಂತಸದ ಕಾಕತಾಳೀಯ ಸಂಗತಿಯೆಂದರೆ, ರಾಜ್ಯ ವಿಧಾನಸಭೆಗಳು ಮತ್ತು ದೇಶದ ಸಂಸತ್ತಿನಲ್ಲಿ ಮಹಿಳೆಯರಿಗೆ ಇದೇ ರೀತಿಯ ಮೀಸಲಾತಿ ಒದಗಿಸುವ ಪ್ರಸ್ತಾವನೆಯನ್ನು ಈಗ ಮಂಡಿಸಲಾಗಿದೆ. ಇದು ನಮ್ಮ ಕಾಲದ ಲಿಂಗ ನ್ಯಾಯಕ್ಕಾಗಿ ಅತ್ಯಂತ ಪರಿವರ್ತಕ ಕ್ರಾಂತಿಯಾಗಿದೆ ಎಂದು ಹೇಳಿದರು.

ಮಹಿಳಾ ಮೀಸಲಾತಿ ಮಸೂದೆಯಲ್ಲಿ ಒಬಿಸಿ ಕೂಡ ಸೇರಿಸಿ ತಕ್ಷಣ ಜಾರಿಗೊಳಿಸಿ

ನವದೆಹಲಿ, ಸೆ.20– ಮಹಿಳಾ ಮೀಸಲಾತಿ ಮಸೂದೆಯಲ್ಲಿ ಒಬಿಸಿ ಕೂಡ ಸೇರಿಸಬೇಕು ಎಂದು ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಆಗ್ರಹಿಸಿದ್ದಾರೆ. ಮಹಿಳಾ ಮೀಸಲಾತಿ ಮಸೂದೆ ಮೇಲಿನ ಚರ್ಚೆ ವೇಳೆ ಲೋಕಸಭೆಯಲ್ಲಿ ಬುಧವಾರ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಇತರ ಹಿಂದುಳಿದ ವರ್ಗಗಳಿಗೆ ಮೀಸ ಲಾತಿ ಕಲ್ಪಿಸಿ, ಮಸೂದೆಯನ್ನು ತಕ್ಷಣ ಜಾರಿಗೊಳಿಸಬೇಕೆಂದು ಒತ್ತಾಯಿಸಿದ್ದಾರೆ. ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರು ರಾಜಕೀಯ ಕೋನಕ್ಕಾಗಿ ಹೊಸ ವಿಷಯಗಳನ್ನು ಹೇಳುತ್ತಿದ್ದಾರೆ. ಮಹಿಳಾ ಶಾಸಕರಿಗೆ ಮೀಸಲಾತಿಯಲ್ಲಿ ಓಬಿಸಿ ಕೋಟಾದ ಬಗ್ಗೆ ಎಂದಿಗೂ ಮಾತನಾಡಿಲ್ಲ ಎಂದು ಆರೋಪಿಸಿದರು. ತಮ್ಮ ಪತಿ ರಾಜೀವ್ ಗಾಂಧಿ ಅವರು ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ಜಾರಿಗೆ ತಂದಿದ್ದರಿಂದ ಮಸೂದೆ ಕುರಿತು ಮಾತನಾಡುವುದು ನನಗೆ ಭಾವನಾತ್ಮಕ ಕ್ಷಣವಾಗಿದೆ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪರವಾಗಿ, ನಾನು ಇಲ್ಲಿ ನಾರಿ ಶಕ್ತಿ ವಂದನ್ ಅಧಿನಿಯಮ್ ಅನ್ನು ಬೆಂಬಲಿಸುತ್ತೇನೆ. ಹೊಗೆಯಿಂದ ತುಂಬಿದ ಅಡುಗೆಮನೆಯಿಂದ ಫ್ಲಡ್–ಲೈಟ್ ಸ್ಟೇಡಿಯಂಗಳವರೆಗೆ, ಭಾರತೀಯ ಮಹಿಳೆಯ ಪ್ರಯಾಣವು ಸುದೀರ್ಘವಾಗಿದೆ. ಆದರೆ ಅವಳು ಅಂತಿಮವಾಗಿ ತನ್ನ ಗಮ್ಯಸ್ಥಾನವನ್ನು ತಲುಪಿದ್ದಾಳೆ ಎಂದು ಹೇಳಿದರು.



ಐಸಿಸಿ ರ್‍ಯಾಂಕಿಂಗ್: ಏಷ್ಯಾ ಕಪ್ ನಂತರ ವಿಶ್ವದ ನಂ.1 ಸ್ಥಾನಕ್ಕೇರಿದ ಮೊಹಮ್ಮದ್ ಸಿರಾಜ್



ದುಬೈ, ಸೆ.20– ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ(ಐಸಿಸಿ) ಬುಧವಾರ ಏಕದಿನ ಬೌಲಿಂಗ್ ರ್‍ಯಾಂಕಿಂಗ್ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಏಷ್ಯಾಕಪ್ ಫೈನಲ್‌ನಲ್ಲಿ ಅದ್ಭುತ ಪ್ರದರ್ಶನ ನೀಡಿದ ಮೊಹಮ್ಮದ್ ಸಿರಾಜ್ ಅವರು ಮತ್ತೆ ವಿಶ್ವದ ನಂಬರ್ 1 ಸ್ಥಾನಕ್ಕೇರಿದ್ದಾರೆ.

ಏಷ್ಯಾಕಪ್ ಫೈನಲ್‌ನಲ್ಲಿ ಶ್ರೀಲಂಕಾ ವಿರುದ್ಧ 7 ಓವರ್‌ಗಳಲ್ಲಿ 21 ರನ್ ನೀಡಿ 6 ವಿಕೆಟ್ ಕಬಳಿಸಿದ್ದ ಮೊಹಮ್ಮದ್ ಸಿರಾಜ್ ಅವರು 694 ಅಂಕಗಳೊಂದಿಗೆ ಐಸಿಸಿ ಬೌಲರ್‌ಗಳ ಶ್ರೇಯಾಂಕ ಪಟ್ಟಿಯಲ್ಲಿ 8 ಸ್ಥಾನ ಮೇಲೇರಿದ್ದಾರೆ. ಅಂದರೆ ಕಳೆದ ಬಾರಿಯ ಶ್ರೇಯಾಂಕ ಪಟ್ಟಿಯಲ್ಲಿ ಮೊಹಮ್ಮದ್ ಸಿರಾಜ್ 9ನೇ ಸ್ಥಾನದಲ್ಲಿದ್ದರು. ಇದೀಗ ಏಕಾಏಕಿ ಮೇಲೇರಿ ಅಗ್ರಸ್ಥಾನಕ್ಕೆ ತಲುಪಿರುವುದು ವಿಶೇಷ. ಈ ಹಿಂದೆ ಅಗ್ರಸ್ಥಾನದಲ್ಲಿದ್ದ ಆಸ್ಟ್ರೇಲಿಯಾ ವೇಗಿ ಜೋಶ್ ಹ್ಯಾಝಲ್‌ವುಡ್ ಅವರು ಈ ಬಾರಿ ಒಟ್ಟು 678 ಅಂಕಗಳೊಂದಿಗೆ ದ್ವಿತೀಯ ಸ್ಥಾನಕ್ಕೆ ಕುಸಿದಿದ್ದಾರೆ. ಕಿವೀಸ್ ವೇಗಿ ಟ್ರೆಂಟ್ ಬೌಲ್ಟ್ ಈ ಬಾರಿ ಒಂದು ಸ್ಥಾನ ಕುಸಿತ ಕಂಡಿದ್ದು, ಒಟ್ಟು 677 ಅಂಕಗಳೊಂದಿಗೆ ಮೂರನೇ ಸ್ಥಾನದಲ್ಲಿದ್ದಾರೆ. ಅಫ್ಘಾನಿಸ್ತಾನದ ಸ್ಪಿನ್ನರ್ ಮುಜೀಬ್ ಉರ್ ರೆಹಮಾನ್ ಅವರು 657 ಅಂಕಗಳೊಂದಿಗೆ ನಾಲ್ಕನೇ ಸ್ಥಾನ ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಇನ್ನು ಅಫ್ಘಾನಿಸ್ತಾನದ ಸ್ಪಿನ್ ಮಾಂತ್ರಿಕ ರಶೀದ್ ಖಾನ್ ಅವರು 655 ಅಂಕಗಳೊಂದಿಗೆ 5ನೇ ಸ್ಥಾನ ಅಲಂಕರಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ದಸರಾ ಮುನ್ನೋಟ...

ಜಂಬೂಸವಾರಿಯಲ್ಲಿ ಪಾಲ್ಗೊಳ್ಳುವ ಜಾನಪದ ಕಲಾವಿದರಿಗೆ ತಲಾ 5 ಸಾವಿರ ಗೌರವಧನಕ್ಕೆ ಆಗ್ರಹ



ಮೈಸೂರು,ಸೆ.20(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವ ಪ್ರಮುಖ ಆಕರ್ಷಣೆ ಜಂಬೂಸವಾರಿ ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬ ಜಾನಪದ ಕಲಾವಿದರಿಗೆ ತಲಾ 5 ಸಾವಿರ ರೂ. ಗೌರವ ಸಂಭಾವನೆ ನೀಡುವಂತೆ ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲಾ ಜಾನಪದ ಕಲಾವಿದರ ಸಂಘದ ಅಧ್ಯಕ್ಷ ಎಲ್. ಮಹದೇವಪ್ಪ ಉಡಿಗಾಲ ಒತ್ತಾಯಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಂಬೂಸವಾರಿ ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಕಲಾವಿದರಿಗೆ ಇದುವರೆಗೂ ನೀಡುತ್ತಿರುವ ಗೌರವ ಸಂಭಾವನೆ ತೀರಾ ಕಡಿಮೆಯಾಗಿದೆ. ಜಂಬೂಸವಾರಿ ಮಾರ್ಗದುದ್ದಕ್ಕೂ ಎರಡೂ ಬದಿಯಲ್ಲಿ ಸೇರುವ ಅಪಾರ ಸಂಖ್ಯೆಯ ಜನರನ್ನು ರಂಜಿಸುವ ಕಲಾವಿದರಿಗೆ ಸೂಕ್ತ ಮನ್ನಣೆ ಸಿಗುತ್ತಿಲ್ಲ. ಅರಮನೆಯಿಂದ ಬನ್ನಿಮಂಟಪದವರೆಗೆ ನಡೆದುಕೊಂಡು ಹೋಗುವ ಕಲಾವಿದರಿಗೆ ಕೇವಲ 1500 ರೂ. ನೀಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಈ ಬಾರಿ ಜಂಬೂಸವಾರಿ ಮೆರವಣಿಗೆಯಲ್ಲಿ ಸಾಗುವ ಕಲಾವಿದರಿಗೆ ತಲಾ 5 ಸಾವಿರ ರೂ. ಗೌರವ ಸಂಭಾವನೆ ನೀಡಲು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಮೆರವಣಿಗೆಯಲ್ಲಿ ಬನ್ನಿಮಂಟಪ ತಲುಪಿದ ಬಳಿಕ ಕಲಾವಿದರನ್ನು ಕೇಳುವವರೇ ಇಲ್ಲದಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಬನ್ನಿಮಂಟಪದಿಂದ ಹಿಂದಿರುಗಲು ಲಾರಿ ಅಥವಾ ಯಾವುದಾದರೂ ವಾಹನ ವ್ಯವಸ್ಥೆ ಮಾಡಬೇಕು. ಶೌಚಾಲಯ ಸೇರಿದಂತೆ ಅಗತ್ಯ ಮೂಲ ಸೌಲಭ್ಯವಿರುವ ವಸತಿ ವ್ಯವಸ್ಥೆ ಕಲ್ಪಿಸಬೇಕು. ಈ ಕುರಿತು ತಾವು ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿ, ಪೊಲೀಸ್ ಆಯುಕ್ತರಿಗೆ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ. ಈ ವರ್ಷವಾದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಕಲಾವಿದರ ಹಿತ ಕಾಯಲು ಸೂಚನೆ ನೀಡಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಕಲಾವಿದರಾದ ಕಿರಾಳು ಮಹೇಶ್, ರೇವಣ್ಣ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಅ.16ರಿಂದ 22ರವರೆಗೆ ದಸರಾ ಚಲನಚಿತ್ರೋತ್ಸವ

ಮಾಲ್ ಆಫ್ ಮೈಸೂರ್‌ನ ಐನಾಕ್ಸ್‌ಗೆ ದಸರಾ ಚಲನಚಿತ್ರೋತ್ಸವ ಉಪ ಸಮಿತಿ ಭೇಟಿ; ಸ್ಥಳ ಪರಿಶೀಲನೆ



ಮೈಸೂರು.ಸೆ.20– 2023ರ ದಸರಾ ಚಲನಚಿತ್ರೋತ್ಸವವನ್ನು ಅ.16ರಿಂದ 22ರವರೆಗೆ ನಗರದ ಮಾಲ್ ಆಫ್ ಮೈಸೂರಿನಲ್ಲಿರುವ ಐನಾಕ್ಸ್‌ನಲ್ಲಿ ಹಮ್ಮಿಕೊಳ್ಳಲಾಗಿದೆ. ಇಂದು ಸದರಿ ಸ್ಥಳಕ್ಕೆ ದಸರಾ ಚಲನಚಿತ್ರೋತ್ಸವ ಉಪ ಸಮಿತಿಯ ಅಧಿಕಾರಿಗಳು ಭೇಟಿ ನೀಡಿ, ಸ್ಥಳ ಪರಿಶೀಲನೆ ನಡೆಸಿ, ಐನಾಕ್ಸ್ ಮ್ಯಾನೇಜ್‌ಮೆಂಟ್ ಜೊತೆ ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ಐನಾಕ್ಸ್ ಚಿತ್ರಮಂದಿರದಲ್ಲಿ ಆಸನಗಳ ವ್ಯವಸ್ಥೆ, ಚಲನಚಿತ್ರಗಳ ವೇಳಾಪಟ್ಟಿ ಹಾಗೂ ಟಿಕೆಟ್ ವಿತರಣೆ ಸಂಬಂಧ ಹೊಸ ಸಾಫ್ಟ್‌ವೇರ್ ಆ್ಯಪ್ ಅನ್ನು ಅಭಿವೃದ್ಧಿಪಡಿಸಿ ಸಿನಿಮಾ ಪ್ರಿಯರನ್ನು ಆಕರ್ಷಿಸಲು ಆನ್‌ಲೈನ್ ಟಿಕೆಟ್ ವ್ಯವಸ್ಥೆ ಹಾಗೂ ಅಗತ್ಯ ಸಿದ್ಧತೆಗಳ ಪರಿಶೀಲಿಸಲಾಯಿತು. ಈ ವೇಳೆ ದಸರಾ ಚಲನಚಿತ್ರೋತ್ಸವ ಉಪವಿಶೇಷಾಧಿಕಾರಿ ಹಾಗೂ ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಸವಿತಾ ಎಂ.ಕೆ, ಸಮಿತಿ ಕಾರ್ಯಾಧ್ಯಕ್ಷರು ಹಾಗೂ ಕೆಐಎಡಿಬಿ ವಿಶೇಷ ಭೂಸ್ವಾಧೀನಾಧಿಕಾರಿ ವಿ.ಪ್ರಿಯದರ್ಶಿನಿ, ಕಾರ್ಯದರ್ಶಿ ಹಾಗೂ ವಾರ್ತಾ ಇಲಾಖೆ ಉಪನಿರ್ದೇಶಕ ಅಶೋಕ್‌ಕುಮಾರ್, ಸಹ ಕಾರ್ಯದರ್ಶಿ ಹಾಗೂ ವಾರ್ತಾ ಇಲಾಖೆ ಸಹಾಯಕ ನಿರ್ದೇಶಕ ಹರೀಶ್ ಟಿ.ಕೆ., ಐನಾಕ್ಸ್ ಚಿತ್ರ ಮಂದಿರದ ಮ್ಯಾನೇಜರ್ ನಿಖಿಲ್ ಹಾಗೂ ಶ್ರೇಯಸ್ ಉಪಸ್ಥಿತರಿದ್ದರು.

ನಾಳೆಯಿಂದ ತಾಲೂಕು ಮಟ್ಟದ ದಸರಾ ಕ್ರೀಡಾಕೂಟ



ಮೈಸೂರು.ಸೆ.20–ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ವತಿಯಿಂದ 2023–24ನೇ ಸಾಲಿನ ಜಿಲ್ಲೆಯ ನಂಜನಗೂಡು, ಹೆಚ್.ಡಿ.ಕೋಟೆ, ಮೈಸೂರು, ಸರಗೂರು, ಕೆ.ಆರ್.ನಗರ, ಮತ್ತು ಸಾಲಿಗ್ರಾಮ ತಾಲೂಕುಗಳಲ್ಲಿ ತಾಲೂಕು ಮಟ್ಟದ ದಸರಾ ಕ್ರೀಡಾ ಕೂಟವನ್ನು ಏರ್ಪಡಿಸಲಾಗಿದೆ.

ತಾಲೂಕು ಮಟ್ಟದ ದಸರಾ ಕ್ರೀಡಾ ಕೂಟವನ್ನು ನಂಜನಗೂಡು ತಾಲೂಕಿನಲ್ಲಿ ಸೆ22ರಂದು ನಂಜನಗೂಡು ತಾಲೂಕು ಕ್ರೀಡಾಂಗಣದಲ್ಲಿ ನಡೆಯಲಿದ್ದು, ಮೈಸೂರು ತಾಲೂಕಿನಲ್ಲಿ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆಯಲಿದೆ.

ಸೆ.23ರಂದು ಸರಗೂರು ತಾಲೂಕಿನಲ್ಲಿ ಬಾಲ್ ಫೀಲ್ಡ್ ಮೈದಾನ ಮತ್ತು ಲಯನ್ ಸ್ಕೂಲ್ ಆವರಣದಲ್ಲಿ ಹಾಗೂ ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಸೆ.25 ರಂದು ತಾಲೂಕು ಕ್ರೀಡಾಂಗಣದಲ್ಲಿ ನಡೆಯಲಿದೆ.

ಸೆ.25ರಂದು ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆಯ ಜೆಎಸ್‌ಎಸ್ ವಿದ್ಯಾ ಸಂಸ್ಥೆ ಆವರಣದಲ್ಲಿ ನಡೆಯಲಿದ್ದು, ಕೆಆರ್ ನಗರ ತಾಲೂಕಿನಲ್ಲಿ ಸೆ.26ರಂದು ಕೆ.ಆರ್ ನಗರ ತಾಲೂಕು ಕ್ರೀಡಾಂಗಣದಲ್ಲಿ ನಡೆಯಲಿದೆ. ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಚಾಮುಂಡಿ ವಿಹಾರ ಕ್ರೀಡಾಂಗಣ, ನಜರ್‌ಬಾದ್ ಇಲ್ಲಿನ ದೂ. ಸಂಖ್ಯೆ: 0821–2564179 ಸಂಪರ್ಕಿಸಬಹುದು.

ಸೆ.25ರಂದು ಹುಣಸೂರು ತಾಲೂಕು ಮಟ್ಟದ ದಸರಾ ಕ್ರೀಡಾಕೂಟ

2023–24ನೇ ಸಾಲಿನ ಹುಣಸೂರು ತಾಲೂಕು ಮಟ್ಟದ ದಸರಾ ಕ್ರೀಡಾ ಕೂಟವನ್ನು ಸೆ.25ರಂದು ಹುಣಸೂರು ಪಟ್ಟಣದ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಪುರುಷ ವಿಭಾಗದ ಅಥ್ಲೆಟಿಕ್ಸ್‌ನಲ್ಲಿ 100 ಮೀ., 200 ಮೀ., 400 ಮೀ., 800 ಮೀ., 1500 ಮೀ., 5000 ಮೀ., 10,000 ಮೀ. ಓಟ ಹಾಗೂ ಉದ್ದ ಜಿಗಿತ, ಎತ್ತರ ಜಿಗಿತ, ಟ್ರಿಪಲ್ ಜಂಪ್, ಗುಂಡು ಎಸೆತ, ಜಾವಲಿನ್ ಥ್ರೋ, ಡಿಸ್ಕಸ್ ಥ್ರೋ, 110 ಮೀ. ಹರ್ಡಲ್ಸ್, 4X100 ಮೀ. ಹಾಗೂ 4X400 ಮೀ. ರಿಲೇ ಸ್ಪರ್ಧೆಗಳು ನಡೆಯಲಿವೆ.

ಮಹಿಳಾ ವಿಭಾಗದ ಅಥ್ಲೆಟಿಕ್ಸ್‌ನಲ್ಲಿ 100 ಮೀ., 200 ಮೀ., 400 ಮೀ., 800 ಮೀ., 1500 ಮೀ., 3000 ಮೀ. ಓಟ ಹಾಗೂ ಉದ್ದ ಜಿಗಿತ, ಎತ್ತರ ಜಿಗಿತ, ಟ್ರಿಪಲ್ ಜಂಪ್, ಗುಂಡು ಎಸೆತ, ಜಾವಲಿನ್ ಥ್ರೋ, ಡಿಸ್ಕಸ್ ಥ್ರೋ, 100 ಮೀ. ಹರ್ಡಲ್ಸ್, 4X100 ಮೀ. ಹಾಗೂ 4X400 ಮೀ. ರಿಲೇ ಸ್ಪರ್ಧೆಗಳು ನಡೆಯಲಿವೆ. ಇದಲ್ಲದೆ, ಗುಂಪು ಆಟಗಳಾದ ವಾಲಿಬಾಲ್, ಫುಟ್‌ಬಾಲ್, ಖೋ–ಖೋ, ಥ್ರೋಬಾಲ್, ಕಬಡ್ಡಿ ಹಾಗೂ ಯೋಗ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಆಸಕ್ತ ಅರ್ಹ ಕ್ರೀಡಾಪಟುಗಳು ಸೆ.25ರ ಬೆಳಗ್ಗೆ 9 ಗಂಟೆಯೊಳಗೆ ಕ್ರೀಡಾ ಸಂಘಟನೆಯ ವ್ಯವಸ್ಥಾಪಕರಲ್ಲಿ ವರದಿ ಮಾಡಿಕೊಳ್ಳಬೇಕು. ವಿವರಗಳಿಗೆ ಹುಣಸೂರು ತಾಲೂಕು ಮಟ್ಟದ ದಸರಾ ಕ್ರೀಡಾಕೂಟ ಸಂಚಾಲಕ ಬಿ.ಲೋಕೇಶ್ (ಮೊ.ಸಂ–9449175644) ಅವರನ್ನು ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಟೆಂಪೋ ಟ್ರಾವೆಲರ್ ಹರಿದು ಬೈಕ್ ಸವಾರ ಸಾವು

ಬನ್ನಿಮಂಟಪದ ಜೋಡಿ ತೆಂಗಿನಮರ ರಸ್ತೆಯಲ್ಲಿ ದುರ್ಘಟನೆ

ಮೈಸೂರು, ಸೆ.20(ಆರ್‌ಕೆ)–ಟೆಂಪೋ ಟ್ರಾವೆಲರ್ ವಾಹನವೊಂದು ಹರಿದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಬನ್ನಿಮಂಟಪ ಕೈಗಾರಿಕಾ ಪ್ರದೇಶದ ಜೋಡಿ ತೆಂಗಿನಮರ ರಸ್ತೆಯಲ್ಲಿ ಮಂಗಳವಾರ ಸಂಜೆ ಸಂಭವಿಸಿದೆ. ಬನ್ನಿಮಂಟಪದ ಅಲೀಂನಗರ ನಿವಾಸಿ ವರದಶೆಟ್ಟಿ(24) ಸಾವನ್ನಪ್ಪಿದ ಯುವಕ. ಪೇಂಟಿಂಗ್ ಕೆಲಸ ಮಾಡುತ್ತಿದ್ದ ಅವರು ಬಜಾಜ್ ಪಲ್ಸರ್ ಬೈಕಿನಲ್ಲಿ ಹೈವೇ ಸರ್ಕಲ್ ಕಡೆಯಿಂದ ಶ್ರೀನಿವಾಸ ಟಾಕೀಸ್ ಕಡೆಗೆ ಹೋಗುತ್ತಿದ್ದಾಗ, ಟೆಂಪೋ ಟ್ರಾವೆಲರ್ ವಾಹನ ಹಿಂದಿಕ್ಕಲೆತ್ನಿಸಿದಾಗ ನಿಯಂತ್ರಣ ತಪ್ಪಿ ಬಿದ್ದ ಬೈಕ್ ಸವಾರ ವರದರಾಜ ಶೆಟ್ಟಿ ಮೇಲೆ ಟೆಂಪೋ ಟ್ರಾವೆಲರ್ ಹರಿಯಿತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ವಿಷಯ ತಿಳಿಯುತ್ತಿದ್ದಂತೆಯೇ ಎನ್.ಆರ್. ಸಂಚಾರ ಠಾಣೆ ಪೊಲೀಸರು ಘಟನಾ ಸ್ಥಳಕ್ಕೆ ಧಾವಿಸಿ ಮಹಜರು ನಡೆಸಿದರು. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗೆ ಸ್ಥಳಾಂತರಿಸಿ ವೈದ್ಯಕೀಯ ಪರೀಕ್ಷೆ ನಂತರ ದೇಹವನ್ನು ವಾರಸುದಾರರಿಗೆ ಒಪ್ಪಿಸಲಾಗಿದೆ.

ಸಂಸತ್ತು ಚರ್ಚೆಗೆ ಬಳಕೆಯಾಗಬೇಕೇ ಹೊರತು ಪ್ರತಿಭಟನೆಗಳಿಗಲ್ಲ

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಕಿವಿಮಾತು



ಬೆಂಗಳೂರು: ಸಂಸತ್ತನ್ನು ಚರ್ಚೆಗೆ ಬಳಸಿಕೊಳ್ಳಬೇಕೇ ಹೊರತು ಪ್ರತಿಭಟನೆಗಳಿಗೆ ವೇದಿಕೆಯಾಗಿ ಅಲ್ಲ ಎಂದು ಮಾಜಿ ಪ್ರಧಾನಿ, ರಾಜ್ಯಸಭಾ ಸದಸ್ಯ ಎಚ್‌ಡಿ ದೇವೇಗೌಡ ಹೇಳಿದರು.

ಹಳೆ ಸಂಸತ್ ಭವನದಿಂದ ಹೊಸ ಸಂಸತ್ ಭವನಕ್ಕೆ ತೆರಳುವಾಗ ಮಾತನಾಡಿದ ಅವರು, ಹಳೆಯ ಕಟ್ಟಡದ ಹಲವು ನೆನಪುಗಳನ್ನು ಹೊಸ ಕಟ್ಟಡಕ್ಕೆ ಕೊಂಡೊಯ್ಯುತ್ತಿದ್ದೇವೆ. ಪ್ರಜಾಪ್ರಭುತ್ವದ ಮಹಾನ್ ಚೈತನ್ಯವನ್ನು ಹೊಸ ಕಟ್ಟಡಕ್ಕೆ ಕೊಂಡೊಯ್ಯಲಾಗುತ್ತಿದೆ ಎಂದರು.

ಮಹಿಳಾ ಮೀಸಲಾತಿ ಮಸೂದೆಗೆ ಶಾಸಕಾಂಗ ರೂಪ ನೀಡುವುದು ಮತ್ತು ಲೋಕಸಭೆಯಲ್ಲಿ ಮಂಡಿಸುವುದು, ಸುದೀರ್ಘ ಅಂತರದ ನಂತರ ಕಾಶ್ಮೀರದಲ್ಲಿ ಚುನಾವಣೆ ನಡೆಸುವುದು, ಈಶಾನ್ಯದತ್ತ ಗಮನ ಹರಿಸುವುದು ಮತ್ತು ನೀರಿನ ಒಪ್ಪಂದಗಳು, ಜಲ ಸಂಪನ್ಮೂಲಗಳು ಮತ್ತು ರಾಷ್ಟ್ರದ ನೀರಾವರಿ ಅಗತ್ಯಗಳತ್ತ ನೋಡುವುದು ಸೇರಿದಂತೆ ಹಲವು ವಿಷಯಗಳ ಮೇಲೆ ಕೇಂದ್ರೀಕರಿಸಲು ದೇವರು ನನಗೆ ಸಹಾಯ ಮಾಡಿದ್ದಾನೆ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹೇಳಿದರು.

ಹೊಸ ಸಂಸತ್ತಿನ ಕಟ್ಟಡವು ಎರಡು ಸದನಗಳ ಕೊಠಡಿಗಳಲ್ಲಿ ಹೆಚ್ಚುವರಿ ಆಸನಗಳನ್ನು ಹೊಂದಿದೆ ಮತ್ತು ಮುಂದಿನ ದಿನಗಳಲ್ಲಿ ಭಾರತವನ್ನು ಉತ್ತಮವಾಗಿ ಪ್ರತಿನಿಧಿಸುತ್ತದೆ ಎಂದು ಅವರು ಹೇಳಿದರು.

ಸಂಸತ್ತಿನ ಅತ್ಯಂತ ಹಿರಿಯ ಸದಸ್ಯರಲ್ಲಿ ಒಬ್ಬರಾಗಿ, ಸಂಸತ್ತಿನ ತಮ್ಮ ಕಿರಿಯ ಸಹೋದ್ಯೋಗಿಗಳಿಗೆ ಹೇಳಲು ಬಯಸುವುದೇನೆಂದರೆ, ಸಂಸತ್ತನ್ನು ಚರ್ಚೆಗೆ ಬಳಸಿಕೊಳ್ಳಬೇಕೇ ಹೊರತು ಪ್ರತಿಭಟನೆಗಳಿಗೆ ವೇದಿಕೆಯಾಗಿ ಅಲ್ಲ. ನನ್ನ ಸಂಪೂರ್ಣ ಶಾಸಕಾಂಗದ ವೃತ್ತಿ ಜೀವನದಲ್ಲಿ, ನಾನು ಕೇವಲ ಒಂದು ಕ್ಷಣ ಮಾತ್ರ ಸದನದ ಬಾವಿಗೆ ಹೋಗಿದ್ದೆ ಮತ್ತು ಆ ನಿರ್ಧಾರಕ್ಕೆ ನಾನು ವಿಷಾದಿಸುತ್ತೇನೆ ಎಂದು ಹೇಳಿದರು. ದೊಡ್ಡ ರಾಷ್ಟ್ರೀಯ ಪಕ್ಷಗಳು ಸಣ್ಣ, ಪ್ರಾದೇಶಿಕ ಪಕ್ಷಗಳು ಮತ್ತು ಸ್ವತಂತ್ರ ಸದಸ್ಯರ ಕೊಡುಗೆಯನ್ನು ಅರಿತುಕೊಳ್ಳಬೇಕು ಮತ್ತು ಒಪ್ಪಿಕೊಳ್ಳಬೇಕು. ಶಾಸಕನಾಗಿ ಅರವತ್ತು ವರ್ಷಗಳಿದ್ದರೂ, ಕೇವಲ ಆರರಿಂದ ಏಳು ವರ್ಷಗಳ ಕಾಲ ಮಾತ್ರ ನಾನು ಅಧಿಕಾರದಲ್ಲಿದ್ದೇನೆ. ಪ್ರಾದೇಶಿಕ ಪಕ್ಷಗಳು ಮತ್ತು ವಿರೋಧ ಪಕ್ಷಗಳು ನಮ್ಮ ಪ್ರಜಾಪ್ರಭುತ್ವದ ಚೈತನ್ಯಕ್ಕೆ ಹೆಚ್ಚಿನ ಕೊಡುಗೆ ನೀಡಿವೆ. ನಾನು 1996 ರಲ್ಲಿ 13 ಪಕ್ಷಗಳ ದೊಡ್ಡ ಸಮ್ಮಿಶ್ರ ಸರ್ಕಾರವನ್ನು ಮುನ್ನಡೆಸಿದ್ದೇನೆ ಮತ್ತು ಅದು ಬಹುತೇಕ ಪ್ರಾದೇಶಿಕ ಪಕ್ಷಗಳಿಂದ ಕೂಡಿತ್ತು ಮತ್ತು ನಾವು ಕೆಟ್ಟದ್ದನ್ನು ಮಾಡಲಿಲ್ಲ ಎಂದು ಅವರು ಹೇಳಿದರು.

ಸಂಕಷ್ಟ ಸೂತ್ರವೇ ಇಲ್ಲ ಎಂದ ಮೇಲೆ ನೀರು ಬಿಟ್ಟಿದ್ದೇಕೆ? ನಿಯಂತ್ರಣ ಸಮಿತಿಯವರು ದೇವಲೋಕದಿಂದ ಇಳಿದು ಬಂದಿದ್ದಾರೆಯೇ



ಚನ್ನಪಟ್ಟಣ: ಕಾವೇರಿ ನೀರು ಹಂಚಿಕೆಯ ಬಗ್ಗೆ ಸಂಕಷ್ಟ ಸೂತ್ರವೇ ಇಲ್ಲದಿರುವಾಗ, ನೀರಿಲ್ಲದ ಈ ಹೊತ್ತಿನಲ್ಲಿ ತಮಿಳುನಾಡಿಗೆ ನೀರು ಬಿಟ್ಟಿದ್ದು ತಪ್ಪು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಚನ್ನಪಟ್ಟಣದಲ್ಲಿ ಮಾಧ್ಯಮಗಳ ಜತೆ ಮಾತನಾಡಿದ ಅವರು, ಕಾವೇರಿ ನೀರು ಹಂಚಿಕೆ ಬಗ್ಗೆ ಸಂಕಷ್ಟ ಸೂತ್ರವೇ ಇಲ್ಲದಿರುವಾಗ ರಾಜ್ಯದ ಜನತೆಗೇ ನೀರಿಲ್ಲದ ಈ ಹೊತ್ತಿನಲ್ಲಿ ತಮಿಳುನಾಡಿಗೆ ನೀರು ಬಿಟ್ಟಿದ್ದು ತಪ್ಪು ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಜತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಗೆ ಹೋಗಿದ್ದು ಯಾಕೆ? ಸಂಸದರಿಗೆ ಭಾಷಣ ಮಾಡಲಿಕ್ಕಾ ಎಂದು ಪ್ರಶ್ನಿಸಿದರು.

ಸಂಕಷ್ಟ ಸೂತ್ರವನ್ನು ರೂಪಿಸಬೇಕಾದವರು ಯಾರು? ಅದಕ್ಕೆ ರಾಜ್ಯ ಏನು ಮಾಡಬೇಕು ಎಂದು ಆಲೋಚನೆ ಮಾಡದೆ ಹೇಳಿಕೆಗಳನ್ನು ಕೊಡುತ್ತಿದ್ದರೆ ಉಪಯೋಗ ಏನು? ಸಂಕಷ್ಟ ಸೂತ್ರ ರಚನೆಗೆ ಇಷ್ಟು ಹೊತ್ತಿಗೆ ರಾಜ್ಯ ದೊಡ್ಡ ಮಟ್ಟದಲ್ಲಿ ಹೋರಾಟ ನಡೆಸಬೇಕಿತ್ತು. ಅದಕ್ಕೆ ನಾವು ಮಾಡಿದ್ದೇವೆ. ಆ ಬಗ್ಗೆ ಸರಕಾರ ಚಿಂತನೆ ಮಾಡಬೇಕು, ಅಲ್ಲವೇ? ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾವೇರಿ ನೀರು ನಿರ್ವಹಣಾ ಸಮಿತಿ ಹಾಗೂ ನಿಯಂತ್ರಣ ಸಮಿತಿಯವರು ದೇವಲೋಕದಿಂದ ಇಳಿದು ಬಂದಿದ್ದಾರೆಯೇ? ಅವರು ನಾವು ನೇಮಕ ಮಾಡಿಕೊಂಡ ಸದಸ್ಯರೆಲ್ಲವೇ? ಈಗ ನೋಡಿದರೆ ನಮ್ಮ ರಾಜ್ಯದ ಜನರ ಮೇಲೆ ಸವಾರಿ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು. ಕಾವೇರಿ ವಿಷಯದಲ್ಲಿ ಏನೆಲ್ಲಾ ನಡೆದಿದೆ ಎನ್ನುವುದು ಎಲ್ಲರಿಗೂ ಗೊತ್ತು. ಅದೆಲ್ಲಾ ಗೊತ್ತಿದ್ದರೂ ಸಭೆಯಲ್ಲಿ ಭಾಷಣ ಮಾಡಲಿಕ್ಕೆ ರಾತ್ರೋರಾತ್ರಿ ತರಾತುರಿಯಲ್ಲಿ ಇವರೆಲ್ಲ ದೆಹಲಿಗೆ ಹೋಗಬೇಕಿತ್ತಾ. ಸುಪ್ರೀಂಕೋರ್ಟ್ ಮುಂದೆ ಅರ್ಜಿ ಹಾಕಿ, ರಾಜ್ಯ ವಾಸ್ತವ ಪರಿಸ್ಥಿತಿಯನ್ನು ವಿವರಿಸುವುದು ಬಿಟ್ಟು, ಆ ನಿಟ್ಟಿನಲ್ಲಿ ತುರ್ತು ಕ್ರಮ ಕೈಗೊಳ್ಳುವುದು ಬಿಟ್ಟು, ಅರ್ಜಿ ಸಲ್ಲಿಸುವುದಕ್ಕೆ ಆಲೋಚನೆ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಇನ್ನೊಂದೆಡೆ ತಮಿಳುನಾಡಿಗೆ ನೀರು ಹರಿದು ಹೋಗುತ್ತಿದೆ. ಅಣೆಕಟ್ಟೆಯಲ್ಲಿ ನೀರೆಲ್ಲ ಖಾಲಿಯಾದ ಮೇಲೆ ಇವರು ಕ್ರಮ ಕೈಗೊಳ್ಳುತ್ತಾರೆಯೇ? ಎಂದು ಅವರು ಖಾರವಾಗಿ ಪ್ರಶ್ನಿಸಿದರು. ನೀರಾವರಿ ಬಗ್ಗೆ ಇವರಿಗೆ ತಿಳಿವಳಿಕೆ ಇಲ್ಲದಿದ್ದರೆ ಕೊನೆಪಕ್ಷ ಈ ಬಗ್ಗೆ ಗೊತ್ತಿರುವವರ ಸಲಹೆಯನ್ನಾದರೂ ಪಡೆದು ಹೆಜ್ಜೆ ಇಡಬೇಕಿತ್ತು ಎಂದು ಕುಮಾರಸ್ವಾಮಿ ಹೇಳಿದ್ದಾರೆ.

> “ನಮ್ಮ ಅಧಿಕಾರಿಗಳ ಕೆಲಸವೋ ದೇವರಿಗೆ ಪ್ರೀತಿ. ದೆಹಲಿಯಲ್ಲಿ ನಡೆಯುವ ಸಭೆಗಳಿಗೆ ಮಾಹಿತಿ, ಅಂಕಿ ಅಂಶಗಳ ಸಮೇತ ಹೋಗಿ ಕೂತು ಚರ್ಚೆ ಮಾಡುವುದು ಬಿಟ್ಟು ಇಲ್ಲಿಂದಲೇ ವರ್ಚುವಲ್ ಆಗಿ ಹಾಜರಾಗುತ್ತಾರೆ. ತಮಿಳುನಾಡಿನಿಂದ ಹದಿನೈದು ಜನ ಅಧಿಕಾರಿಗಳು ಹೋಗುತ್ತಾರೆ. ಇದರಿಂದ ರಾಜ್ಯಕ್ಕೆ ನ್ಯಾಯ ಸಿಗಲು ಸಾಧ್ಯವೇ? ದೆಹಲಿಯಲ್ಲಿ ರಾಜ್ಯದ ಸಂಸದರ ಸಭೆ ಕರೆದು ಇವತ್ತು ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಏನು ಚರ್ಚೆ ಮಾಡಿದರು. ಇವರೇನು ಹೇಳಿದರು ಎನ್ನುವ ಮಾಹಿತಿಯೂ ನನಗೆ ಇದೆ. ಹೊರನೋಟಕ್ಕೆ ನಾವು ಒಗ್ಗಟ್ಟಾಗಿದ್ದೇವೆ ಎಂದು ಹೇಳಿಕೆ ಕೊಟ್ಟರೆ ಪ್ರಯೋಜನ ಏನಿದೆ. ಅಲ್ಲಿ ಸಂಸದರನ್ನು ಕೂರಿಸಿಕೊಂಡು ಭಾಷಣ ಮಾಡಲಿಕ್ಕೆ ಹೋಗಿದ್ದರಾ.
>
> –ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ

ಒಬಿಸಿ ಕೋಟಾ ಇಲ್ಲದೆ ಮಹಿಳಾ ಮೀಸಲಾತಿ ಮಸೂದೆ ‘ಅಪೂರ್ಣ’

ರಾಹುಲ್ ಗಾಂಧಿ ಅಭಿಮತ



ನವದೆಹಲಿ,ಸೆ.20–ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಬುಧವಾರ ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಬೆಂಬಲಿಸುವುದಾಗಿ ಹೇಳಿದ್ದಾರೆ. ಆದರೆ ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡದ ಕಾರಣ ಇದು ‘ಅಪೂರ್ಣ’ ಮಸೂದೆ ಎಂದು ಕಾಂಗ್ರೆಸ್ ಮಾಜಿ ಅಧ್ಯಕ್ಷ ಹೇಳಿದ್ದಾರೆ. ಜಾತಿ ಗಣತಿಗೂ ಅವರು ಒತ್ತಾಯಿಸಿದ್ದಾರೆ. ಇಂದು ಲೋಕ ಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ವಯನಾಡ್ ಸಂಸದ, ಮಹಿಳೆಯರಿಗೆ ಅಧಿಕಾರ ನೀಡುವ ವಿಚಾರದಲ್ಲಿ ಪ್ರಸ್ತುತ ಮಸೂದೆ ಮತ್ತೊಂದು ದೊಡ್ಡ ಹೆಜ್ಜೆಯಾಗಿದೆ ಎಂದರು.

ಮಹಿಳಾ ಮೀಸಲಾತಿ ಮಸೂದೆಗೆ ನಾನು ಬೆಂಬಲವಾಗಿ ನಿಲ್ಲುತ್ತೇನೆ. ಇದು (ಮಹಿಳಾ ಮೀಸಲಾತಿ ಮಸೂದೆ) ಒಂದು ದೊಡ್ಡ ಹೆಜ್ಜೆ ಮತ್ತು ಇದನ್ನು ಪ್ರತಿಪಕ್ಷಗಳು ಸೇರಿದಂತೆ ಎಲ್ಲರೂ ಬೆಂಬಲಿಸುತ್ತಾರೆ. ಆದರೆ ಒಬಿಸಿ ಮೀಸಲಾತಿ ಇಲ್ಲದೆ ಮಸೂದೆ ಅಪೂರ್ಣ ಎಂದು ಹೇಳಿದ್ದಾರೆ. ಈ ಮಸೂದೆಯನ್ನು ತಕ್ಷಣವೇ ಜಾರಿಗೆ ತರಬೇಕು. ಮಸೂದೆ ಜಾರಿಗೆ ಹೊಸ ಜನಗಣತಿ, ಡಿಲಿಮಿಟೇಶನ್ ಅಗತ್ಯವಿದೆ ಎಂಬ ಕಲ್ಪನೆಯೇ ವಿಚಿತ್ರವಾಗಿದೆ. ಈ ಮಸೂದೆ ಇಂದೇ ಜಾರಿಗೆ ತರಬಹುದು ಎಂದರು.

ಮೈಸೂರಲ್ಲಿ ಮತ್ತೊಮ್ಮೆ ಮುನ್ನೆಲೆಗೆ ಬಂದ ಸೈಕಲ್ ಪಾತ್ ನಿರ್ಮಾಣ

8.72 ಕಿ.ಮೀಗೆ 3.30 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ



ಮೈಸೂರು, ಸೆ.20(ಎಸ್‌ಪಿಎನ್)– ಮೈಸೂರಿನಲ್ಲಿ ಸೈಕಲ್ ಸವಾರರಿಗೆ ಮೈಸೂರು ನಗರ ಪಾಲಿಕೆ ಸಿಹಿಸುದ್ದಿ ನೀಡಿದ್ದು, ಮೈಸೂರು ನಗರದಲ್ಲಿ ಸೈಕಲ್ ಸವಾರರು, ಪ್ರತ್ಯೇಕ ಟ್ರಾಕ್‌ನಲ್ಲಿ ಸಂಚರಿಸಲು 3 ಕೋಟಿ 30 ಲಕ್ಷ 60 ಸಾವಿರ ರೂ. ವೆಚ್ಚದಲ್ಲಿ 8.72 ಕಿ.ಮೀ ಸೈಕಲ್ ಪಾತ್ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದೆ.

ಈಗಾಗಲೇ ವಿಶ್ವಮಾನವ ಜೋಡಿ ರಸ್ತೆಯಲ್ಲಿ ಕನಕದಾಸನಗರ ವೃತ್ತದಿಂದ ರಾಮಕೃಷ್ಣ ಪರಹಂಸ ವೃತ್ತದವರೆಗೆ ಸೈಕಲ್ ಪಾತ್‌ಗೆ ‘ರೆಟ್ರೋ ರಿಫ್ಲೆಕ್ಟಿವ್ ಡಿಲಿನೇಟರ್ಸ್’ ಕಂಬಗಳನ್ನು ನೆಟ್ಟು ಸೈಕಲ್ ಸವಾರರು ಟ್ರಾಕ್ಸ್‌ನಲ್ಲಿ ಸಂಚರಿಸಲು ಅನುಕೂಲ ಮಾಡಿಕೊಡಲಾಗುತ್ತಿದೆ ಎಂದು ನಗರ ಪಾಲಿಕೆ ವ್ಯಾಪ್ತಿಯ ವಲಯ ಕಚೇರಿ 1ರ ಅಭಿವೃದ್ಧಿ ಅಧಿಕಾರಿ ಸುಶ್ರುತ್ ‘ಮೈಸೂರು ಮಿತ್ರ’ನಿಗೆ ತಿಳಿಸಿದರು.

ಸೈಕಲ್ ಪಾತ್ ಕಾಮಗಾರಿ ಮುಗಿಸಿದ ತಕ್ಷಣ ಸೈಕಲ್ ಸವಾರರಿಗೆ ಅನುಕೂಲವಾಗುವಂತಹ ನಿಯಮಗಳನ್ನು ಬಿಂಬಿಸುವ ಬೋರ್ಡ್‌ಗಳನ್ನು ಹಾಕಿ, ಬೈಕ್ ಮತ್ತು ಕಾರು ಮಾಲೀಕರಲ್ಲಿ ಜಾಗೃತಿ ಮೂಡಿಸುತ್ತೇವೆ. ಏಕೆಂದರೆ, ನಗರದಲ್ಲಿ ವಾಹನ ದಟ್ಟಣೆ ಹೆಚ್ಚಾಗಿದ್ದು, ಇದನ್ನು ತಗ್ಗಿಸುವ ದೃಷ್ಟಿಯಿಂದ ಹಾಗೂ ಸೈಕಲ್ ಸವಾರರಿಗೆ ನಗರದ ಪ್ರಮುಖ ರಸ್ತೆಗಳಾದ ಜೆಎಲ್‌ಬಿ ರಸ್ತೆಯ (ಎಂಎನ್ ಜಂಕ್ಷನ್‌ನಿಂದ ಅಶೋಕ ವೃತ್ತ), ಸೀತಾವಿಲಾಸ ರಸ್ತೆ (ಎಂಎನ್ ಜೋಯಿಸ್ ಜಂಕ್ಷನ್‌ನಿಂದ ಕುಕ್ಕರಹಳ್ಳಿ ಕೆರೆ ಪ್ರವೇಶದ್ವಾರವರೆಗೆ), ಬೋಗಾದಿ ರಸ್ತೆಯ (ಕುಕ್ಕರಹಳ್ಳಿ ಕೆರೆ ಪ್ರವೇಶದ್ವಾರದಿಂದ ವಿವಿ ಪ್ರವೇಶ ದ್ವಾರದವರೆಗೆ, ವಿಶ್ವಮಾನವ ಜೋಡಿ ರಸ್ತೆಯ (ಕ್ಯಾಂಪಸ್ ರಸ್ತೆ ಜಂಕ್ಷನ್‌ನಿಂದ ನಿಜಲಿಂಗಪ್ಪ ವೃತ್ತದ ಮೂಲಕ ರಿಂಗ್ ರೋಡ್‌ವರೆಗೆ), ಕೃಷ್ಣರಾಜ ಬುಲೇವಾರ್ಡ್ ರಸ್ತೆ (ಕೌಟಿಲ್ಯ ವೃತ್ತದಿಂದ ಕನ್ನೇಗೌಡ ವೃತ್ತದವರೆಗೆ), ಚಾಮರಾಜ ಜೋಡಿ ರಸ್ತೆ(ಏಕಲವ್ಯ ವೃತ್ತದಿಂದ ರಾಮಸ್ವಾಮಿ ವೃತ್ತದವರೆಗೆ), ನ್ಯೂ ಕಾಂತರಾಜ ಅರಸ್ ರಸ್ತೆಯ(ಕನ್ನೇಗೌಡ ವೃತ್ತದಿಂದ ಅಶೋಕ ವೃತ್ತದವರೆಗೆ) ಪ್ರತ್ಯೇಕ ಸೈಕಲ್ ಟ್ರಾಕ್ ಕಲ್ಪಿಸುವಂತೆ ತಜ್ಞರಿಂದ ಸಲಹೆಗಳು ಕೇಳಿ ಬಂದಿದ್ದವು. ಈ ಹಿನ್ನೆಲೆಯಲ್ಲಿ ಸೈಕಲ್ ಪಾತ್ ಕಾಮಗಾರಿ ಆರಂಭಿಸಲಾಗಿದೆ. ಅಲ್ಲದೆ, ಈ ರಸ್ತೆ ಸೇರಿದಂತೆ ನಗರದ ಪ್ರಮುಖ ರಸ್ತೆಗಳಲ್ಲಿ ಸೈಕಲ್ ಟ್ರಾಕ್ ಕಾಮಗಾರಿ ಹಮ್ಮಿಕೊಳ್ಳಲು ಸಿದ್ಧತೆ ನಡೆದಿದೆ ಎಂದು ತಿಳಿಸಿದರು.

ಸೈಕಲ್ ಸವಾರರು ಸರಾಗವಾಗಿ ಸೈಕಲ್‌ನಲ್ಲಿ ತೆರಳಲು ‘ಸೈಕಲ್ ಟ್ರಾಕ್’ ವ್ಯವಸ್ಥೆ ಅವಶ್ಯಕತೆ ಇದೆ. ಆದರೆ, ಈಗ ಸೈಕಲ್ ಪಾತ್ ಕಾಮಗಾರಿ ಆರಂಭಿಸಿರುವ ಜಾಗದಲ್ಲಿ ಕಿರಿದಾಗಿದ್ದು, 20 ಅಡಿಗೆ, 30 ಅಡಿಗೆ ಗ್ಯಾಪ್ ಕೊಟ್ಟು ‘ರೆಟ್ರೋ ರಿಫ್ಲೆಕ್ಟಿವ್ ಡಿಲಿನೇಟರ್ಸ್’ ಅಳವಡಿಸಿದ್ದಾರೆ. ಈ ರೀತಿ ಅಳವಡಿಸಿರುವುದರಿಂದ ಯಾರಿಗೆ ಪ್ರಯೋಜನ. ಅದರ ಬದಲು ರಿಂಗ್ ರೋಡ್‌ನಲ್ಲಿ ಸೈಕಲ್ ಸವಾರಿಗಾಗಿಯೇ ಸೈಕಲ್ ಪಾತ್ ಮಾಡಿದರೆ ಉಪಯೋಗ ಎನ್ನುತ್ತಾರೆ ಸೈಕಲ್ ಸವಾರ ನಾಗರಾಜ್.

ಇಂದು ಮೈಸೂರಿಗೆ ಸ್ಪೀಕರ್ ಯು.ಟಿ.ಖಾದರ್ ಫರೀದ್



ಮೈಸೂರು, ಸೆ.20 (ಆರ್‌ಕೆ)– ವಿಧಾನಸಭಾಧ್ಯಕ್ಷರಾದ ಯು.ಟಿ. ಖಾದರ್ ಫರೀದ್ ನಾಳೆ (ಸೆ.21) ಮೈಸೂರಿಗೆ ಆಗಮಿಸುವರು. ಗುರುವಾರ ಮಧ್ಯಾಹ್ನ 1 ಗಂಟೆಗೆ ಮೈಸೂರಿಗೆ ಆಗಮಿಸುವ ಅವರು, ಬನ್ನಿಮಂಟಪದ ಹೈವೇ ಸರ್ಕಲ್ ಬಳಿಯ ಬಿಷಪ್ ಹೌಸ್‌ಗೆ ಭೇಟಿ ನೀಡುವರು. ಮಧ್ಯಾಹ್ನ 1.30 ಗಂಟೆಗೆ ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮಕ್ಕೆ ಭೇಟಿ ನೀಡಲಿರುವ ಖಾದರ್, ಚಾತುರ್ಮಾಸ ವ್ರತದಲ್ಲಿರುವ ಉಡುಪಿ ಪೇಜಾವರ ಮಠದ ಶ್ರೀವಿಶ್ವಪ್ರಸನ್ನ ತೀರ್ಥ ಸ್ವಾಮಿಗಳೊಂದಿಗೆ ಸಮಾಲೋಚನೆ ನಡೆಸುವರು.

ಮಧ್ಯಾಹ್ನ 2.30 ಗಂಟೆಗೆ ರಾಜೀವ್ ನಗರಕ್ಕೆ ಭೇಟಿ ನೀಡಿ ಆಪ್ತರೊಂದಿಗೆ ಭೋಜನ ಸ್ವೀಕರಿಸಿದ ಬಳಿಕ ಸಂಜೆ 4.30 ಗಂಟೆಗೆ ಇರ್ವಿನ್ ರಸ್ತೆಯಲ್ಲಿರುವ ಇಮಾಮ್ ಶಾಫಿ ದರ್ಗಾಕ್ಕೆ ಭೇಟಿ ನೀಡುವರು. ಬಳಿಕ ಸಂಜೆ 6.30 ಗಂಟೆಗೆ ಬಿ.ಎನ್. ರಸ್ತೆಯ ಹೋಟೆಲ್ ಪೈವಿಸ್ತಾದಲ್ಲಿ ನಡೆಯಲಿರುವ ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಬೆಳ್ಳಿಹಬ್ಬ ಸಮಾರಂಭದಲ್ಲಿ ಪಾಲ್ಗೊಳ್ಳಲಿರುವ ಖಾದರ್, ರಾತ್ರಿ 8 ಗಂಟೆಗೆ ಡಿ.ದೇವರಾಜ ಅರಸು ರಸ್ತೆಯಲ್ಲಿ ಆಯೋಜಿಸಿರುವ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡ ಬಳಿಕ ರಾತ್ರಿ 9 ಗಂಟೆಗೆ ಬೆಂಗಳೂರಿಗೆ ಪ್ರಯಾಣ ಬೆಳೆಸುವರು.

ಮಹಿಳಾ ಮೀಸಲಾತಿ ಮಸೂದೆ ಮಂಡನೆಗೆ ಸ್ವಾಗತ



ಮೈಸೂರು,ಸೆ.20(ಎಂಟಿವೈ)– ಲೋಕಸಭೆ ಹಾಗೂ ವಿಧಾನಸಭೆಯಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ಮಸೂದೆ ಸಂಸತ್‌ನಲ್ಲಿ ಮಂಡಿಸಿರುವುದು ಸ್ವಾಗತಾರ್ಹ ಸಂಗತಿ ಎಂದು ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ಸಂಸ್ಥಾಪಕ ಅಧ್ಯಕ್ಷೆ ಹೆಚ್.ಎಲ್.ಯಮುನಾ ಶ್ಲಾಘಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರು ಮುಂದೆ ಬಂದರೂ, ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶದಿಂದ ವಂಚಿತರಾಗಿ ತಾರತಮ್ಯಕ್ಕೆ ಒಳಗಾಗಿದ್ದರು. ಎಷ್ಟೇ ಕ್ರಿಯಾಶೀಲರಾಗಿದ್ದರೂ ಚುನಾವಣೆಯಲ್ಲಿ ಸ್ಪರ್ಧೆ ಮಾಡಲು ಅವಕಾಶ ಸಿಗುತ್ತಿರಲಿಲ್ಲ. ಇದೀಗ ಕೇಂದ್ರ ಸರ್ಕಾರ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಕಲ್ಪಿಸುವ ಮೂಲಕ ಮಹಿಳೆಯರು ಚುನಾವಣೆ ಮತ್ತು ಆಡಳಿತ ವಿಷಯದಲ್ಲಿ ಎದುರಿಸುತ್ತಿದ್ದ ತಾರತಮ್ಯ ಹೋಗಲಾಡಿಸುವ ಪ್ರಯತ್ನ ಮಾಡಿದೆ. ಅಲ್ಲದೆ, ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧೆ ಮಾಡಲು ಅವಕಾಶ ನೀಡಲು ಮುಂದಾಗಿರುವುದು ಶ್ಲಾಘನೀಯ ಎಂದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಸುಶೀಲಾ ನಂಜಪ್ಪ, ಜಯಲಕ್ಷ್ಮೀ ಇದ್ದರು.

ಸರಕು ಸಾಗಾಣಿಕೆಯಲ್ಲಿ ಮೈಸೂರು ರೈಲ್ವೆ ವಿಭಾಗ ಪ್ರಶಸ್ತಿಗೆ ಭಾಜನ



ಮೈಸೂರು, ಸೆ.20(ಬಿಎಲ್‌ಯು)– ಮೈಸೂರಿನ ರೈಲ್ವೆ ವಿಭಾಗವು ಶೇಕಡ 28ರಷ್ಟು ಸರಕು ಸಾಗಾಣೆಯಲ್ಲಿ ಶೇ.28ರಷ್ಟು ಅಧಿಕ ಬೆಳವಣಿಗೆ ಸಾಧಿಸುವ ಮೂಲಕ ಭಾರತೀಯ ರೈಲ್ವೆಯಲ್ಲಿ ಎರಡನೇ ಸ್ಥಾನ ಪಡೆದು, ರೈಲ್ವೆ ಮಂಡಳಿಯ ಪ್ರಶಸ್ತಿಗೆ ಭಾಜನವಾಗಿದೆ.

ನವದೆಹಲಿಯಲ್ಲಿ ನಡೆದ ರೈಲ್ವೆ ಮಂಡಳಿಯ ಸಮಾರಂಭದಲ್ಲಿ ರೈಲ್ವೆ ಖಾತೆ ರಾಜ್ಯ ಸಚಿವೆ ದರ್ಶನಾ ಜರ್ದೋಶ್ ಅವರು ಸರಕು ಸಾಗಾಣಿಕೆಯಲ್ಲಿ ಮೈಸೂರು ವಿಭಾಗ ಮಾಡಿರುವ ಪ್ರಗತಿಯನ್ನು ಪರಿಗಣಿಸಿ, ಮೈಸೂರಿನ ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್ ಅವರಿಗೆ ಪ್ರಶಸ್ತಿ ನೀಡಿದರು. ಕಳೆದ ಬಾರಿಯ ಹಣಕಾಸು ವರ್ಷಕ್ಕೆ ಹೋಲಿಸಿದರೆ ಈ ಬಾರಿ ಮೈಸೂರಿನ ರೈಲ್ವೆ ವಿಭಾಗ ಶೇಕಡ 28 ಕ್ಕಿಂತ ಹೆಚ್ಚು ಪ್ರಗತಿ ಸಾಧಿಸಿದೆ. ಈ ಮೂಲಕ ಭಾರತೀಯ ರೈಲ್ವೆಯಲ್ಲಿ ಮೈಸೂರು ವಿಭಾಗ ಎರಡನೇ ಸ್ಥಾನ ಪಡೆದಿದೆ. ಮೈಸೂರು ರೈಲ್ವೆ ವಿಭಾಗದ ಈ ಸಾಧನೆ ಗುರುತಿಸಿ ರೈಲ್ವೆ ವಿಭಾಗ ಪ್ರಶಸ್ತಿ ನೀಡಿದೆ.

ಮೈಸೂರು ವಿಭಾಗವು ಸರಕು ಸಾಗಣೆಯಲ್ಲಿ ಈ ವರ್ಷ 75.64 ಕೋಟಿ ಆದಾಯ ಗಳಿಸಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಆದಾಯದ ಬೆಳವಣಿಗೆ ಶೇಕಡ 61.42ರಷ್ಟು ಹೆಚ್ಚಾಗಿದೆ. ಮೈಸೂರು ರೈಲ್ವೆ ವಿಭಾಗದ ತಂಡವನ್ನು ಈ ವೇಳೆ ಅಭಿನಂದಿಸಿದ ಶಿಲ್ಪಿ ಅಗರವಾಲ್, ಮುಂದಿನ ವರ್ಷದಲ್ಲಿ ಇದಕ್ಕಿಂತ ಇನ್ನು ಹೆಚ್ಚಿನ ರೀತಿಯಲ್ಲಿ ಪ್ರಗತಿ ಸಾಧಿಸುತ್ತೇವೆ ಎಂದು ತಿಳಿಸಿದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು.ಸೆ.20–ಸೆ.22ರಂದು ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ಮೆಲ್ಲಹಳ್ಳಿ, ಹಾರೋಹಳ್ಳಿ, ಹಳೆಕೆರಿಹುಂಡಿ, ಶಿವಪುರ, ಹಲಗಯ್ಯನಹುಂಡಿ, ಪಿಲ್ಲಹಳ್ಳಿ, ವರಕೂಡು, ಬಡಗಲಹುಂಡಿ, ವರುಣ, ದಂಡಿಕೆರೆ, ವಾಜಮಂಗಲ, ಮೊಸಂಬಾಯನಹಳ್ಳಿ, ಯಾಂದಳ್ಳಿ, ಸಜ್ಜೆಹುಂಡಿ, ಜಂತಗಳ್ಳಿ, ಮಹದೇಶ್ವರ ಬಡಾವಣೆ, ಇಂಡಸ್ ಬಡಾವಣೆ, ಭುಗತಗಳ್ಳಿ ಗೇಟ್, ಚಿಕ್ಕಹಳ್ಳಿ, ಚೋರನಹಳ್ಳಿ, ಭುಗತಗಳ್ಳಿ, ನಾಡನಹಳ್ಳಿ, ಪೊಲೀಸ್ ಬಡಾವಣೆ, ನೇತಾಜಿನಗರ, ಐಪಿಎಸ್ ನಗರ, ಲಾಲ್‌ಬಹದ್ದೂರು ಶಾಸ್ತ್ರಿ ನಗರ, ಯಶಸ್ವಿನಿ ಹಿಲ್‌ವ್ಯೂ, ಮೂಡಲಹುಂಡಿ, ಕೆಂಪೇಗೌಡನಹುಂಡಿ, ಜೆಎಸ್‌ಎಸ್ ಬಡಾವಣೆ, ವಸಂತನಗರ, ಸುಕದಾಯಿ ಬಡಾವಣೆ, ಶಾಂತವೇರಿಗೋಪಾಲಗೌಡನಗರ, ಸಪ್ತಮಾತೃಕ ಬಡಾವಣೆ, ಸಹೃದಯ ನಗರ, ಪ್ರಕೃತಿ ಬಡಾವಣೆ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.

ಮಹಿಳೆಯರಿಗೆ ರಾಜಕೀಯ ಮೀಸಲಾತಿ ಪ್ರಸ್ತಾಪಕ್ಕೆ ಮರುಚಾಲನೆ

ಮೈಸೂರಿನಲ್ಲಿ ಬಿಜೆಪಿ ಕಾರ್ಯಕರ್ತರಿಂದ ಸಿಹಿ ಹಂಚಿ ಸಂಭ್ರಮಾಚರಣೆ



ಮೈಸೂರು, ಸೆ.20(ಬಿಎಲ್‌ಯು)– ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಯಲ್ಲಿ ಶೇ.33ರಷ್ಟು ಮಹಿಳಾ ಮೀಸಲಾತಿ ಸಂಬಂಧ ಸಂಸತ್‌ನಲ್ಲಿ ಮಸೂದೆ ಮಂಡಿಸಿರುವ ಕೇಂದ್ರ ಬಿಜೆಪಿ ಸರ್ಕಾರದ ಕ್ರಮವನ್ನು ಬೆಂಬಲಿಸಿ ಮೈಸೂರಿನ ಬಿಜೆಪಿ ಮಹಿಳಾ ಮೋರ್ಚಾ ಕಾರ್ಯಕರ್ತರು ಸಿಹಿ ಹಂಚಿ ಸಂಭ್ರಮಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಗಣೇಶನಿಗೆ ವಿಶೇಷ ಪೂಜೆ ಸಲ್ಲಿಸಿದ ನಂತರ ಬಿಜೆಪಿ ಕಾರ್ಯಕರ್ತರು ಸಿಹಿ ಹಂಚಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ಮಹಿಳಾ ಮೋರ್ಚಾ ನಗರಾಧ್ಯಕ್ಷೆ ಹೇಮಾ ನಂದೀಶ್, ಎಲ್ಲಾ ಕ್ಷೇತ್ರದಲ್ಲಿ ಮಹಿಳೆಯರು ಪುರುಷರಷ್ಟೆ ಸಮಾನರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ಇದುವರೆಗೂ ದೊರೆತಿರಲಿಲ್ಲ. ಆದರೆ ಈಗ ಬಿಜೆಪಿ ಸರ್ಕಾರ ಮಹಿಳೆಯರಿಗೆ ಮೀಸಲಾತಿ ಕಲ್ಪಿಸಲು ಸಂಸತ್‌ನಲ್ಲಿ ಮಸೂದೆ ಮಂಡಿಸಿ ಮಹಿಳೆಯರ ಹಲವು ವರ್ಷಗಳ ಹೋರಾಟಕ್ಕೆ ನ್ಯಾಯ ಕಲ್ಪಿಸಲು ಮುಂದಾಗಿದೆ ಎಂದು ಪ್ರಶಂಸಿಸಿದರು.

ಈ ವೇಳೆ ಮಾತನಾಡಿದ ಶಾಸಕ ಟಿ.ಎಸ್.ಶ್ರೀವತ್ಸ, ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುತ್ತಿರುವ ಕೇಂದ್ರ ಸರ್ಕಾರದ ತೀರ್ಮಾನ ಐತಿಹಾಸಿಕವಾಗಿದೆ ಎಂದು ಬಣ್ಣಿಸಿದರು.

ಬಿಜೆಪಿ ಪದಾಧಿಕಾರಿಗಳ ನೇಮಕದಲ್ಲಿ ಈಗಾಗಲೇ ಮಹಿಳೆಯರಿಗೆ ಶೇಕಡ 33 ರಷ್ಟು ಅವಕಾಶ ನೀಡಲಾಗಿದೆ. ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇಕಡ 50ರಷ್ಟು ಮೀಸಲಾತಿ ನೀಡಿದ್ದರು. ಈಗ ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಕೂಡ ಮಹಿಳೆಯರಿಗೆ ಮೀಸಲಾತಿ ನೀಡಲು ಮಸೂದೆ ಮಂಡನೆ ಆಗಿರುವುದು ಹಲವು ವರ್ಷಗಳ ಕನಸು ನನಸು ಮಾಡಿದಂತಾಗಿದೆ ಎಂದು ಶಾಸಕ ಶ್ರೀವತ್ಸ ಹೇಳಿದರು. ಬಿಜೆಪಿ ಮುಖಂಡರಾದ ಪ್ರಮೀಳಾ ಭರತ್, ಛಾಯಾದೇವಿ, ಚಂದ್ರಿಕಾ ಸೇರಿದಂತೆ ಹಲವರು ಈ ವೇಳೆ ಹಾಜರಿದ್ದರು.

ಮೈಸೂರು ಮಿತ್ರ ಗುರುವಾರ 21 ಸೆಪ್ಟೆಂಬರ್ 2023

ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ

ಮಂಡ್ಯದಲ್ಲಿ ಮುಂದುವರೆದ ರೈತರ ಪ್ರತಿಭಟನೆ

ವಿವಿಧ ಸಂಘಟನೆಗಳು, ನಿವೃತ್ತ ನೀರಾವರಿ ಇಂಜಿನಿಯರ್‌ಗಳ ಸಾಥ್



ಮಂಡ್ಯ, ಸೆ.20(ಮೋಹನ್‌ರಾಜ್)– ತಮಿಳುನಾಡಿಗೆ ನಿತ್ಯ 5 ಸಾವಿರ ಕ್ಯೂಸೆಕ್ ನೀರನ್ನು ಹರಿಸುತ್ತಿರುವ ರಾಜ್ಯ ಸರ್ಕಾರದ ಕ್ರಮ ಖಂಡಿಸಿ ಕಾವೇರಿ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಹೋರಾಟಕ್ಕೆ ಬುಧವಾರ ಹಲವು ಸಂಘಟನೆಗಳು ಹಾಗೂ ಮಂಡ್ಯ ಜಿಲ್ಲೆಯಲ್ಲಿ ನೀರಾವರಿ ಇಂಜಿನಿಯರ್‌ಗಳಾಗಿ ಕಾರ್ಯನಿರ್ವಹಿಸಿದ್ದ ನಿವೃತ್ತ ಅಧಿಕಾರಿಗಳು ಸಾಥ್ ನೀಡಿ, ಬೃಹತ್ ಪ್ರತಿಭಟನೆ ನಡೆಸಿದರು.

ನಗರದ ಸರ್‌ಎಂವಿ ಪ್ರತಿಮೆ ಎದುರು ನಡೆಸುತ್ತಿರುವ ನಿರಂತರ ಧರಣಿಯಲ್ಲಿ ನಿವೃತ್ತ ಅಭಿಯಂತರರು, ಜಯಕರ್ನಾಟಕ ಜನಪರ ವೇದಿಕೆ, ಕನ್ನಡ ಸೇನೆ ಹಾಗೂ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಟ್ರಸ್ಟ್ ಕಾರ್ಯಕರ್ತರು ಧರಣಿಯಲ್ಲಿ ಭಾಗಿಯಾಗಿ ಕಾವೇರಿ ಹೋರಾಟಕ್ಕೆ ಬೆಂಬಲ ಸೂಚಿಸಿದರು. ಸರ್ಕಾರಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಅಭಿಯಂತರರು ಕಾವೇರಿ ಹೋರಾಟ ಬೆಂಬಲಿಸಿ ಧರಣಿ ನಡೆಸಿದರು.

ಧರಣಿನಿರತರನ್ನು ಉದ್ದೇಶಿಸಿ ಮಾತನಾಡಿದ ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ತಮಿಳುನಾಡಿಗೆ ನೀರು ಹರಿಸುವುದಿಲ್ಲ ಎಂದು ಹೇಳಿ ನೀರನ್ನು ಬಿಡುಗಡೆ ಮಾಡುತ್ತಲೇ ಇದೆ. ಕಾವೇರಿ ವಿಚಾರದಲ್ಲಿ ನಿರಂತರ ಸುಳ್ಳು ಹೇಳುತ್ತಿರುವ ರಾಜ್ಯ ಸರ್ಕಾರಕ್ಕೆ ನಾಚಿಕೆಯಾಗಬೇಕು. ನೀರು ಬಿಡುತ್ತಲೇ ದೆಹಲಿಯಲ್ಲಿ ರಾಜ್ಯ ಸಂಸದರ ಸಭೆ ನಡೆಸುತ್ತಿದೆ. ಕಾವೇರಿ ವಿಚಾರದಲ್ಲಿ ರಾಜ್ಯ ಸರ್ಕಾರಕ್ಕೆ ಸ್ಪಷ್ಟತೆ ಇಲ್ಲ ಎಂದು ಕಿಡಿಕಾರಿದರು.

ನಿನ್ನೆ ಸಂಸತ್‌ನಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಏಕಾಂಗಿಯಾಗಿ ಇಳಿ ವಯಸ್ಸಿನಲ್ಲಿ ಕಾವೇರಿ ವಿಚಾರದಲ್ಲಿ ಮಾತನಾಡುತ್ತಿದ್ದರೆ, ಅವರ ವಿರುದ್ಧ ತಮಿಳುನಾಡಿನ ಹಲವು ಸಂಸದರು ಮುಗಿಬೀಳುತ್ತಾರೆ. ಆಗ ರಾಜ್ಯದ ಇತರ ಪಕ್ಷದ ಓರ್ವ ಸಂಸದ ಸಹ ದೇವೇಗೌಡರ ಮಾತಿಗೆ ಅಥವಾ ತಮಿಳುನಾಡಿನ ಸಂಸದರ ವಿರುದ್ಧ ಧ್ವನಿ ಎತ್ತುವುದಿಲ್ಲ. ದೇವೇಗೌಡರನ್ನು ಹೊರತುಪಡಿಸಿದರೆ ಇನ್ಯಾವ ಸಂಸದರಿಗೂ ಕಾವೇರಿ ವಿಚಾರದಲ್ಲಿ ಕಾಳಜಿ ಇಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಟ್ರಸ್ಟ್ ಸದಸ್ಯರ ಪ್ರತಿಭಟನೆ: ಕೆಆರ್‌ಎಸ್ ಜಲಾಶಯದಿಂದ ತಮಿಳುನಾಡಿಗೆ ನಿರಂತರವಾಗಿ ನೀರು ಹರಿಸುತ್ತಿರುವುದನ್ನು ವಿರೋಧಿಸಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಟ್ರಸ್ಟ್ ಸದಸ್ಯರು ನಗರದ ಕಾವೇರಿ ನೀರಾವರಿ ನಿಗಮ ಕಚೇರಿ ಎದುರಿನ ಕಾವೇರಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಪೂಜೆ ಸಲ್ಲಿಸಿ ಸುಪ್ರೀಂ ಕೋರ್ಟ್‌ನಲ್ಲಿ ಕರ್ನಾಟಕದ ಪರ ತೀರ್ಪು ಎಂದು ಪ್ರಾರ್ಥಿಸಿ, ಬೈಕ್ ರ್ಯಾಲಿ ಮೂಲಕ ಜಯ ಚಾಮರಾಜೇಂದ್ರ ಒಡೆಯರ್ ವೃತ್ತಕ್ಕೆ ತೆರಳಿ ಮಾನವ ಸರಪಳಿ ನಿರ್ಮಿಸಿ ಕೇಂದ್ರರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು ಅಲ್ಲಿಂದ ಹೊರಟ ಸದಸ್ಯರು ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಧರಣಿಯಲ್ಲಿ ಭಾಗಿಯಾದರು.

ಕಾವೇರಿ ಕೊಳ್ಳದ ಜಲಾಶಯಗಳಿಂದ ನೀರು ಬಿಡುತ್ತಿರುವ ಸರ್ಕಾರದ ಕುಡಿಯುವ ನೀರಿಗೆ ದೊಡ್ಡ ಕಂಟಕ ತರಲಿದೆ. ಕಾವೇರಿ ನದಿ ನೀರು ತುರ್ತಾಗಿ ಉಳಿಸಬೇಕಾಗಿದೆ. ಕಾವೇರಿ ನದಿ ಪಾತ್ರದ ಜಿಲ್ಲೆಗಳ ಜನ-ಜಾನುವಾರುಗಳಿಗೆ ಕುಡಿಯಲು ನೀರಿಲ್ಲದ ಸಂದರ್ಭದಲ್ಲಿ ಸರ್ಕಾರ ತಮಿಳುನಾಡಿಗೆ ನೀರು ಹರಿಸುತ್ತಿದೆ ಎಂದು ಹೇಳಿದರು.

ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ತಮಿಳುನಾಡು ಮತ್ತು ಕರ್ನಾಟಕ ರಾಜ್ಯದ ವಾಸ್ತವ ಸ್ಥಿತಿ ವರದಿಯನ್ನು ಅಧ್ಯಯನ ಮಾಡಬೇಕು. ಜಲಾಶಯಗಳಲ್ಲಿ ನೀರಿನ ಲಭ್ಯತೆ ಅವಲೋಕಿಸದೆ ನೀರು ಬಿಡುಗಡೆ ಮಾಡಿ ಎಂದು ಆದೇಶ ಮಾಡುವುದು ಅವೈಜ್ಞಾನಿಕ ಎಂದರು.

ರೈತರಿಗೆ ಅನ್ಯಾಯವಾಗುತ್ತಿದ್ದರೂ ಸುಮ್ಮನಿರುವ ಶಾಸಕರು ಮತ್ತು ಸಂಸದರ ನಡೆ ಖಂಡಿಸಿದ ಪ್ರತಿಭಟನಾಕಾರರು, ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಿ ಸಂಕಷ್ಟ ಸೂತ್ರ ರೂಪಿಸಬೇಕು. ಸುಪ್ರೀಂ ಕೋರ್ಟ್‌ನಲ್ಲಿ ವಾಸ್ತವ ಸ್ಥಿತಿ ಮನವರಿಕೆ ಮಾಡಿಕೊಡಲು ಸರ್ಕಾರ ಮುಂದಾಗಬೇಕು ಎಂದು ಒತ್ತಾಯಿಸಿದರು.

ಧರಣಿಯಲ್ಲಿ ಮಾಜಿ ಶಾಸಕರಾದ ಎಂ.ಎಸ್.ಆತ್ಮಾನಂದ, ಕೆ.ಟಿ.ಶ್ರೀಕಂಠೇಗೌಡ, ಜಿ.ಬಿ.ಶಿವಕುಮಾರ್, ರೈತ ಹಿತರಕ್ಷಣಾ ಸಮಿತಿಯ ಸುನಂದಾ ಜಯರಾಂ, ಕೆ. ಬೋರಯ್ಯ, ಮೈಶುಗರ್ ಮಾಜಿ ಅಧ್ಯಕ್ಷ ಸಿದ್ದರಾಮೇಗೌಡ, ರೈತ ಸಂಘದ ಇಂಡವಾಳು ಚಂದ್ರಶೇಖರ್, ಇಂಡುವಾಳು ಬಸವರಾಜು, ಕನ್ನಡಸೇನೆ ಮಂಜು, ಮುದ್ದೇಗೌಡ, ದಸಂಸದ ಕೃಷ್ಣ, ನಾಲ್ವಡಿ ಕೃಷ್ಣರಾಜ ಒಡೆಯರ್ ಟ್ರಸ್ಟ್‌ನ ತಗ್ಗಹಳ್ಳಿ ವೆಂಕಟೇಶ್, ಎಂ.ಸಿ. ಲಂಕೇಶ್, ಮಹದೇವ ಸ್ವಾಮಿ, ಜವರೇಗೌಡ, ಮಂಜು, ಪ್ರಸನ್ನ, ಉಮಾಪತಿ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಸ್ಯಾಂಡಲ್‌ವುಡ್ ನಟರ ವಿರುದ್ಧ ಭಾರಿ ಆಕ್ರೋಶ

ಮಂಡ್ಯ: ಚುನಾವಣೆ ಸಮಯದಲ್ಲಿ ಮಂಡ್ಯ ಜಿಲ್ಲೆಗೆ ಆಗಮಿಸಿ ನೆಚ್ಚಿನ ಅಭ್ಯರ್ಥಿಗಳ ಪರ ಉದ್ದುದ್ದ ಭಾಷಣ ಬಿಗಿದು, ಸಿನಿಮಾ ಡೈಲಾಗ್ ಹೇಳುವ ಸ್ಯಾಂಡಲ್‌ವುಡ್‌ನ ನಟ, ನಟಿಯರು ತಿಂಗಳುಗಳಿಂದ ನಿರಂತರವಾಗಿ ಕಾವೇರಿ ಹೋರಾಟ ನಡೆಯುತ್ತಿದ್ದರು ಯಾರೂ ಸಹ ಭಾಗಿಯಾಗದ ವರ್ತನೆ ಖಂಡಿಸಿ, ಸಾಮಾಜಿಕ ಜಾಲತಾಣದಲ್ಲಿ ಕಾವೇರಿ ಹೋರಾಟಗಾರರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಚಿತ್ರನಟರ ವಿರುದ್ಧ ರೈತರು, ಕನ್ನಡಪರ ಸಂಘಟನೆ ಕಾರ್ಯಕರ್ತರು ಆಕ್ರೋಶವ್ಯಕ್ತಪಡಿಸಿದ್ದು, ಕಾವೇರಿ ಬಗ್ಗೆ ಧ್ವನಿ ಎತ್ತದ ಕನ್ನಡ ಚಲನಚಿತ್ರ ನಟರಿಗೆ ಧಿಕ್ಕಾರ ಎಂದು ಪೋಸ್ಟ್ ಹಾಕಿ ಕಿಡಿಕಾರಿದ್ದಾರೆ.

ಕೇವಲ ಚುನಾವಣೆ ಸಮಯಕ್ಕಷ್ಟೇ ನಟ, ನಟಿಯರು ಸೀಮಿತವಾಗಿದ್ದಾರೆ. ಜೊತೆಗೆ ಸಿನಿಮಾದ ಪ್ರಚಾರ ಬೇಕೆಂದರೆ ಆಗಮಿಸುತ್ತಾರೆ. ಬೆಂಗಳೂರು ನಗರದಲ್ಲಿರುವ ಇವರು ಕಾವೇರಿ ನೀರನ್ನು ಬಳಸುತ್ತಾರೆ. ಆದರೆ ಕಾವೇರಿ ವಿಚಾರದಲ್ಲಿ ಅನ್ಯಾಯವಾದಾಗ ಹೋರಾಟಕ್ಕೆ ಧುಮುಕುವುದಿಲ್ಲ. ಇವರ ಸಿನಿಮಾಗಳನ್ನು ವೀಕ್ಷಿಸಿ ನಾವು ಇವರನ್ನು ಪ್ರೋತ್ಸಾಹಿಸಬೇಕಾದ ಪರಿಸ್ಥಿತಿ ಬಂದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಹಿಂದೆ ವರನಟ ಡಾ.ರಾಜ್‌ಕುಮಾರ್, ಡಾ. ವಿಷ್ಣುವರ್ಧನ್ ನಿರಂತರವಾಗಿ ಕಾವೇರಿ ಹೋರಾಟದಲ್ಲಿ ಭಾಗಿಯಾಗಿ ರಾಜ್ಯದ ಧನಿಯಾಗಿದ್ದರು. ಡಾ.ಅಂಬರೀಷ್ ಕಾವೇರಿ ವಿಚಾರದಲ್ಲಿ ರಾಜ್ಯಕ್ಕೆ ಅನ್ಯಾಯವಾದಾಗ ಕೇಂದ್ರ ಸಚಿವ ಸ್ಥಾನವನ್ನೇ ತ್ಯಾಗ ಮಾಡಿದ್ದರು. ಈ ಮೂವರು ನಟರನ್ನು ಇಂದಿನ ನಟ, ನಟಿಯರು ಮಾದರಿಯಾಗಿ ತೆಗೆದುಕೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕನ್ನಡ ನಾಡಿನ ರೈತರಿಗೆ ಅನ್ಯಾಯ ಆದಾಗ ಮುನ್ನುಗ್ಗಿ ಬರುವ ಶಕ್ತಿ ಈ ಮೂವರು ನಟರಿಗಿತ್ತು. ಇಂದಿನ ಯಾವ ನಟರೂ ಕಾವೇರಿ ಬಗ್ಗೆ ಧ್ವನಿ ಎತ್ತದೇ ಇರೋದು ಬಹಳ ನೋವಿನ ಸಂಗತಿ. ನಮ್ಮಿಂದ ನಟರೇ ಹೊರತು, ನಟರಿಂದ ನಾವಲ್ಲ ಅನ್ನೋ ಸತ್ಯ ಅರಿಯಬೇಕು. ಇಂತಹ ನಿರ್ಲಕ್ಷ್ಯದ ನಟರನ್ನ ನಂಬದೆ ಎಲ್ಲಾ ಕನ್ನಡಿಗರು ರೈತರ ಪರ ನಿಲ್ಲಬೇಕು. ರೈತ ಉಳಿದರೆ ನಾವೆಲ್ಲ, ರೈತನಿಲ್ಲದೆ ಜಗವಿಲ್ಲ. ನಮ್ಮ ನಿರಂತರ ಹೋರಾಟ ಕಾವೇರಿಗಾಗಿ ಎಂದು ಸಾಮಾಜಿಕ ಜಾಲ ತಾಣದಲ್ಲಿ ಬೇಸರ ವ್ಯಕ್ತಪಡಿಸಿದ್ದಾರೆ.

ಕೆಆರ್‌ಎಸ್ ನೀರಾವರಿ ಇಲಾಖೆಗೆ ಮುತ್ತಿಗೆ

ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಪ್ರತಿಭಟನಾಕಾರರು



ಶ್ರೀರಂಗಪಟ್ಟಣ, ಸೆ.20– ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ ಭೂಮಿ ತಾಯಿ ಹೋರಾಟ ಸಮಿತಿ ವತಿಯಿಂದ ತಾಲೂಕಿನ ಕೆಆರ್‌ಎಸ್ ಕನ್ನಂಬಾಡಿ ಅಣೆಕಟ್ಟೆ ಕಾವೇರಿ ನೀರಾವರಿ ಇಲಾಖೆ ಕಚೇರಿಗೆ ಮುತ್ತಿಗೆ ಹಾಕಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ಪ್ರತಿಭಟನೆ ನಡೆಸಿದರು.

ರೈತ ಮುಖಂಡ ಕೆ.ಎಸ್.ನಂಜುಂಡೇಗೌಡ ನೇತೃತ್ವದಲ್ಲಿ ನೀರಾವರಿ ಇಲಾಖೆಗೆ ಮುತ್ತಿಗೆ ಹಾಕಿ ಪ್ರತಿಭಟನಾ ಧರಣಿ ನಡೆಸಿದ ನೂರಾರು ರೈತರು, ಅಣೆಕಟ್ಟೆಯಲ್ಲಿನ ಪ್ರಸ್ತುತ ನೀರಿನ ಪ್ರಮಾಣ ಹಾಗೂ ತಮಿಳುನಾಡಿಗೆ ಈಗಾಗಲೇ ಬಿಟ್ಟಿರುವ ಮತ್ತು ಬಿಡುತ್ತಿರುವ ನೀರಿನ ಪ್ರಮಾಣದ ಬಗ್ಗೆ ಮಾಹಿತಿ ನೀಡುವಂತೆ ಆಗ್ರಹಿಸಿದರು. ಈ ವೇಳೆ ಪೊಲೀಸರು ಸಮಾಧಾನಪಡಿಸಲು ಮುಂದಾದ ವೇಳೆ ಪೊಲೀಸರಿಗೂ ಸಹ ಎಚ್ಚರಿಕೆ ನೀಡಿದ ಘಟನೆ ನಡೆಯಿತು.

ಬಳಿಕ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಪ್ರತಿಭಟನೆ ನಡೆಸಿದ ರೈತರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಸಲುವಾಗಿ ರಾಜ್ಯದ ಜನತೆಯ ಮೇಲೆ ಚಪ್ಪಡಿ ಕಲ್ಲು ಎಳೆಯುತ್ತಿದ್ದಾರೆ. ಅಣೆಕಟ್ಟೆಗಳಲ್ಲಿನ ನೀರಿನ ಪ್ರಮಾಣ ಗಣನೀಯವಾಗಿ ಕುಸಿಯುತ್ತಿದೆ. ಪರಿಸ್ಥಿತಿ ಹೀಗಿದ್ದರೂ, ಲೋಕಸಭಾ ಚುನಾವಣೆಯಲ್ಲಿ ತಮಿಳುನಾಡಿನ ಓಲೈಕೆ ಮಾಡುವ ಸಲುವಾಗಿ ಸುಪ್ರೀಂ ಕೋರ್ಟ್ ತೀರ್ಪು ಬರುವ ಮುನ್ನವೇ ತಮಿಳುನಾಡಿಗೆ ನೀರು ಹರಿಸಿ, ಈಗ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವ ಪ್ರಯತ್ನ ಮಾಡುತ್ತಿದೆ ಎಂದು ಕಿಡಿಕಾರಿದರು.


ರೈತರ ಹೋರಾಟವು ಶಾಂತಿಯುತವಾಗಿ ನಡೆಯುತ್ತಿದ್ದು, ಮುಂದಿನ ಅಹಿತಕರ ಹೋರಾಟಗಳಿಗೆ ಸರ್ಕಾರವೇ ನೇರ ಹೊಣೆಯಾಗಲಿದೆ. ಇನ್ನು ಮುಂದಾದರೂ ರಾಜ್ಯದ ಜನತೆಯ ಪರವಾಗಿ ಸರ್ಕಾರ ನಿಲ್ಲಬೇಕು. ಅದು ಆಗದಿದ್ದಲ್ಲಿ ಜನತೆಯೇ ಸರ್ಕಾರಕ್ಕೆ ತಕ್ಕ ಬುದ್ಧಿ ಕಲಿಸಲಿದ್ದಾರೆ ಎಂದು ರೈತರು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಭೂಮಿ ತಾಯಿ ಹೋರಾಟ ಸಮಿತಿ ಅಧ್ಯಕ್ಷಬಲ್ಲೇನಹಳ್ಳಿ ಕೃಷ್ಣೇಗೌಡ, ಕಾರ್ಯ ದರ್ಶಿ ಎಂ.ವಿ. ಕೃಷ್ಣ, ದರ್ಶನ್, ಖಜಾಂಚಿ ಮಹದೇವು, ಸದಸ್ಯರಾದ ಸುನೀಲ್ ಸೇರಿದಂತೆ ನೂರಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು.

ತಮಿಳುನಾಡಿಗೆ ಹರಿದ ಕಾವೇರಿ

ಮಂಡ್ಯ: ರಾಜ್ಯ ಸರ್ಕಾರ ಸುಳ್ಳು ಹೇಳಿಕೊಂಡೇ ತಮಿಳುನಾಡಿಗೆ ನೀರು ಬಿಡುತ್ತಿದ್ದು, ತಮಿಳುನಾಡಿಗೆ ಕೆ.ಆರ್.ಎಸ್ ಜಲಾಶಯದಿಂದ ಬುಧವಾರ ಸಹ ನೀರು ಹರಿದಿದೆ.

ಕೆಆರ್‌ಎಸ್‌ನಿಂದ ಎರಡು ಸಾವಿರಕ್ಕೂ ಹೆಚ್ಚು ಕ್ಯುಸೆಕ್ ನೀರು ಹರಿದಿದ್ದು, ತಮಿಳುನಾಡಿಗೆ ನೀರನ್ನು ಬಿಡುತ್ತಿಲ್ಲ ಎಂದು ಹೇಳುತ್ತಿರುವ ಸರ್ಕಾರ, ಕದ್ದು-ಮುಚ್ಚಿ ನೀರು ಬಿಡುಗಡೆ ಮಾಡುತ್ತಿದೆ. ಸುಪ್ರೀಂಕೋರ್ಟ್‌ನಲ್ಲಿ ಪ್ರಾಧಿಕಾರ ಆದೇಶ ಪಾಲಿಸಿದ್ದೇವೆ ಎಂದು ಹೇಳಲು ತಮಿಳುನಾಡಿಗೆ ನೀರು ಬಿಡುಗಡೆ ಮಾಡುತ್ತಿದ್ದು, ಬುಧವಾರ ನದಿಗೆ 2600 ಕ್ಯೂಸೆಕ್ ನೀರು ಹರಿದಿದೆ. ಬೆಂಗಳೂರು ಸೇರಿದಂತೆ ಡ್ಯಾಂ ಕೆಳಭಾಗದಲ್ಲಿ ಮಳೆಯಾಗುತ್ತಿದ್ದು, ಮಳೆಯಿಂದಾಗಿ ತಮಿಳುನಾಡಿಗೆ 1,500 ಕ್ಯುಸೆಕ್ ನೀರು ತಲುಪುತ್ತಿದ್ದು, ಉಳಿದ 3,500 ಕ್ಯುಸೆಕ್ ನೀರನ್ನು ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದಿಂದ ಬಿಡುಗಡೆ ಮಾಡಲಾಗುತ್ತಿದೆ. ಡ್ಯಾಂ ಕೆಳಭಾಗದಲ್ಲಿ ಮಳೆ ನಿಂತರೆ ಡ್ಯಾಂಗಳಿಂದಲೇ ಪ್ರತಿನಿತ್ಯ 5 ಸಾವಿರ ಕ್ಯುಸೆಕ್ ನೀರು ಬಿಡುಗಡೆ ಮಾಡುವ ಸಾಧ್ಯತೆ ಇದ್ದು, ಇದೇ ರೀತಿ ತಮಿಳುನಾಡಿಗೆ ಪ್ರತಿದಿನ 5 ಸಾವಿರ ಕ್ಯುಸೆಕ್ ಇನ್ನು 14 ದಿನಗಳ ಕಾಲ ಬಿಟ್ಟರೆ 7 ಟಿಎಂಸಿಯಷ್ಟು ನೀರು ಜಲಾಶಯದಲ್ಲಿ ಖಾಲಿಯಾಗಲಿದೆ. ಸದ್ಯ ಕೆಆರ್‌ಎಸ್ ಜಲಾಶಯದಲ್ಲಿ 20 ಟಿಎಂಸಿ ನೀರು ಮಾತ್ರ ಸಂಗ್ರಹವಾಗಿದೆ.

ಸಂಕಷ್ಟದಲ್ಲಿರುವ ಕಾವೇರಿ ಕೊಳ್ಳದ ರೈತರಿಗೆ ಶೀಘ್ರ ಪರಿಹಾರ ಘೋಷಿಸಿ



ಚಿನಕುರಳಿ, ಸೆ.20– ನೀರಿನ ಸಂಕಷ್ಟಕ್ಕೆ ಎದುರಾಗಿರುವ ಕಾವೇರಿ ಕೊಳ್ಳದ ರೈತರಿಗೆ ರಾಜ್ಯ ಸರಕಾರ ಶೀಘ್ರವೇ ಪರಿಹಾರ ಘೋಷಣೆ ಮಾಡುವ ಮೂಲಕ ರೈತರಿಗೆ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಬೇಕು ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸರಕಾರಕ್ಕೆ ಒತ್ತಾಯಿಸಿದರು.

ಚಿನಕುರಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಭಾಗದ ಜನರಿಗೆ ಕುಡಿಯುಲು ನೀರಿಲ್ಲದಂತಹ ಸಂದರ್ಭದಲ್ಲಿ ತಮಿಳುನಾಡಿಗೆ ನೀರು ಹರಿಸುತ್ತಿರುವುದು ಸರಿಯಲ್ಲ. ಕೂಡಲೇ ನೀರು ನಿಲ್ಲಿಸಿ ಸರಕಾರ ಜಿಲ್ಲೆಯ ರೈತರು, ಜನರ ರಕ್ಷಣೆ ಮಾಡಬೇಕು ಎಂದರು. ಇಲ್ಲಿಯ ತನಕ ಇಷ್ಟೊಂದು ತೀವ್ರಗತಿಯ ಕಾವೇರಿ ಸಂಕಷ್ಟ ಎದುರಾಗಿರಲಿಲ್ಲ. ಕಾವೇರಿ ಸಮಸ್ಯೆಯನ್ನು ಬಗೆಹರಿಸುವಲ್ಲಿ ಸರಕಾರದ ಜವಾಬ್ದಾರಿ ಹೆಚ್ಚಾಗಿದ್ದು, ಪಕ್ಷಾತೀತವಾಗಿ ಎಲ್ಲರನ್ನು ಒಗ್ಗೂಡಿಸಿಕೊಂಡು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಮಾರ್ಗದರ್ಶನದಲ್ಲಿ ಕಾವೇರಿ ಸಂಕಷ್ಟ ಪರಿಸ್ಥಿತಿಯನ್ನು ಯಾವ ರೀತಿ ಎದುರಿಸಬೇಕು ಎನ್ನುವ ಜವಾಬ್ದಾರಿಯನ್ನು ನಿಭಾಯಿಸಬೇಕಿದೆ ಎಂದರು.

ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೂ ಪರಿತಪಿಸುವ ವಾತಾವರಣ ಸೃಷ್ಟಿಯಾಗುವುದು ಖಚಿತವಾಗಿ, ಅದಕ್ಕೆ ಸರಕಾರ ಈ ಕೂಡಲೇ ಸಜ್ಜಾಗಬೇಕು. ಕಾವೇರಿಕೊಳ್ಳದ ಜಿಲ್ಲೆಯ ರೈತರಿಗೆ ಸರಕಾರ ಕೂಡಲೇ ಪರಿಹಾರ ಘೋಷಣೆ ಮಾಡಿ ರೈತರಿಗೆ ಆತ್ಮಸ್ಥೈರ್ಯ ತುಂಬುವ ಕೆಲಸವಾಗಬೇಕು. ಇದರ ಜವಾಬ್ದಾರಿಯನ್ನು ಜಿಲ್ಲಾ ಉಸ್ತುವಾರಿ ಸಚಿವರು ಹೊರಬೇಕಾಗಿದೆ. ಸಚಿವರು ಸರಕಾರದ ಗಮನಸೆಳೆದು ರೈತರಿಗೆ ಪರಿಹಾರ ಘೋಷಣೆ ಮಾಡಿಸಬೇಕು ಎಂದು ಒತ್ತಾಯಿಸಿದರು. ರಾಜ್ಯದಲ್ಲಿ ಈ ಹಿಂದೆ ಅಧಿಕಾರ ನಡೆಸಿಕೊಂಡು ಬಂದ ಎಲ್ಲಾ ಸರಕಾರಗಳು ಕಾವೇರಿ ವಿಚಾರದಲ್ಲಿ ಯಾರು ಮಾತು ಉಳಿಸಿಕೊಂಡಿಲ್ಲ ಎಲ್ಲರು ನೀರು ಬಿಟ್ಟಿದ್ದಾರೆ. ಆದರೂ ಇಂತಹ ಸಂದರ್ಭದಲ್ಲಿ ಕುಡಿಯುವುದಕ್ಕೂ ನೀರಿಲ್ಲದ ಪರಿಸ್ಥಿತಿ ಬಹಳ ವರ್ಷಗಳ ನಂತರ ನಿರ್ಮಾಣವಾಗಿದೆ. ಈ ಸಮಸ್ಯೆಯನ್ನು ಬಗೆಹರಿಸಲು ಸರಕಾರ ಜವಾಬ್ದಾರಿಯುತವಾಗಿ ನಡೆಸಿಕೊಂಡು ಸಮಸ್ಯೆಯನ್ನು ಬಗೆಹರಿಸಲು ಮುಂದಾಗಬೇಕು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಒಂದನೇ ಪುಟದಿಂದ

‘ಸುಪ್ರೀಂ’ ಮೊರೆ; ರಾಜ್ಯ ನಿರ್ಧಾರ

ಕಾರಣವಾಗಿದೆ. ಇದನ್ನು ತಕ್ಷಣವೇ ಕೇಂದ್ರ ಸರ್ಕಾರ ಸರಿಪಡಿಸುವ ಅಗತ್ಯವಿದೆ.

ಎರಡೂ ರಾಜ್ಯದವರನ್ನು ಕರೆದು ಅಹವಾಲು ಆಲಿಸುವ ಅಧಿಕಾರವ್ಯಾಪ್ತಿ ಪ್ರಧಾನಿ ಅವರಿಗೆ ಇದೆ. ಹೀಗಾಗಿ ನಾನು ಅವರ ಮಧ್ಯ ಪ್ರವೇಶಕ್ಕೆ ಮನವಿ ಮಾಡುತ್ತೇನೆ. ನಿನ್ನೆ ರಾತ್ರಿ ಉಪ ಮುಖ್ಯಮಂತ್ರಿ ಅವರ ಜತೆಗೂಡಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರೊಂದಿಗೆ ಮಾತುಕತೆ ನಡೆಸಿದ್ದು, ಅವರ ಸಲಹೆಯಂತೆ ಕೇಂದ್ರ ಜಲ ಸಂಪನ್ಮೂಲ ಸಚಿವರಿಗೆ ರಾಜ್ಯದ ವಾಸ್ತವ ಸ್ಥಿತಿಯ ಮಾಹಿತಿ ನೀಡಿದ್ದೇವೆ.

ನಮಗೆ ನೀರಿನ ಕೊರತೆ ಇದೆ. ಇನ್ನೂ ತಮಿಳುನಾಡಿಗೆ 15 ದಿನಗಳ ಕಾಲ ಪ್ರತಿನಿತ್ಯ 5 ಸಾವಿರ ಕ್ಯುಸೆಕ್ ನೀರು ಹರಿಸುವುದು ಎಲ್ಲಿಂದ ಎಂದರಲ್ಲದೆ, ಕಾವೇರಿ ನೀರು ನಿರ್ವಹಣಾ ಸಮಿತಿಯ ಆದೇಶಕ್ಕೆ ತಡೆ ಕೋರಿ ನಾಳೆ ಸುಪ್ರೀಂಕೋರ್ಟ್ ಮೊರೆ ಹೋಗುವುದಾಗಿ ತಿಳಿಸಿದ್ದಾರೆ. ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ಎದುರಾಗಿರುವ ಸಂಕಷ್ಟ ಪರಿಸ್ಥಿತಿಯನ್ನು ಸಮರ್ಥವಾಗಿ ನಿರ್ವಹಿಸಲು ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ಕುರಿತು ಸಭೆಗೆ ವಿವರಿಸಿದ್ದೇನೆ. ಈಗಾಗಲೇ ರಾಜ್ಯದಲ್ಲಿ 195 ತಾಲೂಕುಗಳನ್ನು ಬರಪೀಡಿತ ಎಂದು ಗುರುತಿಸಿದ್ದೇವೆ. 123 ವರ್ಷಗಳಲ್ಲೇ ಆಗಸ್ಟ್ ತಿಂಗಳಿನಲ್ಲಿ ಅತೀ ಕಡಿಮೆ ಮಳೆ ದಾಖಲಾಗಿದೆ.

ಮಳೆ ಚೆನ್ನಾಗಿದ್ದಾಗ 177.2 ಟಿಎಂಸಿ ನೀರು ಬಿಡಬೇಕು ಎಂದು ಹೇಳಿದೆ. ಆದರೆ ಇಂಥ ಸಂಕಷ್ಟ ಸಂದರ್ಭದಲ್ಲಿ ಎಷ್ಟು ನೀರು ಬಿಡಬೇಕು ಎನ್ನುವ ಸೂತ್ರ ಇಲ್ಲದಿರುವುದು ಸಮಸ್ಯೆಯಾಗಿದೆ. ನಮಗೆ ಕುಡಿಯುವ ನೀರು, ಬೆಳೆ ರಕ್ಷಣೆ, ಕೈಗಾರಿಕೆಗೂ ನೀರಿಲ್ಲ. ಹೀಗಾಗಿ ನಾವು ಬಹಳ ಕಷ್ಟದಲ್ಲಿದ್ದೇವೆ ಸಿಡಬ್ಲ್ಯುಎಂಎ, ಸಿಡಬ್ಲ್ಯುಆರ್‌ಎ ಮುಂದೆ ಸಮರ್ಥವಾಗಿ ನಮ್ಮ ವಾಸ್ತವ ಪರಿಸ್ಥಿತಿಯನ್ನು ಮಂಡಿಸಿದ್ದೇವೆ. ತಮಿಳುನಾಡು ವಾದ ವಿರೋಧಿಸಿ ಸುಪ್ರೀಂಕೋಟ್‌ನಲ್ಲಿ ನಮ್ಮ ತಕರಾರು ಮಂಡಿಸಿದ್ದೇವೆ.

ಒಟ್ಟು ಮೂರು ಬಾರಿ ಸರ್ವ ಪಕ್ಷ ಸಭೆ ನಡೆಸಿದ್ದೇವೆ. 5 ಸಾವಿರ ಕ್ಯುಸೆಕ್ ನೀರು ಬಿಡಲಾಗುತ್ತಿಲ್ಲ ಎಂದು ಸಿಡಬ್ಲ್ಯುಎಂಎ ಮುಂದೆಯೂ ಮನವಿ ಸಲ್ಲಿಸಲಿದ್ದೇವೆ

10 ಸಾವಿರ ಕ್ಯುಸೆಕ್ ನೀರು ಬಿಡಬೇಕು ಎನ್ನುವ ಆದೇಶ ಬಂದಾಗ, 5 ಸಾವಿರ ಕ್ಯುಸೆಕ್ ನೀರು ಬಿಡಬೇಕು ಅಂದಾಗೆಲ್ಲಾ ಒಟ್ಟು ಮೂರು ಬಾರಿ ನಾವು ಸರ್ವ ಪಕ್ಷ ಸಭೆ ಕರೆದಿದ್ದೇವೆ. ನೀರು ಬಿಡಬಾರದು ಎನ್ನುವ ಪ್ರಶ್ನೆ ಅಲ್ಲ. ಬಿಡಲು ನಮ್ಮಲ್ಲಿ ನೀರೇ ಇಲ್ಲ. ಕನ್ನಡ ನಾಡು, ನುಡಿ, ಜಲ, ಭೂಮಿ, ಭಾಷೆ, ಸಂಸ್ಕೃತಿ ಕಾಪಾಡುವ ವಿಚಾರದಲ್ಲಿ ಪಕ್ಷ ರಾಜಕಾರಣ ಪಕ್ಕಕ್ಕಿಟ್ಟು ನಾವೆಲ್ಲಾ ಒಂದು ಧ್ವನಿಯಾಗಿ, ಗಟ್ಟಿಯಾಗಿ ನಿಲ್ಲಬೇಕು. ನಮಗೆ ಈಗ ಕುಡಿಯುವ ನೀರಿಗೆ 33 ಟಿಎಂಸಿ, ಬೆಳೆ ರಕ್ಷಣೆಗೆ 70 ಟಿಎಂಸಿ, ಕೈಗಾರಿಕೆಗಳಿಗೆ 3 ಟಿಎಂಸಿ ಸೇರಿ ಒಟ್ಟು 106 ಟಿಎಂಸಿ ನೀರು ಅನಿವಾರ್ಯ. ಈಗ ನಮ್ಮ ಬಳಿ ಇರುವುದು 53 ಟಿಎಂಸಿ ನೀರು ಮಾತ್ರ. ಹೀಗಾಗಿ ತಮಿಳುನಾಡಿಗೆ ಬಿಡಲು ನೀರೇ ಇಲ್ಲ. ನಮಗೆ ಆಗಸ್ಟ್ ಬಳಿಕ ಮಳೆ ಬರಲ್ಲ. ತಮಿಳುನಾಡಿಗೆ ಆಗಸ್ಟ್ ಬಳಿಕವೂ ಅಧಿಕ ಮಳೆ ಬರುತ್ತದೆ. ಅಲ್ಲಿ ಅಂತರ್ಜಲ ಕೂಡ ಹೆಚ್ಚಿದೆ. ಆದ್ದರಿಂದ ನಾವು ಹೆಚ್ಚು ಸಂಕಷ್ಟದಲ್ಲಿದ್ದೇವೆ. ಈ ಪರಿಸ್ಥಿತಿಯನ್ನು ನಮ್ಮ ಕಾನೂನು ತಂಡ ಮತ್ತು ತಜ್ಞ ಹಾಗೂ ಅಧಿಕಾರಿಗಳ ತಂಡ ಸಿಡಬ್ಲ್ಯುಎಂಸಿ ಎದುರು ಸಮರ್ಥವಾಗಿ ವಾದ ಮಂಡಿಸಿದ್ದಾರೆ. ಸುಪ್ರೀಂಕೋರ್ಟ್ ಆದೇಶದ ಪ್ರಕಾರ 108.4 ಟಿಎಂಸಿ ನೀರನ್ನು ನಾವು ಬಿಡಬೇಕಿತ್ತು. ಆದರೆ ನಾವು ಬಿಟ್ಟಿರುವುದು 39.8 ಟಿಎಂಸಿ ನೀರು ಮಾತ್ರ ಏಕೆಂದರೆ ನಮ್ಮಲ್ಲಿ ನೀರೇ ಇಲ್ಲ. ಆದ್ದರಿಂದ ನಮಗೆ ಸಂಕಷ್ಟದ ಪರಿಸ್ಥಿತಿ ಎದುರಾಗಿದೆ.

ಮೇಕೆದಾಟು ಅಣೆಕಟ್ಟು ಅನಿವಾರ್ಯ: ಇಂಥಾ ಪರಿಸ್ಥಿತಿ ಎದುರಾದಾಗ ಸಮರ್ಥವಾಗಿ ಜನರ ಹಿತ ಕಾಪಾಡಲು ಮೇಕೆದಾಟು ನಮಗೆ ಅನಿವಾರ್ಯ. ಆದ್ದರಿಂದ ನಮ್ಮ ನೀರನ್ನು, ನಮ್ಮ ಜಾಗದಲ್ಲಿ ಬಳಸಿಕೊಳ್ಳಲು, ಸಂಗ್ರಹಿಸಿಕೊಳ್ಳಲು, ವಿದ್ಯುತ್ ಉತ್ಪಾದಿಸಿಕೊಳ್ಳಲು ಮೇಕೆದಾಟು ನಮಗೆ ಅಗತ್ಯವಿದೆ. ಮುಂದಿನ ದಿನಗಳಲ್ಲಿ ಇಂಥಾ ಪರಿಸ್ಥಿತಿಗೆ ಮೇಕೆದಾಟು ಪರಿಹಾರ ಆಗುತ್ತದೆ ಎಂದರು.

ಹರಿಯುತ್ತಿದೆ 4600 ಕ್ಯುಸೆಕ್ ನೀರು

ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಕರ್ನಾಟಕ 108.4 ಟಿಎಂಸಿ ನೀರು ಬಿಡಬೇಕು. ಆದರೆ ನೀರಿನ ಪ್ರಮಾಣ ಕಡಿಮೆ ಇರುವ ಕಾರಣ 39.8 ಟಿಎಂಸಿ ನೀರು ಬಿಟ್ಟಿದೆ. ಈಗಲೂ ಕೂಡ ಪ್ರತಿ ದಿನ ತಮಿಳುನಾಡಿಗೆ ನೀರು ಬಿಡುತ್ತಲೆ ಇದೆ. ಇಷ್ಟಾದರೂ ತಮಿಳುನಾಡಿಗೆ ನೀರಿನ ದಾಹ ಇನ್ನೂ ಹೋಗಿಲ್ಲ. ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶವನ್ನು ರಾಜ್ಯ ಸರ್ಕಾರ ಹೀಗೆ ಪಾಲಿಸುತ್ತಿದ್ದರೆ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗುವುದು ನಿಶ್ಚಿತ. ಕೆಆರ್‌ಎಸ್ ಜಲಾಶಯದ ಗರಿಷ್ಠ ಮಟ್ಟ 124.80 ಅಡಿಯಾಗಿದ್ದು, ಇಂದಿನ ಮಟ್ಟ 97.08 ಅಡಿ. ಜಲಾಶಯಕ್ಕೆ 6.016 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದಿಂದ 2.674 ಕ್ಯುಸೆಕ್ ನೀರು ಬಿಡಲಾಗುತ್ತಿದೆ.

ಮೈಸೂರಿನ ಕಬಿನಿ ಜಲಾಶಯದ ಗರಿಷ್ಠ ಮಟ್ಟ 2,284 ಅಡಿಗಳಾಗಿದ್ದು, ಇಂದಿನ ಮಟ್ಟ 2,275 ಅಡಿಗಳಾಗಿದೆ. ಜಲಾಶಯಕ್ಕೆ 3,166 ಕ್ಯುಸೆಕ್ ನೀರು ಬರುತ್ತಿದ್ದು, ಜಲಾಶಯದಿಂದ ತಮಿಳುನಾಡಿಗೆ 2,000 ಕ್ಯೂಸೆಕ್ ನೀರು ಬಿಡಲಾಗುತ್ತಿದೆ. ಒಟ್ಟಾರೆ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದಿಂದ ತಮಿಳುನಾಡಿಗೆ 4,674 ಕ್ಯುಸೆಕ್ ನೀರು ಬಿಡಲಾಗುತ್ತಿದೆ. ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶ ಪ್ರಶ್ನಿಸಿ ಕರ್ನಾಟಕ ನಾಳೆ ಅರ್ಜಿ ಸಲ್ಲಿಸುತ್ತಿದೆ. ಸುಪ್ರೀಂಕೋರ್ಟ್ ಕೈಗೊಳ್ಳುವ ನಿರ್ಧಾರ ಈಗ ತೀವ್ರ ಕುತೂಹಲ ಕೆರಳಿಸಿದೆ.

ನಾಳೆ ಪ್ರೊ.ಜಿ.ಎಚ್.ನಾಯಕ-88 ರಾಷ್ಟ್ರೀಯ ವಿಚಾರ ಸಂಕಿರಣ



ಪ್ರೊ.ಜಿ.ಎಚ್.ನಾಯಕ

ಮೈಸೂರು, ಸೆ.20(ಎಂಟಿವೈ)– ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನ ವಿವೇಕಾನಂದ ಸಭಾಂಗಣದಲ್ಲಿ ಸೆ.22 ರಂದು ಬೆಳಗ್ಗೆ 10ಕ್ಕೆ ‘ಪ್ರೊ. ಜಿ. ಎಚ್.ನಾಯಕ-88’ ಕನ್ನಡ ಸಾಹಿತ್ಯ ಮತ್ತು ಜೀವನ ಮೌಲ್ಯಗಳು ವಿಷಯ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಹೆಚ್.ಆರ್.ತಿಮ್ಮೇಗೌಡ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಬೆಂಗಳೂರಿನ ಅಭಿನವ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಈ ವಿಚಾರ ಸಂಕಿರಣ ಆಯೋಜಿಸಲಾಗಿದ್ದು, ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ನುಡಿ ಚಾಲನೆ ನೀಡುವರು. ನುಡಿ ಹೊತ್ತಿಗೆಯನ್ನು ಮೀರಾ ನಾಯಕ ಲೋಕಾರ್ಪಣೆ ಮಾಡಲಿದ್ದಾರೆ. ಪ್ರೊ.ಎನ್.ಬೋರಲಿಂಗಯ್ಯ, ಮಹಾಜನ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯ ಲಕ್ಷ್ಮಿ ಮುರಳೀಧರ್, ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ ಉಪಸ್ಥಿತರಿರುವರು. ನಂತರ ವಿಚಾರ ಸಂಕಿರಣ ನಡೆಯಲಿವೆ ಎಂದರು. ನಿರಂತರ ಅಧ್ಯಯನ, ಆಳವಾದ ಪಾಂಡಿತ್ಯ, ಸೂಕ್ಷ್ಮ ಸಂವೇದನೆ, ಖಚಿತ ಮತ್ತು ಸ್ಪಷ್ಟ ನಿಲುವನ್ನು ನಾಯಕರು ಒಳಗೊಂಡಿದ್ದರು. ಅವರ ಬರಹಗಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದ ಸಾಮಾಜಿಕ ಮೌಲ್ಯಗಳ ಚಹರೆ, ಮಾದರಿ ಗುರುತಿಸುವುದು ಈ ವಿಚಾರ ಸಂಕಿರಣದ ಉದ್ದೇಶವಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಪ್ರಾಚಾರ್ಯರಾದ ಡಾ.ಬಿ.ಆರ್. ಜಯ ಕುಮಾರಿ, ಲಿಂಗರಾಜು ಉಪಸ್ಥಿತರಿದ್ದರು.

ನಮ್ಮ ಸಂಸದರಿದ್ದಾರೆ

ಕಳೆದ 120 ವರ್ಷಗಳಲ್ಲೇ ಅತ್ಯಂತ ಕಷ್ಟದ ಸಂದರ್ಭವನ್ನು ಕರ್ನಾಟಕ ಎದುರಿಸುತ್ತಿದೆ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ 5 ಸಾವಿರ ಕ್ಯುಸೆಕ್ ನೀರು ಬಿಡುಗಡೆಗೆ ಆದೇಶ ನೀಡಿದ್ದು ಇಷ್ಟೆಲ್ಲಾ ಸಂಕಷ್ಟಗಳಿಗೆ ದಾರಿ ಮಾಡಿಕೊಟ್ಟಿದೆ ಎಂದರು.

ರಾಜ್ಯದ ನೆಲ- ಜಲದ ಸಂರಕ್ಷಣೆ ಸದಾ ಬೆನ್ನೆಲುಬಾಗಿ ನಾವು ನಿಲ್ಲುತ್ತೇವೆ ಎಂದು ಸಭೆಗೆ ಬಂದಿದ್ದಂತಹ ಬಿಜೆಪಿ, ಕಾಂಗ್ರೆಸ್, ಜನತಾದಳದ ಮತ್ತು ಪಕ್ಷೇತರ ಸಂಸದರು, ರಾಜ್ಯಸಭಾ ಸದಸ್ಯರಿಗೆ ಕರ್ನಾಟಕ ಸರ್ಕಾರ ಅಭಾರಿಯಾಗಿರುತ್ತದೆ ಎಂದು ಇದೇ ವೇಳೆ ಧನ್ಯವಾದಗಳನ್ನು ತಿಳಿಸಿದರು.


ಆಂಧ್ರಪ್ರದೇಶ ಮಾಜಿ ಸಿಎಂ ಚಂದ್ರಬಾಬು ನಾಯ್ಡು ಬಂಧನ ಖಂಡಿಸಿ ಪ್ರತಿಭಟನೆ



ಮೈಸೂರು,ಸೆ.20(ಪಿಎಂ)– ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಬಂಧನ ಖಂಡಿಸಿ ಅವರ ಅಭಿಮಾನಿಗಳೂ ಆದ ಮೈಸೂರು-ಚಾಮರಾಜನಗರ ಜಿಲ್ಲೆಗಳ ತೆಲುಗು ಭಾಷಿಗರು ಬುಧವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ಪುರಭವನ ಆವರಣದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಆಂಧ್ರಪ್ರದೇಶದ ಹಾಲಿ ಮುಖ್ಯಮಂತ್ರಿ ಜಗನ್ಮೋಹನ ರೆಡ್ಡಿಯವರ ದ್ವೇಷದ ರಾಜಕಾರಣಕ್ಕೆ ಚಂದ್ರಬಾಬು ನಾಯ್ಡು ಅವರನ್ನು ಬಂಧಿಸಲಾಗಿದೆ. ಚಂದ್ರಬಾಬು ನಾಯ್ಡು ಅವರ ಆಡಳಿತದಲ್ಲಿ ಯಾವುದೇ ಭ್ರಷ್ಟಾಚಾರ ನಡೆದಿಲ್ಲ. ಈ ಕೂಡಲೇ ಅವರನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು. ಮುಖಂಡರಾದ ಚಾಮರಾಜನಗರದ ಪ್ರಭಾಕರ್, ಶ್ರೀನಿವಾಸಬಾಬು ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕಾವೇರಿ ನೀರು ಕುಡಿಯುವ ಪ್ರತಿಯೊಬ್ಬರೂ ಧ್ವನಿ ಎತ್ತಬೇಕು



ಮೈಸೂರು, ಸೆ.20(ಪಿಎಂ)– ಕಾವೇರಿ ನದಿ ನೀರು ಹಂಚಿಕೆ ವಿವಾದ ಕುರಿತಂತೆ ರಾಜ್ಯದ ಪರವಾಗಿ ಕಾವೇರಿ ನೀರು ಕುಡಿಯುವ ಪ್ರತಿಯೊಬ್ಬರೂ ಧ್ವನಿ ಎತ್ತಬೇಕೆಂದು ಮಾಜಿ ಮೇಯರ್ ಸಂದೇಶ್‌ಸ್ವಾಮಿ ಮನವಿ ಮಾಡಿದ್ದಾರೆ.

ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ನಾಡಿನ ರೈತರು ವಿವಿಧ ರೀತಿಯಲ್ಲಿ ಹೋರಾಟ ಮಾಡುತ್ತಿದ್ದು, ಈ ಹೋರಾಟ ಬಹುತೇಕ ರಾಜ್ಯದ ರೈತರಿಗೆ ಸೀಮಿತವಾಗಿದೆ. ಇದರಿಂದ ಕಾವೇರಿ ನೀರನ್ನು ಕೇವಲ ಕೃಷಿಗೆ ಮಾತ್ರವೇ ಬಳಸಲಾಗುತ್ತಿದೆಯೇ ಎಂಬ ಪ್ರಶ್ನೆ ಮೂಡುತ್ತದೆ. ಕಾವೇರಿ ನೀರು ಕೊಡಗು, ಮೈಸೂರು, ಮಂಡ್ಯ, ರಾಮನಗರ, ಬೆಂಗಳೂರು ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದ ಜನತೆಯ ದಾಹ ನೀಗಿಸುತ್ತಿದೆ. ಅಲ್ಲದೆ, ಈ ಭಾಗದ ಗೃಹ ಬಳಕೆ, ಕಟ್ಟಡ ನಿರ್ಮಾಣ, ಕೈಗಾರಿಕೆಗಳ ಅಗತ್ಯತೆಗೂ ಬಳಕೆಯಾಗುತ್ತಿದೆ. ಆದ್ದರಿಂದ ಕಾವೇರಿ ಕಣಿವೆಯಲ್ಲಿ ವಾಸ ಮಾಡುತ್ತಿರುವ ಪ್ರತಿಯೊಬ್ಬ ಜನಸಾಮಾನ್ಯರೂ ರಾಜ್ಯದ ಪರವಾಗಿ ಹೋರಾಟನಿರತರಾಗಬೇಕು. ಪತ್ರ ಚಳವಳಿ, ಧರಣಿ ಹಾಗೂ ಪ್ರತಿಭಟನೆ ಮೂಲಕ ಕೇಂದ್ರ ಸರ್ಕಾರ ಹಾಗೂ ಕಾವೇರಿ ನೀರು ನಿಯಂತ್ರಣಾ ಸಮಿತಿಯನ್ನು ಒತ್ತಾಯಿಸುವ ಅಗತ್ಯವಿದೆ.

ತಮಿಳುನಾಡಿಗೆ ಪ್ರತಿದಿನ 5 ಸಾವಿರ ಕ್ಯೂಸೆಕ್ ನೀರನ್ನು 15 ದಿನಗಳ ಕಾಲ ಬಿಡುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ ಕರ್ನಾಟಕ ಸರ್ಕಾರಕ್ಕೆ ಆದೇಶಿಸಿರುವುದು ನ್ಯಾಯ ಸಮ್ಮತವಲ್ಲ. ಏಕೆಂದರೆ ಮಳೆ ಕೊರತೆಯಿಂದ ಈ ಬಾರಿ ಕಾವೇರಿ ನದಿಗೆ ಸಂಬಂಧಿಸಿದ ಜಲಾಶಯಗಳು ಭರ್ತಿಯಾಗದೇ ರೈತರ ಬೆಳೆಗೆ ಹಾಗೂ ಜನರ ಬಳಕೆಗೆ ತೊಂದರೆ ಎದುರಾಗಿದೆ.

ಮೊದಲು ನಮ್ಮ ಪಾಲಿನ ನೀರನ್ನು ನಾವೇ ಬಳಕೆ ಮಾಡಿಕೊಳ್ಳುವುದು ನಮ್ಮ ಹಕ್ಕು. ನಂತರ ಹೆಚ್ಚುವರಿಯಾದರೆ ಮಾತ್ರ ಹಂಚಿಕೆ ವಿಚಾರವಷ್ಟೆ. ಕಳೆದ ನಾಲ್ಕೈದು ವರ್ಷಗಳಿಂದ ತಮಿಳುನಾಡಿಗೆ ನಿಗದಿಯಂತೆ ನೀರು ಹರಿಸಿದ್ದೇವೆ ಎಂಬುದನ್ನು ತಮಿಳುನಾಡು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ತಮಿಳು ನಾಡಿನ ಒತ್ತಾಯಕ್ಕೆ ಮಣಿದು ಕಾವೇರಿ ನೀರು ನಿಯಂತ್ರಣಾ ಸಮಿತಿಯವರು ಎಲ್ಲೋ ಕುಳಿತು ನೀರು ಬಿಡುವಂತೆ ಆದೇಶಿಸಿರುವುದು ಅವೈಜ್ಞಾನಿಕ ಎಂದು ಅಭಿಪ್ರಾಯಪಟ್ಟಿದ್ದಾರೆ.



ಬಿಜೆಪಿ ಮುಖಂಡರಾದ ಎಂ. ಕುಮಾರ್ (ಸಂಜೀವಿನಿ ಕುಮಾರ್) ಅವರು ಕಳೆದ ಸೋಮವಾರ ತಮ್ಮ ವಾರ್ಡಿನ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ 35ಕ್ಕೂ ಹೆಚ್ಚು ಮಹಿಳಾ ಮತ್ತು ಪುರುಷ ಪೌರಕಾರ್ಮಿಕರಿಗೆ ಗೌರಿ-ಗಣೇಶ ಹಬ್ಬದ ಹಿನ್ನೆಲೆಯಲ್ಲಿ ಹೊಸ ಬಟ್ಟೆ, ಸಿಹಿ ವಿತರಿಸಿ ಶುಭಾಶಯ ಕೋರಿದರು. ಕಾರ್ಯಕ್ರಮದಲ್ಲಿ ಆರೋಗ್ಯ ಪರಿವೀಕ್ಷಕ ಜಯರಾಮ್, ಮುಖಂಡರಾದ ಡಿ.ವಿ.ನಾಗರಾಜ್, ಕೆ. ದೇವೇಗೌಡ, ಪ್ರಶಾಂತ್, ಅಖಿಲೇಶ್, ಅವಧೇರ್ ಸಿಂಗ್, ಚಂದ್ರು, ಬಸವರಾಜ್, ರವಿಕುಮಾರ್, ನಂಜಪ್ಪ, ಶಿವಕುಮಾರ್, ಕಿಶೋರ್‌ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಪುರಾಣ ಪುಣ್ಯಕಥೆಗಳ ರಾಕ್ಷಸ ಕೃತ್ಯಕ್ಕೂ ಈಗಿನ ಭಯೋತ್ಪಾದಕರ ದುಷ್ಕೃತ್ಯಕ್ಕೂ ವ್ಯತ್ಯಾಸವೇ ಇಲ್ಲ

ಮೈಸೂರು ವ್ಯಾಸನಕೆರೆ ಪ್ರಭಂಜನಾಚಾರ್ಯರ ಅಭಿಮತ



ಮೈಸೂರು, ಸೆ.20(ಎಸ್‌ಪಿಎನ್)– ಪುರಾಣದಲ್ಲಿ ಬರುವ ರಾಕ್ಷಸರ ಕೃತ್ಯಗಳಿಗೂ ಈಗಿನ ಭಯೋತ್ಪಾದಕರು ಜಗತ್ತಿನ ವಿವಿಧೆಡೆ ನಡೆಸುತ್ತಿರುವ ದುಷ್ಕೃತ್ಯಗಳಿಗೂ ಯಾವುದೇ ವ್ಯತ್ಯಾಸ ಇಲ್ಲ ಎಂದು ಮೈಸೂರಿನ ವ್ಯಾಸನಕೆರೆ ಪ್ರಭಂಜನಾಚಾರ್ಯ ಅಭಿಪ್ರಾಯಪಟ್ಟರು.

ಮೈಸೂರಿನ ಸಾಹುಕಾರ್ ಚೆನ್ನಯ್ಯ ರಸ್ತೆಯ ಟಿ.ಕೆ.ಬಡಾವಣೆ ಶ್ರೀಕೃಷ್ಣಧಾಮದಲ್ಲಿ ಚಾತುರ್ಮಾಸ್ಯ ಸಮಿತಿಯಿಂದ ಉಡುಪಿಯ ಪೇಜಾವರ ಮಠದ ಪೀಠಾಧ್ಯಕ್ಷರಾದ ಶ್ರೀವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರ 36ನೇ ಚಾತುರ್ಮಾಸ್ಯ ವ್ರತ ಸಂಕಲ್ಪ ಅಂಗವಾಗಿ ನಡೆದ ವಿಶೇಷ ಪ್ರವಚನ ಮಾಲೆಯಲ್ಲಿ ‘ದಶಮ ಸ್ಕಂದ’ ಕುರಿತು ಅವರು ಮಾತನಾಡಿದರು.

ಪುರಾಣದಲ್ಲಿ ಬರುವ ರಾಕ್ಷಸ ಪರಂಪರೆಯಲ್ಲಿ ದೇವರನ್ನು ಕುರಿತು ತಪಸ್ಸು ಮಾಡಿ, ಸಾವನ್ನು ಗೆಲ್ಲುವ ವರಗಳನ್ನು ಬೇಡುತ್ತಿದ್ದರು. ಮತ್ತೆ ಅದೇ ವರಗಳನ್ನು ದೇವತೆಗಳ ಮೇಲೆಯೇ ಪ್ರಯೋಗ ಮಾಡಲು ಮುಂದಾಗುತ್ತಿದ್ದರು. ಮುಂದೆ ದೇವತೆಗಳು-ರಾಕ್ಷಸರ ನಡುವೆ ಯುದ್ಧಗಳಾಗುತ್ತಿದ್ದವು. ಇಂತಹ ಅನೇಕ ಪ್ರಸಂಗಗಳನ್ನು ಉದಾಹರಣೆಯಾಗಿ ನೀಡಬಹುದು ಎಂದರು.

ಪ್ರಸ್ತುತ ಜಗತ್ತಿನ ವಿವಿಧ ದೇಶಗಳ ಚುಕ್ಕಾಣಿ ಹಿಡಿಯಲು ಅಥವಾ ತಮ್ಮ ಅಧಿಪತ್ಯ ಸ್ಥಾಪಿಸಲು ಕೆಲವು ಭಯೋತ್ಪಾದಕ ಸಂಘಟನೆಗಳು ಮುಗ್ಧ ಜನರನ್ನು ಕೊಂದು ಭಯದ ವಾತಾವರಣ ಸೃಷ್ಟಿಸುತ್ತಿದ್ದಾರೆ. ಈ ನಡವಳಿಕೆಗಳನ್ನು ಗಮನಿಸಿದರೆ, ಪುರಾಣದ ರಾಕ್ಷಸರಿಗೂ, ಈಗಿನ ಭಯೋತ್ಪಾದಕರಿಗೂ ಯಾವುದೇ ವ್ಯತ್ಯಾಸವಿಲ್ಲ ಎಂದರು.

ನಂತರ ಉಡುಪಿ ಪೇಜಾವರ ಮಠದ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದಂಗಳವರು ಶ್ರೀಮದ್ರಾಮಾಯಣ ಪ್ರವಚನ ನೀಡುತ್ತ, ತಂದೆ ಆದೇಶವನ್ನು ಪಾಲಿಸಲು ಕಾಡಿಗೆ ಹೊರಟಿರುವ ಶ್ರೀರಾಮಚಂದ್ರ, ಸೀತಾದೇವಿ, ಲಕ್ಷ್ಮಣ ಸೇರಿದಂತೆ ಪುರಜನರ ಭಾವನೆಗಳನ್ನು ಶ್ರೀಗಳು ಮನೋಜ್ಞವಾಗಿ ವಿವರಿಸಿದರು. ನಂತರ ವಿದುಷಿ ಗಾರ್ಗಿ ಶಬರಾಯ ಭಕ್ತಿಗೀತೆಗಳನ್ನು ಹಾಡಿ ಪ್ರೇಕ್ಷಕರನ್ನು ರಂಜಿಸಿದರು.

ಸುಗ್ಗಿ ಹಬ್ಬದ ಕರ್ಮ ಪೂಜೆಗೆ ಮರಳು ತರಲು ಹೋದ ನಾಲ್ವರು ಬಾಲಕಿಯರು ಕೊಳದಲ್ಲಿ ಮುಳುಗಿ ಸಾವು

ಓರ್ವ ಬಾಲಕಿ ರಕ್ಷಣೆ

ರಾಂಚಿ, ಸೆ.20– ಮಂಗಳವಾರ ಜಾರ್ಖಂಡ್‌ನ ಗಿರಿದಿಹ್‌ನಲ್ಲಿ ಸುಗ್ಗಿಯ ಹಬ್ಬದ ಕರ್ಮಪೂಜೆಗೆ ಮರಳು ತರಲೆಂದು ಹೊಂಡಕ್ಕೆ ತೆರಳಿದ್ದ ನಾಲ್ವರು ಬಾಲಕಿಯರು ನೀರಿನಲ್ಲಿ ಮುಳುಗಿ ಸಾವೀಗೀಡಾಗಿರುವ ದಾರುಣ ಘಟನೆ ನಡೆದಿದೆ.

ಪೊಲೀಸರ ಪ್ರಕಾರ, ಗಿರಿದಿಹ್‌ನ ಜಿಲ್ಲಾ ಕೇಂದ್ರದಿಂದ ಸುಮಾರು 6 ಕಿಮೀ ದೂರದ ಪಚಂಬಾ ಪೊಲೀಸ್ ಠಾಣಾ ವ್ಯಾಪ್ತಿಯ ಪಥಿಯಾತಂಡ್ ಗ್ರಾಮದಲ್ಲಿ ಕರ್ಮಪೂಜೆ ಆಚರಣೆಗೂ ಮುನ್ನ ಸ್ನಾನ ಮಾಡುವಾಗ ಅವರು ಸಾವಿಗೀಡಾಗಿದ್ದಾರೆ. ಪೊಲೀಸರ ಪ್ರಕಾರ, ಅವರೆಲ್ಲರೂ 12 ರಿಂದ 15 ವರ್ಷದೊಳಗಿನವರು. ಮೃತ ಬಾಲಕಿಯರನ್ನು ಮಮತಾ ಕುಮಾರಿ (15), ದಿವ್ಯಾ ಕುಮಾರಿ (12), ಸೃಷ್ಟಿ ಕುಮಾರಿ (12) ಮತ್ತು ಸಂಧ್ಯಾ ಕುಮಾರಿ (14) ಎಂದು ಗುರುತಿಸಲಾಗಿದೆ.

ಮೈಸೂರು ಮಿತ್ರ

ಮಹಾರಾಣಿ ವಿಜ್ಞಾನ ಕಾಲೇಜಿಗೆ ಶಾಸಕ ಕೆ.ಹರೀಶ್‌ಗೌಡ ಭೇಟಿ



ಮೈಸೂರು, ಸೆ. 20– ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ. ಹರೀಶ್ ಗೌಡ ಅವರು ಮಹಾರಾಣಿ ವಿಜ್ಞಾನ ಕಾಲೇಜಿಗೆ ಕರ್ನಾಟಕ ಹೌಸಿಂಗ್ ಬೋರ್ಡ್ (ಕೆ.ಹೆಚ್.ಬಿ.) ಕಾರ್ಯಪಾಲಕ ಅಭಿಯಂತರ ಸೋಮಶೇಖರ್ ಹಾಗೂ ಅವರ ತಾಂತ್ರಿಕ ಸಿಬ್ಬಂದಿಗಳೊಂದಿಗೆ ಭೇಟಿ ನೀಡಿ, ಮಹಾರಾಣಿ ವಿಜ್ಞಾನ ಹಾಗೂ ಕಲಾ ಕಾಲೇಜಿನ ಆವರಣದಲ್ಲಿರುವ ಕಟ್ಟಡ ಹಾಗೂ ಹೊಸ ಕಟ್ಟಡ ಕಾಮಗಾರಿಯ ಬಗ್ಗೆ ಮಾಹಿತಿ ಪಡೆದರು. ಸ್ಥಳದಲ್ಲಿ ಹಾಜರಿದ್ದ ಮಹಾರಾಣಿ ವಿಜ್ಞಾನ ಕಾಲೇಜು, ಮಹಾರಾಣಿ ಕಲಾ ಕಾಲೇಜಿನ ಪ್ರಾಂಶುಪಾಲರು, ಸಿಬ್ಬಂದಿ ವರ್ಗ ಕಟ್ಟಡದ ಸ್ಥಿತಿಗತಿ ಬಗ್ಗೆ ವಿವರಿಸಿದರು.

ತರಗತಿ ನಡೆಸಲು ಹೆಚ್ಚಿನ ಕೊಠಡಿಗಳ ಅವಶ್ಯಕತೆ ಇರುವುದಾಗಿಯೂ ತಿಳಿಸಿದರು. ಕಾಲೇಜಿಗೆ ಆಗಬೇಕಾದ ಅಭಿವೃದ್ಧಿ ಕಾಮಗಾರಿಗಳ ಕುರಿತು ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ ಸಚಿವರೊಂದಿಗೆ ಚರ್ಚಿಸಿ, ಅಗತ್ಯ ಕ್ರಮಕೈಗೊಳ್ಳುವುದಾಗಿ ಅವರು ತಿಳಿಸಿದರು.

ಜೆಎಸ್‌ಎಸ್ ಪ್ರೌಢಶಾಲೆಯ ವಿದ್ಯಾರ್ಥಿಗಳು ಜಿಲ್ಲಾಮಟ್ಟಕ್ಕೆ ಆಯ್ಕೆ



ಸುತ್ತೂರು, ಸೆ.20– ಶಾಲಾ ಶಿಕ್ಷಣ ಇಲಾಖೆಯ ವತಿಯಿಂದ ನಂಜನಗೂಡಿನ ಜೂನಿಯರ್ ಕಾಲೇಜು ಕ್ರೀಡಾಂಗಣದಲ್ಲಿ ನಡೆದ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ ಬಹುಮಾನ ಪಡೆದು ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಬಾಲಕರ ಮೇಲಾಟಗಳ ವಿಭಾಗ : ಮಹಾಂತೇಶ್ –1500 ಮೀ ಓಟದಲ್ಲಿ ಪ್ರಥಮ ಸ್ಥಾನ, ಧರೆಪ್ಪ 3000 ಮೀ ಓಟ–ದ್ವಿತೀಯ, ಅಕ್ಷಯ್ 100 ಮೀ ಓಟ–ದ್ವಿತೀಯ, ಯಶ್ವಂತ್– ಎತ್ತರಜಿಗಿತ ತೃತೀಯ, ಅಕ್ಷಯ್ ಮತ್ತು ತಂಡ– 400X100 ಮೀ ರಿಲೇಯಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ. ಬಾಲಕಿಯರ ವಿಭಾಗ : ಕಸ್ತೂರಿ–1500 ಮೀ ದ್ವಿತೀಯ, ಜಾನು ಗುಂಡು ಎಸೆತದಲ್ಲಿ ತೃತೀಯ, ಬೃಂದಾ– ಎತ್ತರ ಜಿಗಿತ ತೃತೀಯ ಸ್ಥಾನ ಗಳಿಸಿದ್ದಾರೆ.

ನಾಳೆಯಿಂದ ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್‌ನಲ್ಲಿ ವಿಶೇಷ ಕೈಮಗ್ಗ ಮೇಳ



ಮೈಸೂರು, ಸೆ. 20–ಜವಳಿ ಅಭಿವೃದ್ಧಿ ಆಯುಕ್ತರು ಕೈಮಗ್ಗ ಜವಳಿ ಮಂತ್ರಾಲಯ, ನವದೆಹಲಿ, ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು ಕರ್ನಾಟಕ ಸರಕಾರ ಮತ್ತು ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ, ಕಾವೇರಿ ಹ್ಯಾಂಡ್‌ಲೂಮ್ಸ್, ಬೆಂಗಳೂರು ಮತ್ತು ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ ಸಂಯುಕ್ತ ಆಶ್ರಯದಲ್ಲಿ ಸೆ. 22 ರಿಂದ ಅ. 6 ರವರೆಗೆ ವಿಶೇಷ ಕೈಮಗ್ಗ ಮೇಳ, ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್‌ನಲ್ಲಿ ಏರ್ಪಡಿಸಲಾಗಿದೆ. ಈ ಮೇಳದಲ್ಲಿ ದೇಶದ ಸುಮಾರು 75ಕ್ಕೂ ಹೆಚ್ಚು ಕೈಮಗ್ಗ ನೇಕಾರರು ಮತ್ತು ಕುಶಲಕರ್ಮಿಗಳು ಉತ್ಪಾದಿಸಿರುವ ಉತ್ಪನ್ನಗಳು ಪ್ರದರ್ಶನ ಮತ್ತು ಮಾರಾಟಗೊಳ್ಳುತ್ತಿದೆ. ನಮ್ಮ ರಾಜ್ಯದ ವಿವಿಧ ಜಿಲ್ಲೆಗಳಾದ ಚಿತ್ರದುರ್ಗ, ಹಾವೇರಿ, ಚಾಮರಾಜನಗರ, ಮಂಡ್ಯ, ರಾಮನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಶಿವಮೊಗ್ಗ, ಚಿತ್ರದುರ್ಗ, ಗದಗ, ಬಾಗಲಕೋಟೆ, ಗುಲ್ಬರ್ಗ ಇನ್ನೂ ಹಲವು ಜಿಲ್ಲೆಗಳ ಕೈಮಗ್ಗ ನೇಕಾರರು ತಯಾರಿಸಿದ ರೇಷ್ಮೆ, ಹತ್ತಿ, ಉಣ್ಣೆ ಹಾಗೂ ವಿವಿಧ ಮಿಶ್ರಿತ ನೂಲುಗಳಿಂದ ತಯಾರಿಸಲಾಗ ಕೈಮಗ್ಗ ಉತ್ಪನ್ನಗಳನ್ನು, ಇದರ ಜೊತೆಗೆ ನಮ್ಮ ದೇಶದ ಸುಮಾರು 15ಕ್ಕೂ ಹೆಚ್ಚು ರಾಜ್ಯಗಳ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟವನ್ನು ಏರ್ಪಡಿಸಲಾಗಿದೆ.

ಎಂಜಿನಿಯರ್‌ಗಳ ಪಾತ್ರ ಅತ್ಯಂತ ಮಹತ್ವದ್ದು



ಮೈಸೂರು, ಸೆ.20–ಮೈಸೂರಿನ ಜಯನಗರದಲ್ಲಿರುವ ರೋಟರಿ ಮೈಸೂರು ಸೌತ್ ಈಸ್ಟ್ ವತಿಯಿಂದ ನಡೆದ ಸರ್ ಎಂ ವಿಶ್ವೇಶ್ವರಯ್ಯ ಜಯಂತಿ ಹಾಗೂ ಇಂಜಿನಿಯರ್ಸ್ ಡೇ ಕಾರ್ಯಕ್ರಮ ಆಯೋಜಿಸಲಾಗಿತ್ತು.

ರೋಟರಿ ಮೈಸೂರು ಸೌತ್ ಈಸ್ಟ್ ಅಧ್ಯಕ್ಷ ಕೆ.ಎನ್. ಮುರಳಿಧರ್, ಹಿರಿಯ ಇಂಜಿನಿಯರ್ ಎ.ಎಸ್. ಧರ್ಮೇಂದ್ರ ಕುಮಾರ್ ಅವರನ್ನು ಸನ್ಮಾನಿಸಿ ಮಾತನಾಡಿ, ಅಭಿವೃದ್ಧಿ ಯೋಜನೆಗಳು ಹೆಚ್ಚುತ್ತಿರುವ ಇಂದಿನ ದಿನಗಳಲ್ಲಿ ಇಂಜಿನಿಯರ್‌ಗಳ ಪಾತ್ರ ಅತ್ಯಂತ ಮಹತ್ವದಾಗಿದ್ದು, ಇಂಜಿನಿಯರುಗಳ ಪೂರ್ವಯೋಚಿತ ನಿರ್ಣಯಗಳಿಂದಾಗಿ ಯೋಜನೆಗಳ ಯಶಸ್ಸು ಸಾಧ್ಯ ಎಂದರು.

ಭವ್ಯ ಭಾರತದ ನಿರ್ಮಾಣಕ್ಕೆ ಕೊಡುಗೆ ನೀಡಿರುವ ಇಂಜಿನಿಯರ್‌ಗಳನ್ನು ಗೌರವಿಸಲು ಇಂಜಿನಿಯರ್ ದಿನ ಅರ್ಥಪೂರ್ಣ. ಸರ್ ಎಂ.ವಿಶ್ವೇಶ್ವರಯ್ಯ ಅವರ ಜನ್ಮದಿನವನ್ನು ಇಂಜಿನಿಯರ್ ಡೇ ಎಂದು ಆಚರಿಸಲಾಗುತ್ತದೆ. ಅವರನ್ನು ಇಂದಿಗೂ ಸ್ಮರಿಸಿಕೊಳ್ಳಲು ಕಾರಣ ಅವರು ಮಾಡಿದ ಕೆಲಸಗಳು. ಜಲಾಶಯ ನಿರ್ಮಾಣ, ತೂಗು ಸೇತುವೆ ನಿರ್ಮಾಣದಿಂದ ಹಿಡಿದು ಸಮಾಜಕ್ಕೆ ನೆರವಾಗುವಂತಹ ಅದೆಷ್ಟೋ ಉತ್ತಮ ಕಾರ್ಯಗಳನ್ನು ತಮ್ಮ ಜೀವಿತಾವಧಿಯಲ್ಲಿ ಮಾಡಿದ್ದಾರೆ. ಹಾಗೆ ಯುವ ಜನಾಂಗ ಸರ್.ಎಂ. ವಿಶ್ವೇಶ್ವರಯ್ಯನವರ ಆದರ್ಶಗಳನ್ನು ಪಾಲಿಸಿ ಉತ್ತಮ ರೀತಿಯಲ್ಲಿ ಸಮಾಜದ ಏಳಿಗೆಯಲ್ಲಿ ಪಾತ್ರ ವಹಿಸಬೇಕು ಎಂದರು.

ಸರ್. ಎಂ. ವಿಶ್ವೇಶ್ವರಯ್ಯರವರಂತೆ ಪ್ರತಿಯೊಬ್ಬರು ಉತ್ತಮ ಇಂಜಿನಿಯರುಗಳಾಗಿ ದೇಶದ ವಿಜ್ಞಾನ ಮತ್ತು ತಂತ್ರಜ್ಞಾನ ಅಭಿವೃದ್ಧಿಗೆ ಸಹಕಾರಿಯಾಗುವಂತೆ ಬದುಕಿ ಸಮಾಜದ ಒಳಿತಿಗೆ ಪಾತ್ರರಾಗಿ ಎಂದು ನುಡಿದರು. ಇದೇ ವೇಳೆ ಸರ್. ಎಂ. ವಿಶ್ವೇಶ್ವರಯ್ಯ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ರೋಟರಿ ಮೈಸೂರು ಸೌತ್ ಈಸ್ಟ್ ಕಾರ್ಯದರ್ಶಿ ಎನ್.ಟಿ.ಗಿರೀಶ್, ಸದ್ಯಸರು ಹಾಜರಿದ್ದರು.

ಕಾವೇರಿ ವಿಚಾರದಲ್ಲಿ ಕರ್ನಾಟಕಕ್ಕೆ ಅನ್ಯಾಯವಾದರೆ ಪಕ್ಷಾತೀತವಾಗಿ ಪಾದಯಾತ್ರೆ

ರಾಜಕೀಯ ಪಕ್ಷಗಳಿಗೆ ಶಾಸಕ ಶ್ರೀವತ್ಸ ಸಲಹೆ



ಮೈಸೂರು, ಸೆ.20(ಬಿಎಲ್‌ಯು)– ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಸಂಬಂಧ ಸುಪ್ರೀಂಕೋರ್ಟ್‌ನಲ್ಲಿ ನಾಳೆ ವ್ಯತಿರಿಕ್ತ ತೀರ್ಪು ಬಂದರೆ ಪಕ್ಷಾತೀತವಾಗಿ ಎಲ್ಲಾ ನಾಯಕರು ಪಾದಯಾತ್ರೆ ಮಾಡುವ ತೀವ್ರ ರೀತಿಯ ಹೋರಾಟದ ನಿಲುವು ರೂಪಿಸಬೇಕು ಎಂದು ಶಾಸಕ ಟಿ.ಎಸ್. ಶ್ರೀವತ್ಸ ಸಲಹೆ ನೀಡಿದ್ದಾರೆ.

ಮೈಸೂರಿನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಕಾವೇರಿ ನೀರು ಬಿಡುಗಡೆ ಸಂಬಂಧ ನಾಳೆ ಸುಪ್ರೀಂಕೋರ್ಟ್ ನಲ್ಲಿ ವಿಚಾರಣೆ ಇದೆ. ಕಾವೇರಿ ಜಲಾಯನ ಪ್ರದೇಶದ ಬೆಳೆಯ ಪರಿಸ್ಥಿತಿ, ಕುಡಿಯುವ ನೀರಿನ ಅವಶ್ಯಕತೆ ಹಾಗೂ ಜಲಾಶಯದಲ್ಲಿರುವ ನೀರಿನ ಲಭ್ಯತೆ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಕರ್ನಾಟಕದ ವಕೀಲರು ಸುಪ್ರೀಂ ಕೋರ್ಟ್‌ನಲ್ಲಿ ಸಮರ್ಥ ವಾದ ಮಾಡಬೇಕು ಎಂದರು. ಒಂದು ವೇಳೆ ಸುಪ್ರೀಂಕೋರ್ಟ್‌ನಲ್ಲಿ ವ್ಯತಿರಿಕ್ತ ತೀರ್ಪು ಬಂದರೆ ಪಕ್ಷಭೇದ ಮರೆತು ಎಲ್ಲಾ ನಾಯಕರು ಒಗ್ಗಟ್ಟಾಗಬೇಕು. ಪಾದಯಾತ್ರೆ ಸೇರಿದಂತೆ ತೀವ್ರ ರೀತಿಯ ಹೋರಾಟ ರೂಪಿಸಬೇಕು. ಒಂದು ವೇಳೆ ಕಾಂಗ್ರೆಸ್ ಪಕ್ಷ ಈ ಹೋರಾಟದಿಂದ ಹಿಂದೆ ಸರಿದರೆ, ಬಿಜೆಪಿಯಂತೂ ಹೋರಾಟ ಮಾಡುತ್ತದೆ ಎಂದು ಹೇಳಿದರು.

ಕೆಆರ್‌ಎಸ್, ಕಬಿನಿ ಜಲಾಶಯಗಳಲ್ಲಿ ನೀರಿನ ಪ್ರಮಾಣ ಬಹಳ ಕಡಿಮೆ ಇದೆ. ಈಗಿರುವ ನೀರು ಮೈಸೂರು, ಬೆಂಗಳೂರು ಸೇರಿದಂತೆ ಇತರೆಡೆಗೆ ಕುಡಿಯುವ ನೀರಿಗೂ ಕೊರತೆ ಆಗಲಿದೆ. ಇಂತಹ ಪರಿಸ್ಥಿತಿಯಲ್ಲಿ ಮತ್ತೆ ತಮಿಳುನಾಡಿಗೆ ನೀರು ಬಿಡಬೇಕು ಎಂದರೆ ಹೇಗೆ ಎಂದು ಶ್ರೀವತ್ಸ ಪ್ರಶ್ನಿಸಿದರು.

ಚೈತ್ರ ನನಗೆ ಪರಿಚಯವಿಲ್ಲ: ಬಿಜೆಪಿ ಟಿಕೆಟ್ ಕೊಡಿಸುವುದಾಗಿ ಕೋಟ್ಯಾಂತರ ರೂಪಾಯಿ ವಂಚನೆ ಮಾಡಿರುವ ಚೈತ್ರ ಕುಂದಾಪುರ ನನಗೆ ಪರಿಚಯ ಇಲ್ಲ. ಅವರು ಯಾರು ಎಂದು ನನಗೆ ಗೊತ್ತಿಲ್ಲ. ಆದರೆ ಬಿಜೆಪಿ ನಾಯಕರ ವೇಷ ಧರಿಸಿ ಬಂದವರಿಗೆ ಹಣ ಕೊಟ್ಟಿರುವ ವ್ಯಕ್ತಿ ಎಂತಹ ಮೂರ್ಖನಿರಬಹುದು ಎಂದು ಹೇಳಿದರು. ಹಣ ಪಡೆದಿರುವುದು ಎಷ್ಟು ಅಪರಾಧವೋ, ಹಣ ಕೊಟ್ಟಿರುವುದು ಕೂಡ ಅಷ್ಟೇ ಅಪರಾಧವಾಗಿದೆ. ರಾಜಕೀಯ ಪಕ್ಷದ ನಾಯಕನ ಮುಖವಾಡ ಧರಿಸಿ ವಂಚನೆ ಮಾಡಿರುವುದು ದರೋಡೆಗೆ. ಇಂತಹ ವಂಚನೆ ಮಾಡಿರುವ ಆರೋಪಿಗಳು ಯಾರೇ ಆಗಿದ್ದರೂ ಜೈಲಿಗೆ ಕಳುಹಿಸಬೇಕು ಎಂದು ಶ್ರೀವತ್ಸ ಆಗ್ರಹಿಸಿದರು.

ಇಂದು ವಿಶ್ವಕರ್ಮ ಜಯಂತಿ ಅಂಗವಾಗಿ ಹಿರಿಯ ಶಿಲ್ಪಿಗಳಿಗೆ ಸನ್ಮಾನ ಕಾರ್ಯಕ್ರಮ

ಮೈಸೂರು, ಸೆ. 20– ಮೈಸೂರಿನ ಪ್ರಜ್ಞಾವಂತ ನಾಗರಿಕ ವೇದಿಕೆ ಹಾಗೂ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ ವಿಶ್ವಕರ್ಮ ಜಯಂತಿ ಅಂಗವಾಗಿ ಹಿರಿಯ ಶಿಲ್ಪಿಗಳಿಗೆ ಸನ್ಮಾನ ಕಾರ್ಯಕ್ರಮವನ್ನು ನಗರದ ಇರ್ವಿನ್ ರಸ್ತೆಯಲ್ಲಿರುವ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಸೆಪ್ಟೆಂಬರ್ 21ರಂದು ಬೆಳಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ ಎಂದು ಪ್ರಜ್ಞಾವಂತ ನಾಗರಿಕ ವೇದಿಕೆ ಅಧ್ಯಕ್ಷ ಕಡಕೊಳ ಜಗದೀಶ್ ತಿಳಿಸಿದ್ದಾರೆ.

ಮುಖ್ಯ ಅತಿಥಿಗಳಾಗಿ ವೆಂಗಿಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ, ಮಹಾಪೌರ ಶಿವಕುಮಾರ್, ಮಾಜಿ ಮಹಾಪೌರ ಸಂದೇಶ ಸ್ವಾಮಿ, ಹಿರಿಯ ಸಮಾಜ ಸೇವಕ ಕೆ ರಘು ರಾಮ್ ವಾಜಪೇಯಿ, ನಗರಪಾಲಿಕೆ ಸದಸ್ಯರಾದ ರಮಣಿ, ಮೈಸೂರು ಜಿಲ್ಲಾ ವಿಶ್ವಕರ್ಮ ಸಂಘದ ಅಧ್ಯಕ್ಷ ರಿಷಿ ವಿಶ್ವಕರ್ಮ, ಪ್ರಧಾನ ಕಾರ್ಯದರ್ಶಿ ಸಿ.ಟಿ. ಆಚಾರ್ಯ, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಅರ್ಚಕರ ಸಂಘದ ಅಧ್ಯಕ್ಷ ವಿದ್ವಾನ್ ಕೃಷ್ಣಮೂರ್ತಿ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ತರಗತಿಯಲ್ಲಿ ವಿದ್ಯಾರ್ಥಿಗಳಿಬ್ಬರ ನಡುವೆ ಮಾರಾಮಾರಿ

ಪ್ರಥಮ ಪಿಯುಸಿ ವಿದ್ಯಾರ್ಥಿ ಕೊಲೆಯಲ್ಲಿ ಅಂತ್ಯ



ಮೈಸೂರು, ಸೆ.20(ಆರ್‌ಕೆ)–ತರಗತಿಯಲ್ಲೇ ವಿದ್ಯಾರ್ಥಿಗಳಿಬ್ಬರ ನಡುವೆ ನಡೆದ ಮಾರಾಮಾರಿ ವೇಳೆ ಪ್ರಥಮ ಪಿಯುಸಿ ವಿದ್ಯಾರ್ಥಿ ಕೊಲೆಯಾಗಿರುವ ದುರ್ಘಟನೆ ಮೈಸೂರಿನ ಜೆ.ಪಿ. ನಗರದ ಖಾಸಗಿ ಕಾಲೇಜೊಂದರಲ್ಲಿ ಮಂಗಳವಾರ ಸಂಜೆ ಸಂಭವಿಸಿದೆ.

ಮೈಸೂರಿನ ಮಹದೇವಪುರ ನಿವಾಸಿ ಸತೀಶ್ ಅವರ ಮಗ ಕೃಷ್ಣ(16) ಕೊಲೆಯಾದ ವಿದ್ಯಾರ್ಥಿ. ಜೆ.ಪಿ.ನಗರದ ಪ್ರತಿಷ್ಠಿತ ಕಾಲೇಜಿನಲ್ಲಿ ಪ್ರಥಮ ಪಿಯುಸಿ ಓದುತ್ತಿದ್ದ ಅಭಿಷೇಕ್ ಮತ್ತು ಕೃಷ್ಣ ನಡುವೆ ಕ್ಷುಲ್ಲಕ ವಿಷಯಕ್ಕೆ ಜಗಳ ಆರಂಭವಾಗಿ, ಮಾರಾಮಾರಿ ನಡೆದಿದೆ. ಜಗಳ ಬಿಡಿಸುವಷ್ಟರಲ್ಲಿ ನೋಡ–ನೋಡುತ್ತಿದ್ದಂತೆಯೇ ಅಭಿಷೇಕ್ ಕೃಷ್ಣನ ಕಪಾಳಕ್ಕೆ ಮುಷ್ಟಿಯಿಂದ ಬಲವಾಗಿ ಹೊಡೆದ ತಕ್ಷಣ ಪ್ರಜ್ಞಾಹೀನನಾಗಿ ಬಿದ್ದ ಕೃಷ್ಣನನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ ಆತ, ಇಂದು ಬೆಳಗ್ಗೆ ಕೊನೆಯು ಸಿರೆಳೆದ ಎಂದು ಪೊಲೀಸರು ತಿಳಿಸಿದ್ದಾರೆ. ಕಾಲೇಜು ಆಡಳಿತ ಮಂಡಳಿ ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ಧಾವಿಸಿದ ವಿದ್ಯಾರಣ್ಯಪುರಂ ಠಾಣೆ ಪೊಲೀಸರು ಮಹಜರು ನಡೆಸಿ, ಪ್ರಕರಣ ದಾಖಲಿಸಿಕೊಂಡರು. ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಕೃಷ್ಣನ ದೇಹವನ್ನು ವಾರಸುದಾರರಿಗೆ ಒಪ್ಪಿಸಿದ್ದಾರೆ.

ರಂಗಭೂಮಿಯಿಂದ ಮಕ್ಕಳಲ್ಲಿ ವಿಮರ್ಶಾತ್ಮಕ ಚಿಂತನೆ ಮೂಡಲಿದೆ

ರಾಷ್ಟ್ರೀಯ ಮಕ್ಕಳ ರಂಗೋತ್ಸವ ಕಾರ್ಯಾಗಾರದಲ್ಲಿ ಶಿಕ್ಷಣ ತಜ್ಞರ ಅಭಿಪ್ರಾಯ



ಮೈಸೂರು, ಸೆ.20(ಜಿಎ)–ರಂಗಭೂಮಿ ನೆರವಿನಿಂದ ಮಕ್ಕಳಲ್ಲಿ ವಿಮರ್ಶಾತ್ಮಕ ಚಿಂತನೆ ಮೂಡಿಸಬಹುದು ಎಂದು ಶಿಕ್ಷಣ ತಜ್ಞ ಉಮಾಶಂಕರ್ ಪೆರಿಯೋಡಿ ಅಭಿಪ್ರಾಯಪಟ್ಟರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಭಾರತೀಯ ರಂಗಶಿಕ್ಷಣ ಸಂಸ್ಥೆಯು 'ರಾಷ್ಟ್ರೀಯ ಮಕ್ಕಳ ರಂಗೋತ್ಸವ' ಪ್ರಯುಕ್ತ ಬುಧವಾರ ಆಯೋಜಿಸಿದ್ದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಆನ್‌ಲೈನ್ ಶಿಕ್ಷಣವು ಕಲಿಕಾ ಸಂಸ್ಥೆಗಳಲ್ಲಿ ಸಾಮಾನ್ಯವಾಗಿದೆ. ಇದರಿಂದ ಮಕ್ಕಳ ಕಲಿಕೆಯಲ್ಲಿ ಏಕತಾನತೆ ಬಂದಿದೆ. ವೈವಿಧ್ಯಮಯತೆ ಇಲ್ಲವಾಗಿದೆ. ಕಲಿಕಾ ಚಟುವಟಿಕೆಗಳು ಇರುವುದಿಲ್ಲ. ಹೀಗಾಗಿ ಪಠ್ಯ ಕಲಿಕೆಯ ಭಾವಗಳನ್ನು ಶಿಕ್ಷಕರು ಮಕ್ಕಳಿಗೆ ದಾಟಿಸುತ್ತಿಲ್ಲ. ಇದರಿಂದ ಈಗಿನ ಶಿಕ್ಷಣ ಪದ್ಧತಿಯು ಮಕ್ಕಳಲ್ಲಿ ಆಲೋಚನಾ ಶಕ್ತಿಯನ್ನು ಬೆಳೆಸುತ್ತಿಲ್ಲ. ಕೇವಲ ನೆನಪಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಮಾತ್ರ ನಿರತವಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ರಂಗ ಶಿಕ್ಷಣವನ್ನು ಶಾಲಾ–ಕಾಲೇಜುಗಳಲ್ಲಿ ಒಂದು ಭಾಗವಾಗಿಸಿದರೆ ಅಭಿನಯ, ಪ್ರದರ್ಶನದಿಂದ ಜ್ಞಾನ ಸಾಮರ್ಥ್ಯ ಹೆಚ್ಚಿಸುತ್ತದೆ. ಚಿತ್ರಕಲೆ, ರಂಗಭೂಮಿ, ಪಠ್ಯೇತರ ಚಟುವಟಿಕೆಗಳಿಗೆ ಹೆಚ್ಚು ಆದ್ಯತೆಯನ್ನು ನೀಡಬೇಕು. ರಂಗ ಚಟುವಟಿಕೆಗಳನ್ನು ಶಿಕ್ಷಣ ಸಂಸ್ಥೆಗಳಲ್ಲಿ ನಡೆಸಿದರೆ, ಮಕ್ಕಳ ಸರ್ವತೋಮುಖ ಬೆಳವಣಿಗೆ ಸಾಧ್ಯ. ಮಕ್ಕಳ ದೇಹ ಹಾಗೂ ಮನಸ್ಸು ಅರಳುತ್ತದೆ ಎಂದರು. ರಂಗಕರ್ಮಿ ಪ್ರಸನ್ನ ಮಾತನಾಡಿ,ಭಾರತವು ವೈವಿಧ್ಯಮಯ ಸಂಸ್ಕೃತಿಯನ್ನು ಹೊಂದಿದೆ. ಬಂಗಾಳ, ಕರ್ನಾಟಕ, ಮಹಾರಾಷ್ಟ್ರ, ಕೇರಳ, ತಮಿಳುನಾಡು ಹಾಗೂ ಉತ್ತರಭಾರತದ ಒಂದೊಂದು ರಾಜ್ಯಗಳು ವಿಭಿನ್ನವಾಗಿವೆ. ಸಂಸ್ಕೃತಿಯನ್ನು ಅರಿಯುವ, ಸಂಭ್ರಮಿಸುವ ವಾತಾವರಣವನ್ನು ಸೃಷ್ಟಿಸಬೇಕಿದೆ. ನಾಟಕ, ನೃತ್ಯ, ಕಲೆಗಳ ಕೊಡುಕೊಳ್ಳುವಿಕೆಯನ್ನು ಏರ್ಪಡಿಸಬೇಕಿದೆ ಎಂದರು.

ಜಾಗತಿಕವಾಗಿ ಎಲ್ಲಾ ಕ್ಷೇತ್ರಗಳಲ್ಲೂ ಕ್ರಾಂತಿಯಾಗಬೇಕು. ವೇಗದ ಬದಲಾವಣೆ ಹಾಗೂ ಅಭಿವೃದ್ಧಿ ಆಗಬೇಕೆಂದು ಎಲ್ಲ ದೇಶಗಳು ಬಯಸುತ್ತಿವೆ. ಆದರೆ, ವೇಗದ ಜಗತ್ತು ಮಕ್ಕಳ ಮೇಲೆ ಸೃಷ್ಟಿಸಿರುವ ಕಲಿಕಾ ಒತ್ತಡದ ಬಗ್ಗೆ ಯಾರೂ ಲಕ್ಷ್ಯ ವಹಿಸಿಲ್ಲ. ಸುಂದರ ಬಾಲ್ಯವನ್ನು ಕಸಿಯಲಾಗುತ್ತಿದೆ ಎಂದು ವಿಷಾದಿಸಿದರು.

ಯಾಂತ್ರೀಕರಣ, ಜಾಗತೀಕರಣ ಕೇಂದ್ರಿತ ಅಭಿವೃದ್ಧಿಯು ಮಕ್ಕಳ ಆಲೋಚನೆಗಳಿಗೆ ಪೂರಕವಾಗಿಲ್ಲ. ಯಾಂತ್ರಿಕ ಜೀವನಕ್ಕೆ ಸಜ್ಜುಗೊಳಿಸುವ ಶಿಕ್ಷಣ ಪದ್ಧತಿ ಜಾರಿಯಲ್ಲಿದೆ. ಮಕ್ಕಳ ಕೇಂದ್ರಿತ, ಅವರ ಮನಸ್ಸು ಹೃದಯವನ್ನು ಅರಳಿಸುವ ಶಿಕ್ಷಣವು ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಈ ವೇಳೆ ಕಾರ್ಯಾಗಾರದಲ್ಲಿ ಸ್ವೀಡನ್ ರಂಗ ಲೇಖಕರಾದ ಲೀನಾ ಫ್ರೀಡೆಲ್ ಸ್ವೀಡನ್ ದೇಶದಲ್ಲಿ ಹೇಗೆ ಮಕ್ಕಳ ಮಟ್ಟದಿಂದ ರಂಗಶಿಕ್ಷಣ ನಡೆಸಲಾಗುತ್ತಿದೆ. ಹಾಗೇ ಅಲ್ಲಿನ ಕಲಾವಿದರು ಮಕ್ಕಳ ರಂಗ ಶಿಕ್ಷಣಕ್ಕೆ ಜೀವನವನ್ನು ಮುಡುಪಿಟ್ಟಿರುವುದನ್ನು ವಿವರಿಸಿದರು. ಕಾರ್ಯಕ್ರಮದಲ್ಲಿ ಸ್ವೀಡನ್ ರಂಗ ಲೇಖಕಿ ಲಿಸ್ ಹೆಲ್ ಸ್ಟ್ರೋಮ್, ಜಾಕ್ ಒಂಯಾ, ರಂಗಕರ್ಮಿಗಳಾದ ರಾಜೇಶ್ ಬಸವಣ್ಣ, ಪರಿಸರ ತಜ್ಞ ಮನು ಭಾಗವಹಿಸಿದ್ದರು.

ಹಣ್ಣು, ತರಕಾರಿ ಬೆಳೆಯುವ ರೈತರಿಗೂ ಪ್ರೋತ್ಸಾಹ ಧನ ನೀಡಲು ಆಗ್ರಹ

ಮೈಸೂರು, ಸೆ. 20– ಸರ್ಕಾರ, ಕೆಎಂಎಫ್‌ನ ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ ನೀಡುತ್ತಿದ್ದು, ಅದರಂತೆಯೇ ಹಣ್ಣು, ತರಕಾರಿ ಬೆಳೆಯುವ ರೈತರಿಗೂ ಪ್ರೋತ್ಸಾಹ ಧನ ನೀಡಬೇಕೆಂದು ಹಾಪ್‌ಕಾಮ್ಸ್ ಜಿಲ್ಲಾಧ್ಯಕ್ಷ ಮಿರ್ಲೆ ಅಣ್ಣೇಗೌಡ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರ ರೈತ ಹಾಲು ಉತ್ಪಾದಕರಿಗೆ ಪ್ರತೀ ಲೀಟರ್‌ಗೆ 5 ರೂ. ಉತ್ತೇಜನ ನೀಡುತ್ತಿರುವುದು ಸಂತೋಷದ ವಿಷಯ. ಅಂತೆಯೇ ತೋಟಗಾರಿಕೆ ಬೆಳೆಗಾರರ ಹಿತದೃಷ್ಟಿಯಿಂದ 1996 ರಂದು ಕರ್ನಾಟಕ ತೋಟಗಾರರಿಗೆ ಮಹಾಮಂಡಳ (ಕೆ.ಎಚ್.ಎಫ್.) ನಾಮಾಂಕಿತದಲ್ಲಿ ಸ್ಥಾಪಿತವಾಗಿರುವುದು ಸರಿಯಷ್ಟೆ. ಇದರಿಂದ ರಾಜ್ಯದ 29 ಜಿಲ್ಲೆಗಳಲ್ಲಿ ಜಿಲ್ಲಾ ಹಾಪ್‌ಕಾಮ್ಸ್ ಎಂಬ ತೋಟಗಾರಿಕೆ ಬೆಳೆಗಾರರೊಂದಿಗೆ, ಸಹಕಾರ ತತ್ವದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ರೈತರು ಬೆಳೆಯುವ ಹಣ್ಣು ಮತ್ತು ತರಕಾರಿಗಳು ಬೇಗ ನಶಿಸಿ ಹೋಗುವ ಪದಾರ್ಥಗಳಾಗಿದ್ದು, ಪ್ರತಿದಿನ ಮಾರುಕಟ್ಟೆಯಲ್ಲಿ ದರಗಳು ಏರಿಳಿತವಾಗುವುದು ಸಾಮಾನ್ಯವಾಗಿದೆ. ಇದರಿಂದಾಗಿ ಅನ್ನದಾತರಿಗೆ ತಾವು ಬೆಳೆಯುವ ಪದಾರ್ಥದಿಂದ ದುಡಿಮೆಗೆ ತಕ್ಕ ಫಲ ಸಿಗುವುದು ಅನುಮಾನವಾಗಿದೆ.

ಇದರಿಂದಾಗಿ ಸಣ್ಣ ಮತ್ತು ದೊಡ್ಡ ಹಿಡುವಳಿದಾರರಿಗೆ ಹಣ್ಣು ಮತ್ತು ತರಕಾರಿಗಳ ಬೆಳೆಯಿಂದ ಅತೀ ಹೆಚ್ಚು ನಷ್ಟ ಉಂಟಾಗುತ್ತಿದೆ. ಆದುದರಿಂದ ಕೆಎಂಎಫ್‌ನ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ನೀಡುವ ಉತ್ತೇಜನ ಹಣದಂತೆ, ತೋಟಗಾರಿಕೆ ಉತ್ಪನ್ನಗಳ ಬೆಳೆಗಾರರಿಗೆ ಸರ್ಕಾರದ ಕಾಳಜಿಯಿಂದ ಬಾಳೆಹಣ್ಣಿಗೆ ಕೆಜಿ ಒಂದಕ್ಕೆ ರೂ. 5.00 ಪ್ರತಿ ತರಕಾರಿಗಳಿಗೆ ಕೆಜಿ ಒಂದಕ್ಕೆ ರೂ. 3.00 ಸರ್ಕಾರದ ವತಿಯಿಂದ ಉತ್ತೇಜನ ಹಣ ನೀಡಿದರೆ ತೋಟಗಾರಿಕೆ ಬೆಳೆಗಾರರು ಸಹಾ ಹೆಚ್ಚಿನ ಪ್ರಮಾಣದ ಹಣ್ಣು ಮತ್ತು ತರಕಾರಿಗಳನ್ನು ಬೆಳೆದು ಆಯಾ ಜಿಲ್ಲಾ ಹಾಪ್‌ಕಾಮ್ಸ್‌ಗಳ ಮೂಲಕ ಮಾರಾಟ ಮಾಡುವ ಮೂಲಕ ಅವರ ದುಡಿಮೆಯ ಬೆವರಿಗೆ ಕಿಂಚಿತ್ತಾದರೂ ಬೆಲೆ ಸಿಗುವಂತಾಗುತ್ತದೆ. ಇದರಿಂದಾಗಿ ರೈತರು ಭರಿಸುವ ಸಾಗಾಣಿಕೆ ವೆಚ್ಚ ಹಾಗೂ ಪದಾರ್ಥಗಳು ಒಣಗುವುದರಿಂದಾಗುವ ನಷ್ಟವನ್ನು ಭರಿಸಿಕೊಂಡಂತಾಗುತ್ತದೆ. ಈ ವಿಚಾರವಾಗಿ ತೋಟಗಾರಿಕಾ ಸಚಿವರಿಗೂ ಮನವಿಯನ್ನು ಸಲ್ಲಿಸಿದ್ದೇವೆ ಎಂದು ಅವರು ತಿಳಿಸಿದರು.

ಸೆ.23ರಂದು 'ಸ್ವರಾಲಯ ಸಾಂಸ್ಕೃತಿಕ ಹಬ್ಬ–2023'

ಮೈಸೂರು, ಸೆ.20– ಮೈಸೂರಿನ ರಾಮಕೃಷ್ಣನಗರ, ಡಿ.ವಿ.ಸಿ.ಬಡಾವಣೆಯಲ್ಲಿ ಇರುವ ಸ್ವರಾಲಯ ಸಂಗೀತ ಸಂಸ್ಥೆಯು ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಯೋಗದೊಂದಿಗೆ ಸೆ.23ರಂದು ಶನಿವಾರ ಸಂಜೆ 4 ಗಂಟೆಗೆ ಆದಿಚುಂಚನಗಿರಿ ರಸ್ತೆಯಲ್ಲಿರುವ ಗಾನಭಾರತಿ (ವೀಣೆಶೇಷಣ್ಣ ಭವನ) ಸಭಾಂಗಣದಲ್ಲಿ 'ಸ್ವರಾಲಯ ಸಾಂಸ್ಕೃತಿಕ ಹಬ್ಬ–2023' ಹಮ್ಮಿಕೊಳ್ಳಲಾಗಿದೆ.

ಉದ್ಘಾಟನೆಯನ್ನು ಬೆಂಗಳೂರಿನ ಸಂಗೀತ ವಿದ್ವಾಂಸರಾದ ವಿದುಷಿ ವಿಜಯಲಕ್ಷ್ಮಿ ವಾಸುದೇವ್ ನೆರವೇರಿಸಲಿದ್ದು, ಮುಖ್ಯ ಅತಿಥಿಯಾಗಿ ಮೈಸೂರಿನ ಸಂಗೀತ ಶಿಕ್ಷಕಿ ವಿದುಷಿ ಮೀರಾ ಅರಸ್ ಭಾಗವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ಸ್ವರಾಲಯ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷೆ ವಿದುಷಿ ಡಾ.ಸುಮಾ ಹರಿನಾಥ್ ವಹಿಸಲಿದ್ದಾರೆ. ವೇದಿಕೆ ಕಾರ್ಯಕ್ರಮದ ನಂತರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶುಭಗಣೇಶ್ ನಿರ್ದೇಶನದಲ್ಲಿ ಜಾನಪದ ಸಂಗೀತ ರೂಪಕ (ನಮ್ಮೂರ ಸೊಬಗು) ವನ್ನು ಪ್ರಸ್ತುತಪಡಿಸಲಾಗುವುದು. ವಾದ್ಯ ಸಹಕಾರದಲ್ಲಿ ಕೀಬೋರ್ಡ್‌ನಲ್ಲಿ ವಿದ್ವಾನ್ ಉಮಾಪತಿ ಹಾಗೂ ತಬಲಾದಲ್ಲಿ ವಿದ್ವಾನ್ ಆರ್.ಉದಯಕುಮಾರ್ ಸಹಕಾರ ನೀಡಲಿದ್ದಾರೆ. ಇದಾದ ನಂತರ ನೃತ್ಯ ಕಾರ್ಯಕ್ರಮವನ್ನು ವಿದುಷಿ ಜ್ಯೋತಿ ಹೆಗಡೆ ನೇತೃತ್ವದಲ್ಲಿ ಮೈಸೂರಿನ ಲಾಸ್ಯ ರಂಜನ ನೃತ್ಯ ಶಾಲೆಯ ಶಿಷ್ಯ ವೃಂದದವರಿಂದ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಹೆಚ್.ಎಸ್. ಶ್ರೀಕಾಂತಾ ಮಣಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾಹಿತಿಗೆ ಮೊಬೈಲ್ 9986961772 ಅಥವಾ 9880004929 ಸಂಪರ್ಕಿಸಬಹುದು.

ಕಾಯಿಲೆಗಳ ತಡೆಗೆ ಆಹಾರ ಆರೋಗ್ಯ ತಪಾಸಣೆ ಅವಶ್ಯ



ಮೈಸೂರು, ಸೆ. 20– ಮೈಸೂರು ಅರಮನೆ ಮಂಡಳಿ ಹಾಗೂ ಸುಯೋಗ್ ಆಸ್ಪತ್ರೆ ವತಿಯಿಂದ ನಾಡಹಬ್ಬ ದಸರಾ ಪ್ರಯುಕ್ತ ಅರಮನೆ ಆಡಳಿತ ಮಂಡಳಿ ಸಭಾಂಗಣದಲ್ಲಿ ಅರಮನೆ ಸಿಬ್ಬಂದಿ ಹಾಗೂ ಮಾವುತರಿಗೆ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದ ರಾಜವಂಶಸ್ಥರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮನುಷ್ಯನಿಗೆ ಆರೋಗ್ಯ ಅತೀ ಮುಖ್ಯವಾಗಿದ್ದು, ಆಗಿಂದಾಗ್ಗೆ ತಪಾಸಣೆಗೆ ಒಳಪಡುವುದರಿಂದ ನಮ್ಮಲ್ಲಿ ಇರಬಹುದಾದ ಕಾಯಿಲೆಗಳನ್ನು ಪತ್ತೆಹಚ್ಚಲು ಸಾಧ್ಯವಾಗುತ್ತದೆ. ಸುಯೋಗ್ ಆಸ್ಪತ್ರೆಯು ಅರಮನೆ ಸಿಬ್ಬಂದಿ ವರ್ಗದವರಿಗೆ ಇಂತಹ ಸೇವೆಯನ್ನು ಕಲ್ಪಿಸಿರುವುದು ಶ್ಲಾಘನೀಯ ಎಂದರು. ಸುಯೋಗ್ ಆಸ್ಪತ್ರೆಯ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಮಾತನಾಡಿ, ಇಂದು ಸಕ್ಕರೆ ಕಾಯಿಲೆ, ಅಧಿಕ ರಕ್ತ ಒತ್ತಡ, ಕ್ಯಾನ್ಸರ್ ಇತ್ಯಾದಿ ಕಾಯಿಲೆಗಳು ದುರ್ಬಲ ವರ್ಗದವರಲ್ಲೂ ಹೆಚ್ಚಾಗುತ್ತಿದ್ದು, ಆಗಿಂದಾಗ್ಗೆ ವೈದ್ಯಕೀಯ ತಪಾಸಣೆಗೆ ಒಳಗಾಗುವುದರಿಂದ ಪ್ರಾಥಮಿಕ ಹಂತದಲ್ಲಿಯೇ ಕಾಯಿಲೆಯನ್ನು ಪತ್ತೆಹಚ್ಚಲು ಸಾಧ್ಯವಾಗುತ್ತದೆ ಎಂದರು.

ನಮ್ಮ ಭವ್ಯ ಪರಂಪರೆಯನ್ನು ಪ್ರತಿನಿಧಿಸುವ ಅರಮನೆಯಲ್ಲಿ ನಾಡಹಬ್ಬ ದಸರಾ ಸಂದರ್ಭ ಅರಮನೆಯ ನೌಕರರು ಮತ್ತು ಮಾವುತರಿಗೆ ಉಚಿತ ಆರೋಗ್ಯ ತಪಾಸಣೆ ಮಾಡುತ್ತಿದ್ದು, ಈ ಗಂಭೀರ ಸ್ವರೂಪದ ಕಾಯಿಲೆಗಳಿದ್ದರೆ ಸೂಕ್ತ ಚಿಕಿತ್ಸೆಗೆ ಸಲಹೆ ನೀಡಲಾಗುವುದು.

ಅರಮನೆ ನೌಕರರಿಗೆ ಸುಯೋಗ್ ಆಸ್ಪತ್ರೆ ವತಿಯಿಂದ ಆಗಿಂದಾಗ್ಗೆ ಆರೋಗ್ಯ ತಪಾಸಣೆಗಳನ್ನು ಮಾಡುವುದರೊಂದಿಗೆ ನಿರಂತರವಾಗಿ ಆರೋಗ್ಯ ಸೇವೆಯನ್ನು ನೀಡಲಾಗುವುದು ಎಂದು ಡಾ.ಎಸ್.ಪಿ. ಯೋಗಣ್ಣ ಘೋಷಿಸಿದರು. ಮೈಸೂರು ಅರಮನೆ ಮಂಡಳಿ ಉಪನಿರ್ದೇಶಕ ಸುಬ್ರಹ್ಮಣ್ಯ, ಸುಯೋಗ್ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕರಾದ ಡಾ.ಸುಯೋಗ್ ಯೋಗಣ್ಣ, ವೈದ್ಯಕೀಯ ನಿರ್ದೇಶಕರಾದ ಡಾ.ರಾಜೇಂದ್ರ ಪ್ರಸಾದ್, ನಿರ್ದೇಶಕರಾದ ಡಾ.ಸೀಮಾ ಯೋಗಣ್ಣ, ಕಾರ್ಯ ನಿರ್ವಹಣಾಧಿಕಾರಿ ಡಾ.ಎಂ.ವಿ.ಮಂಜುನಾಥ್, ಸುಯೋಗ್ ಆಸ್ಪತ್ರೆಯ ತಜ್ಞ ವೈದ್ಯರುಗಳಾದ ಡಾ.ರವಿಕುಮಾರ್, ಡಾ.ರಾಜೇಶ್, ಡಾ.ಶರತ್‌ಕುಮಾರ್ ಉಪಸ್ಥಿತರಿದ್ದು, ಸುಮಾರು 300 ಮಂದಿ ನೌಕರರು ಈ ಶಿಬಿರದ ಪ್ರಯೋಜನ ಪಡೆದುಕೊಂಡರು.

ನಾಳೆಯಿಂದ ನಟನದಲ್ಲಿ 'ರಾಷ್ಟ್ರೀಯ ಮಕ್ಕಳ ರಂಗೋತ್ಸವ'

ಮೈಸೂರು, ಸೆ. 20– ಮೈಸೂರು ಮತ್ತು ಸುತ್ತಮುತ್ತಲಿನ ಸದಭಿರುಚಿಯ, ಸಹೃದಯ ರಂಗಾಸಕ್ತರಿಗಾಗಿ ನಟನ ರಂಗಶಾಲೆ ವಾರಾಂತ್ಯ ರಂಗ ಪ್ರದರ್ಶನಗಳನ್ನು ನಡೆಸುತ್ತಿದ್ದು, ತನ್ನ ಚಟುವಟಿಕೆಯ ಭಾಗವಾಗಿ ಮಕ್ಕಳಲ್ಲಿ ನಾಟಕದ ಬಗ್ಗೆ ಆಸಕ್ತಿ ಮೂಡಿಸುವ ನಿಟ್ಟಿನಲ್ಲಿ ಭಾರತೀಯ ಶೈಕ್ಷಣಿಕ ರಂಗಭೂಮಿ ವತಿಯಿಂದ ನಟನ ಸಹಯೋಗದಲ್ಲಿ ಸೆ.22ರಿಂದ ಸೆ.24ರವರೆಗೆ 3ದಿನಗಳ ಕಾಲ ಮೈಸೂರಿನ ರಾಮಕೃಷ್ಣನಗರದಲ್ಲಿರುವ ನಟನ ರಂಗಶಾಲೆಯಲ್ಲಿ ರಾಷ್ಟ್ರೀಯ ಮಕ್ಕಳ ರಂಗೋತ್ಸವವನ್ನು ಆಯೋಜಿಸಲಾಗಿದೆ. ಪ್ರತಿದಿನ ಮಧ್ಯಾಹ್ನ 3.30ಕ್ಕೆ ಹಾಗೂ ಸಂಜೆ 6.30ಕ್ಕೆ ನಾಟಕಗಳು ಪ್ರದರ್ಶನಗೊಳ್ಳಲಿವೆ. ಹೆಚ್ಚಿನ ಮಾಹಿತಿಗಾಗಿ 99451 58970, 7259537777, 94804 68327 ಸಂಪರ್ಕಿಸಬಹುದು.

ಕೊಡವರ ಬೇಡಿಕೆ ಈಡೇರಿಸಲು ಆಗ್ರಹಿಸಿ ಸಿಎನ್‌ಸಿಯಿಂದ

ಸೆ.27ರಿಂದ ಎರಡನೇ ಹಂತದ ಪಾದಯಾತ್ರೆ



ಮೊದಲ ಹಂತದ ಪಾದಯಾತ್ರೆ ಯಶಸ್ವಿ ಮುಕ್ತಾಯ

ಮಡಿಕೇರಿ, ಸೆ.20– ಕೊಡವ ಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆ ಸೇರಿದಂತೆ 9 ಪ್ರಮುಖ ಬೇಡಿಕೆಗಳ ಕುರಿತು ಸರ್ಕಾರದ ಗಮನ ಸೆಳೆಯಲು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಆರಂಭಿಸಿರುವ ಪಾದಯಾತ್ರೆಯ ಮೊದಲ ಹಂತ ಕೆದಕಲ್ ಮೂಡಗೇರಿ ನಾಡ್ ಮಂದ್‌ನಲ್ಲಿ ಪೂರ್ಣಗೊಂಡಿದ್ದು, 2ನೇ ಹಂತದ ಪಾದಯಾತ್ರೆ ಸೆ.27ರಿಂದ 'ಕುರುಳಿ ಅಂಬಲ' ಮಂದ್‌ನಿಂದ ಆರಂಭಗೊಳ್ಳಲಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ಮೊದಲ ಹಂತದ ಕೊನೆಯ ದಿನದ ಪಾದಯಾತ್ರೆ ಮತ್ತು ಕೊಡವ ಜಾಗೃತಿ ಸಭೆ ಪಾಲೇರಿನಾಡ್ ಮಂದ್ ಹಾಗೂ ಮೂಡಗೇರಿ ನಾಡ್ ಮಂದ್‌ನಲ್ಲಿ ನಡೆಯಿತು. ಸಭೆಯನ್ನುದ್ದೇಶಿಸಿ ಮಾತನಾಡಿದ ನಾಚಪ್ಪ ಅವರು ಮೊದಲ ಹಂತದ ಪಾದಯಾತ್ರೆ ಯಶಸ್ವಿಯಾಗಿದ್ದು, ನಿರೀಕ್ಷೆಗೂ ಮೀರಿ ಬೆಂಬಲ ವ್ಯಕ್ತವಾಗಿದೆ ಎಂದರು.

ಕೊಡವರ ರಕ್ಷಣೆಗಾಗಿ ಕೊಡವ ಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆಯ ಬೇಡಿಕೆ ಈಡೇರುವವರೆಗೆ ಸಿಎನ್‌ಸಿ ಸಂಘಟನೆ ಶಾಂತಿಯುತ ಹೋರಾಟವನ್ನು ಮುಂದುವರೆಸಲಿದೆ. ಕೊಡವರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವುದಕ್ಕಾಗಿ 5 ಹಂತಗಳಲ್ಲಿ ಪಾದಯಾತ್ರೆ ಹಮ್ಮಿಕೊಂಡಿದ್ದು, ಮೊದಲ ಹಂತ ಈಗಾಗಲೇ ಪೂರ್ಣಗೊಂಡಿದೆ. ಉಳಿದಿರುವ 4 ಹಂತಗಳ ಪಾದಯಾತ್ರೆಗೆ ಎಲ್ಲಾ ಕೊಡವರು ಸಹಕರಿಸುವಂತೆ ಮನವಿ ಮಾಡಿದರು.

ಪಾಲೇರಿನಾಡ್ ಮಂದ್‌ನಲ್ಲಿ ಮರುವಂಡ ಸತ್ಯ ಕಾರ್ಯಪ್ಪ, ಬಿಜ್ಜಂಡ ಪೊನ್ನಪ್ಪ, ಮುದ್ದುರ ಗಣಪತಿ, ಮುಲುವೆರ ಬಿದ್ದಪ್ಪ, ಒಡ್ಡಚೆಟ್ಟಿರ ತಮ್ಮಯ್ಯ, ಮರುವಂಡ ಸೋಮಣ್ಣ, ಮುಲುವೆರ ಅಯ್ಯಪ್ಪ, ಅಯ್ಯಕುಟ್ಟೀರ ಮಾದಪ್ಪ, ಮುದ್ದುರ ಪೊನ್ನಣ್ಣ, ಅಯ್ಯಕುಟ್ಟೀರ ತಿಮ್ಮಯ್ಯ, ಅಯ್ಯ ಕುಟ್ಟೀರ ಗಗನ್ ಸುಬ್ಬಯ್ಯ, ಅಯ್ಯಕುಟ್ಟೀರ ಸದಾ ಮುತ್ತಪ್ಪ, ಮುದ್ದುರ ಪೊನ್ನಪ್ಪ, ಮರುವಂಡ ತಿಮ್ಮಯ್ಯ, ಮುಲುವೆರ ಅಪ್ಪಣ್ಣ, ಅಯ್ಯಕುಟ್ಟೀರ ಮಾದಪ್ಪ, ಮೇದುರ ಕಂಠಿ, ಮೋರ್ಕಂಡ ಬೋಪಣ್ಣ, ಪುದಿಯೊಕ್ಕಡ ಪೃಥ್ವಿ, ಅಪ್ಪಾರಂಡ ಪ್ರಸಾದ್ ಕುಶಾಲಪ್ಪ, ಅರೆಯಡ ಗಿರೀಶ್, ನಂದಿನೆರವಂಡ ಡಾ.ಪ್ರಕಾಶ್ ಮತ್ತಿತರರು ಪಾದ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಬೈಕ್‌ಗೆ ಟ್ಯಾಂಕರ್ ಡಿಕ್ಕಿ: ವೈದ್ಯಕೀಯ ವಿದ್ಯಾರ್ಥಿ ಸಾವು

ಮಡಿಕೇರಿ, ಸೆ.20– ಹಾಲಿನ ಟ್ಯಾಂಕರ್ ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಮಡಿಕೇರಿ ಮೆಡಿಕಲ್



ಕಾಲೇಜಿನ ಅಂತಿಮ ವರ್ಷದ ವಿದ್ಯಾರ್ಥಿ ಮೃತಪಟ್ಟು, ವೈದ್ಯಕೀಯ ಮತ್ತೋರ್ವ ತೀವ್ರವಾಗಿ ಗಾಯಗೊಂಡಿರುವ ಘಟನೆ ಕಾಟಕೇರಿ ಬಳಿ ನಡೆದಿದೆ.

ಉಡುಪಿ ಮೂಲದ ವಿಜೇಶ್ ಎಂಬಾತನೇ ಮೃತ ದುರ್ದೈವಿಯಾಗಿದ್ದಾನೆ. ಬುಧವಾರ ಸಂಜೆ ಉಡುಪಿಯಿಂದ ವಿಜೇಶ್ ಮತ್ತು ಶಿವಾನಂದ್ ಬೈಕ್‌ನಲ್ಲಿ ಮಡಿಕೇರಿ ಕಡೆಗೆ ಆಗಮಿಸುತ್ತಿದ್ದರು. ಈ ವೇಳೆ ಕಾಟಕೇರಿ ಬಳಿ ಮಡಿಕೇರಿಯಿಂದ ಸುಳ್ಯ ಕಡೆಗೆ ತೆರಳುತ್ತಿದ್ದ ಬಹು ಚಕ್ರದ ಹಾಲಿನ ಟ್ಯಾಂಕರ್ ಡಿಕ್ಕಿ ಹೊಡೆಯಿತು. ಇದರಿಂದ ಬೈಕ್ ಸವಾರ ವಿಜೇಶ್ ಮೃತಪಟ್ಟಿದ್ದು, ಹಿಂಬದಿ ಸವಾರ ಶಿವಾನಂದ್ ಅವರಿಗೆ ಗಂಭೀರ ಗಾಯಗಳಾಗಿವೆ. ಗಾಯಾಳುವನ್ನು ಮಡಿಕೇರಿ ಜಿಲ್ಲಾ ಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಮಡಿಕೇರಿ ಗ್ರಾಮಾಂತರ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ ಲಾರಿ ಸಹಿತ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ದೇಶಕ್ಕಾಗಿ ಹೋರಾಡಿದ ಹುತಾತ್ಮ ಯೋಧರಿಗೆ ಶ್ರದ್ಧಾಂಜಲಿ



ವಿರಾಜಪೇಟೆ, ಸೆ 20– ವಿರಾಜ ಪೇಟೆಯ ಕೊಡಗು ಮಾಜಿ ಸೈನಿಕರ ಸಹಕಾರ ಸಂಘದ ವತಿಯಿಂದ ದೇಶಕ್ಕಾಗಿ ಹೋರಾಡಿ ಹುತಾತ್ಮರಾದ ಯೋಧರಿಗೆ ಶ್ರದ್ಧಾಂಜಲಿ ಅರ್ಪಿಸುವ ಕಾರ್ಯಕ್ರಮ ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್ ಉತ್ತಯ್ಯ ಅವರ ಅಧ್ಯಕ್ಷತೆಯಲ್ಲಿ ವಿರಾಜಪೇಟೆ ಮಿನಿ ವಿಧಾನಸೌಧ ಬಳಿ ಇರುವ ಯೋಧರ ಸ್ಮಾರಕ ಸ್ಥಂಭದ ಆವರಣದಲ್ಲಿ ನಡೆಯಿತು.

ಸಮಾರಂಭದಲ್ಲಿ ಜಿಲ್ಲಾ ಸಶಸ್ತ್ರ ಪೊಲೀಸ್ ತುಕಡಿಯಿಂದ ಕುಶಾಲತೋಪು ಹಾರಿಸಲಾಯಿತು. ಹಾಗೂ ಇತ್ತೀಚೆಗೆ ಕಾಶ್ಮೀರದ ಅನಂತನಾಗ್‌ನಲ್ಲಿ ಹುತಾತ್ಮರಾದ ಯೋಧರಿಗೆ ವಿಶೇಷ ಶ್ರದ್ಧಾಂಜಲಿ ಅರ್ಪಿಸಲಾಯಿತು. ಸಮಾರಂಭದಲ್ಲಿ ಮುಖ್ಯ ಅತಿಥಿಗಳಾದ ಕರ್ನಾಟಕ ಮತ್ತು ಕೇರಳ ವ್ಯಾಪ್ತಿಯ ಆಡಳಿತದ ಕಮಾಂಡೆಂಟ್ ಕರ್ನಲ್ ಮಾಚಿಮಂಡ ಡಿ.ಮುತ್ತಪ್ಪ ಅವರು ಯೋಧರ ಸ್ಮಾರಕ ಸ್ಥಂಭಕ್ಕೆ ಪುಷ್ಪಗುಚ್ಛ ಅರ್ಪಿಸಿ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಎಂ.ಪಿ. ಸುಜಾ ಕುಶಾಲಪ್ಪ, ತಹಶೀಲ್ದಾರ್ ಹೆಚ್.ಎನ್. ರಾಮಚಂದ್ರ, ಡಿವೈಎಸ್‌ಪಿ ಮೋಹನ್ ಕುಮಾರ್, ವೃತ್ತ ನಿರೀಕ್ಷಕ ಶಿವರುದ್ರ, ಪುರಸಭೆ ಮುಖ್ಯಾಧಿಕಾರಿ ಚಂದ್ರಕುಮಾರ್, ಕೊಂಗಂಡ ಬೋಜಮ್ಮ ಮುತ್ತಣ್ಣ ಅವರುಗಳು ಅತಿಥಿಗಳಾಗಿ ಭಾಗವಹಿಸಿ, ಯೋಧರ ಸ್ಮಾರಕ ಸ್ಥಂಭಕ್ಕೆ ಪುಷ್ಪ ನಮನ ಸಲ್ಲಿಸಿದರು.

ಶ್ರದ್ಧಾಂಜಲಿ ಸಭೆಯಲ್ಲಿ ಮಾಜಿ ಸೈನಿಕರ ಸಂಘದ ಉಪಾಧ್ಯಕ್ಷ ಬಿ.ಎಸ್. ಚಂದ್ರಶೇಖರ್ (ರಾಜ), ಕಾರ್ಯದರ್ಶಿ ಮುಗ್ಗೆರ ನಂದ, ಖಜಾಂಚಿ ತೋರೆರ ಪೂವಯ್ಯ, ಕಾನೂನು ಸಲಹೆಗಾರ ಚೇಂದ್ರಿಮಾಡ ಕೆ.ನಂಜಪ್ಪ, ನಿರ್ದೇಶಕರಾದ ಅಣ್ಣಳಮಾಡ ಡಿ.ಸುಬ್ಬಯ್ಯ, ಬಾಳೆಕುಟ್ಟಿರ ಎ.ಬೋಪಯ್ಯ, ಪಟ್ರಪಂಡ ಚಂಗಪ್ಪ ಮತ್ತಿತರರು ಉಪಸ್ಥಿತರಿದ್ದರು. ಹಾಗೂ ಹೆಗ್ಗಡೆ ಸಮಾಜ, ಲಘುವಾಹನ ಚಾಲಕರ ಸಂಘ, ಕರ್ನಾಟಕ ಸಂಘ, ಎಸ್‌ಎನ್‌ಡಿಪಿ, ಭಾರತೀಯ ಸ್ಟೇಟ್ ಬ್ಯಾಂಕ್ ಮತ್ತು ಪುರಸಭೆ, ತ್ರಿವೇಣಿ ಶಾಲೆ, ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ, ಬಿಲ್ಲವ ಸಮಾಜ, ಹಿಂದೂ ಜಾಗರಣ ವೇದಿಕೆ ಸೇರಿದಂತೆ ಇತರ ಸಂಘ ಸಂಸ್ಥೆಗಳು, ಸಂತ ಅನ್ನಮ್ಮ ಶಾಲೆ, ರೋಟರಿ ಶಾಲೆಯ ಸ್ಕೌಟ್ಸ್ ಗೈಡ್ಸ್ ವಿದ್ಯಾರ್ಥಿಗಳು, ಸಾರ್ವಜನಿಕರು ಭಾಗವಹಿಸಿ ಸ್ಮಾರಕಕ್ಕೆ ಗೌರವ ನಮನ ಸಲ್ಲಿಸಿದರು.

ವ್ಯಕ್ತಿತ್ವ ವಿಕಸನಕ್ಕೆ ಸ್ಕೌಟ್ಸ್, ಗೈಡ್ಸ್ ಸಹಕಾರಿ



ಮಡಿಕೇರಿ, ಸೆ.20– ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಸ್ಕೌಟ್ಸ್ ಮತ್ತು ಗೈಡ್ಸ್ ಸೇರ್ಪಡೆ ಸಹಕಾರಿಯಾಗಿದೆ ಎಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಆಯುಕ್ತ ಪಿ.ಜಿ.ಆರ್.ಸಿಂಧ್ಯ ತಿಳಿಸಿದ್ದಾರೆ.

ನಗರದ ಸ್ಕೌಟ್ಸ್ ಮತ್ತು ಗೈಡ್ಸ್‌ನ ಪೊನ್ನಮ್ಮ ಕುಶಾಲಪ್ಪ ಭವನದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಕೊಡಗು ಜಿಲ್ಲೆಯ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಬುಧವಾರ ಏರ್ಪಡಿಸಲಾಗಿದ್ದ ಮಾಹಿತಿ ಕಾರ್ಯಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಓದು ಬರಹ ಕಲಿಯುವುದರ ಜೊತೆಗೆ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಶಿಸ್ತು, ಶ್ರದ್ಧೆ, ಸಮಯ ಪ್ರಜ್ಞೆ, ಸಂಯಮ, ಪರಿಸರ ಕಾಳಜಿ ಬೆಳೆಸಿಕೊಂಡು ಜೀವನದಲ್ಲಿ ಉತ್ತಮ ನಾಗರಿಕರಾಗಿ ಬದುಕಲು ಅನುಕೂಲವಾಗಲಿದೆ ಎಂದು ಅವರು ಹೇಳಿದರು.

ಮಕ್ಕಳಲ್ಲಿ ಪರಿಸರ ಪ್ರಜ್ಞೆ, ಸಾಮಾಜಿಕ ಕಾಳಜಿ ಅರಿವನ್ನು ಮೂಡಿಸುವ ಕೆಲಸ ಹೆಚ್ಚಾಗಬೇಕು. ಪರಿಸರ ಜಾಗೃತಿ, ಸ್ವಚ್ಛತೆ ಅತ್ಯಂತ ಮಹತ್ವದ್ದಾಗಿದ್ದು, ಆರೋಗ್ಯಕ್ಕೆ ಯೋಗ ಅತ್ಯವಶ್ಯಕವಾಗಿದೆ. ಯೋಗದ ಪರಿಕಲ್ಪನೆಯನ್ನು ಮಕ್ಕಳಲ್ಲಿ ಮೂಡಿಸಬೇಕು ಎಂದು ಅವರು ತಿಳಿಸಿದರು.

ಜಿಲ್ಲೆಯ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕವನ್ನು ಸ್ಥಾಪಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ನಾಗರಿಕ ಪ್ರಜ್ಞೆ ಬೆಳೆಸಬೇಕು ಎಂದು ಪಿ.ಜಿ.ಆರ್.ಸಿಂಧ್ಯ ಹೇಳಿದರು.

ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಷ್ಟ್ರೀಯ ಸಮಿತಿ ಮಾಜಿ ನಿರ್ದೇಶಕ ಸುಕುಮಾರನ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪ ನಿರ್ದೇಶಕಿ ಸೌಮ್ಯ ಪೊನ್ನಪ್ಪ ಮಾತನಾಡಿದರು. ಸ್ಕೌಟ್ಸ್ ಸಂಸ್ಥೆಯ ರಾಜ್ಯ ಆಯುಕ್ತ ಪ್ರಭಾಕರ ಭಟ್, ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಸಂಸ್ಥೆಯ ಪ್ರಧಾನ ಆಯುಕ್ತ ಕೆ.ಟಿ.ಬೇಬಿ ಮ್ಯಾಥ್ಯೂ, ಗೈಡ್ಸ್ ಸಂಸ್ಥೆಯ ತರಬೇತಿ ಆಯುಕ್ತೆ ಮೈಥಿಲಿ ರಾವ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಕುರಿತು ತರಬೇತಿ ನೀಡಿದರು. ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು ಹಾಗೂ ಜಿಲ್ಲಾ ಗೈಡ್ಸ್ ಸಂಸ್ಥೆಯ ಆಯುಕ್ತರಾದ ರಾಣಿ ಮಾಚಯ್ಯ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ದೊಡ್ಡೇಗೌಡ, ಪ್ರಕಾಶ್, ಮಂಜೇಶ್, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಸದಾಶಿವ ಪಲ್ಲೇದ್, ಡಿಡಿಪಿಐ ಕಚೇರಿಯ ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿ ಕೃಷ್ಣಪ್ಪ, ಸ್ಕೌಟ್ಸ್ ಮತ್ತು ಗೈಡ್ಸ್‌ನ ಸ್ಥಾನಿಕ ಆಯುಕ್ತ ಎಚ್.ಆರ್.ಮುತ್ತಪ್ಪ, ಗುರುರಾಜ್, ಜಿಲ್ಲಾ ಖಜಾಂಜಿ ಪುಷ್ಪವೇಣಿ, ಸಹ ಕಾರ್ಯದರ್ಶಿ ಬೊಳ್ಳಜ್ಜಿರ ಅಯ್ಯಪ್ಪ, ಬುಲ್‌ಬುಲ್ ವಿಭಾಗದ ಮುಖ್ಯಸ್ಥರಾದ ಡೈಸಿ, ಸಾರ್ವಜನಿಕ ಸಂಪರ್ಕ ಅಧಿಕಾರಿ ಟಿ.ಜಿ.ಪ್ರೇಮ್ ಕುಮಾರ್, ಸಮನ್ವಯಾಧಿಕಾರಿ ದಮಯಂತಿ, ಹರಿಣಿ, ವಿಜಯ್, ಸುಲೋಚನ, ವನಜಾಕ್ಷಿ, ಹೇಮಂತ್, ಗುರುರಾಜ್, ಗಾಯತ್ರಿ, ಧನಂಜಯ, ಉಷಾ ರಾಣಿ, ನಳಿನಾಕ್ಷಿ ಇತರರು ಇದ್ದರು. ಸದಾಶಿವ ಪಲ್ಲೇದ್ ಸ್ವಾಗತಿಸಿದರು. ಅಲೀಮಾ ನಿರೂಪಿಸಿದರು, ಉಷಾರಾಣಿ ವಂದಿಸಿದರು.

ಕೈತೊಳೆಯಲು ಹೋದ ವ್ಯಕ್ತಿ ಕೆರೆಗೆ ಬಿದ್ದು ಸಾವು

ಗೋಣಿಕೊಪ್ಪ, ಸೆ.20– ಕೆರೆಯಲ್ಲಿ ಕೈ ತೊಳೆಯಲು ಹೋದ ವ್ಯಕ್ತಿಯೊಬ್ಬರು ಕಾಲು ಜಾರಿ ಕೆರೆಗೆ ಬಿದ್ದು ಮೃತಪಟ್ಟ ಘಟನೆ



ಪೊನ್ನಂಪೇಟೆ ತಾಲೂಕಿನ ಚಿಕ್ಕ ಮಂಡೂರು ಗ್ರಾಮದಲ್ಲಿ ನಡೆದಿದೆ ಗ್ರಾಮದ ನಿವಾಸಿ ಅಜ್ಜಿಕುಟ್ಟಿರ ಭೀಮಯ್ಯ(67) ಎಂಬವರೇ ಮೃತ ದುರ್ದೈವಿಯಾಗಿದ್ದಾರೆ.

ಭೀಮಯ್ಯ ಅವರು ಎಂದಿನಂತೆ ಬೆಳಗ್ಗೆ 8.30ರ ಸಮಯದಲ್ಲಿ ಗದ್ದೆಯಲ್ಲಿ ದನ ಕಟ್ಟಿ ಕೆರೆಯಲ್ಲಿ ಕೈ ತೊಳೆಯಲು ಹೋದರು. ಈ ವೇಳೆ ಕಾಲು ಜಾರಿ ಕೆರೆಗೆ ಬಿದ್ದು ಅಸುನೀಗಿದ್ದಾರೆ. ಘಟನಾ ಸ್ಥಳಕ್ಕೆ ಶ್ರೀಮಂಗಲ ಪೊಲೀಸರು ಭೇಟಿ ನೀಡಿ ಸ್ಥಳ ಮಹಜರು ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ. ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಲಾಗಿದೆ.



55ನೇ ಹುಟ್ಟುಹಬ್ಬ ಆಚರಿಸಿಕೊಂಡ ಕೆಪಿಸಿಸಿ ವಕ್ತಾರ ಸಂಕೇತ್ ಪೂವಯ್ಯ ಅವರನ್ನು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಮತ್ತು ಶಾಸಕರೂ ಆದ ಎ.ಎಸ್. ಪೊನ್ನಣ್ಣ ಅವರು ವಿರಾಜಪೇಟೆಯ ಅವರ ನಿವಾಸದಲ್ಲಿ ಅಭಿನಂದಿಸಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಜಿ ಪೂಣಚ್ಚ, ಬಿ.ಎ. ಹನೀಫ್, ಮಥಿನ್, ನರೇಂದ್ರ ಕಾಮತ್, ಯಾಕೂಬ್, ರಕ್ಷಿತ್ ಸೇರಿದಂತೆ ಹಲವು ಉಪಸ್ಥಿತರಿದ್ದರು.

ಅ.14ರಿಂದ ಅಮ್ಮ ಕೊಡವ ವಾಲಿಬಾಲ್ ಟೂರ್ನಿ

ಗೋಣಿಕೊಪ್ಪ, ಸೆ.20– ಮಾನಿಲ್ ಅಯ್ಯಪ್ಪ ಸೇವಾ ಸಮಿತಿ ಮತ್ತು ಮಾನಿಲ್ ಅಯ್ಯಪ್ಪ ಯುವಕ ಸಂಘದ ವತಿಯಿಂದ ಕೊಡವ, ಅಮ್ಮ ಕೊಡವ ವಾಲಿಬಾಲ್ ಟೂರ್ನಿ ಅ.14, 15 ರಂದು ಮಾಯಮುಡಿ ಮಾನಿಲ್ ಅಯ್ಯಪ್ಪ ಮೈದಾನದಲ್ಲಿ ನಡೆಯಲಿದೆ ಎಂದು ಸೇವಾ ಸಮಿತಿ ಗೌರವ ಅಧ್ಯಕ್ಷ ಸಣ್ಣುವಂಡ ಬಿ. ರಮೇಶ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ 9902612333, 9449907975 ಸಂಖ್ಯೆ ಸಂಪರ್ಕಿಸಬಹುದಾಗಿದೆ. ಗೋಷ್ಠಿಯಲ್ಲಿ ಮಾನಿಲ್ ಅಯ್ಯಪ್ಪ ಯುವಕ ಸಂಘದ ಅಧ್ಯಕ್ಷ ಚೆಪ್ಪುಡೀರ ಕೆ. ಪ್ರದೀಪ್ ಪೂವಯ್ಯ, ಪದಾಧಿಕಾರಿಗಳಾದ ಸಣ್ಣುವಂಡ ವಿನಯ್ ಅಯ್ಯಪ್ಪ, ಆಪಟ್ಟೀರ ಸಿ. ಪ್ರದೀಪ್, ಆಪಟ್ಟೀರ ವೀಕ್ಷಿತ್ ಇದ್ದರು.

ಮೌಢ್ಯ ಮೆಟ್ಟಿ ನಿಂತ ಸಿಎಂ ಸಿದ್ದರಾಮಯ್ಯ ಮತ್ತೆ ಚಾ.ನಗರ ಜಿಲ್ಲೆಗೆ ಭೇಟಿ





"ಚಾಮರಾಜನಗರ ಜಿಲ್ಲೆಗೆ ಇದೇ ತಿಂಗಳ 26 ಮತ್ತು 27 ರಂದು ಮುಖ್ಯಮಂತ್ರಿಗಳು ಭೇಟಿ ನೀಡುವ ಬಗ್ಗೆ ಮುಖ್ಯಮಂತ್ರಿಗಳ ಕಾರ್ಯಾಲಯದಿಂದ ಮಾಹಿತಿ ಬಂದಿದೆ. 26 ರಂದು ಮಹದೇಶ್ವರ ಬೆಟ್ಟದಲ್ಲಿ ಪ್ರಾಧಿಕಾರ ಸಭೆ ನಡೆಸಲಿರುವ ಮುಖ್ಯಮಂತ್ರಿಗಳು 27 ರಂದು ಚಾಮರಾಜನಗರದಲ್ಲಿ ಕೆಡಿಪಿ ಸಭೆ ನಡೆಸಲಿದ್ದಾರೆ. ಇದಕ್ಕಾಗಿ ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ನಾನು ಮತ್ತು ಎಸ್ಪಿ ಮಹದೇಶ್ವರ ಬೆಟ್ಟಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದೇವೆ.
-ಶಿಲ್ಪಾನಾಗ್, ಜಿಲ್ಲಾಧಿಕಾರಿ.

• ಸಿದ್ದಲಿಂಗಸ್ವಾಮಿ

ಚಾಮರಾಜನಗರ, ಸೆ.20– ಜಿಲ್ಲಾ ಕೇಂದ್ರವಾದ ಚಾಮರಾಜನಗರಕ್ಕೆ ಮುಖ್ಯಮಂತ್ರಿಗಳು ಭೇಟಿ ನೀಡಿದರೆ ಅಧಿಕಾರ ಹೋಗುತ್ತದೆ ಎಂಬ ಮೌಢ್ಯದ ಭಯದಿಂದ ರಾಜ್ಯದ ಹಲವು ಮುಖ್ಯಮಂತ್ರಿಗಳು ಜಿಲ್ಲಾ ಕೇಂದ್ರಕ್ಕೆ ಭೇಟಿ ನೀಡುತ್ತಿರಲಿಲ್ಲ. ಅದೇ ರೀತಿ ಜಿಲ್ಲಾ ಕೇಂದ್ರಕ್ಕೆ ಬಂದು– ಹೋದ ಅನೇಕ ಮುಖ್ಯಮಂತ್ರಿಗಳು ಅಧಿಕಾರ ಕಳೆದುಕೊಂಡಿರುವ ಸಾಕಷ್ಟು ನಿದರ್ಶನಗಳಿವೆ.

ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದಾಗ ಚಾಮರಾಜನಗರಕ್ಕೆ ಬರೋಬ್ಬರಿ 17 ಬಾರಿ ಭೇಟಿ ನೀಡಿ, ಮೌಢ್ಯಕ್ಕೆ ಸೆಡ್ಡು ಹೊಡೆದಿದ್ದರು. ಈಗ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ 5 ತಿಂಗಳ ನಂತರ ಸೆ. 26ರಂದು ಜಿಲ್ಲಾ ಕೇಂದ್ರಕ್ಕೆ ಭೇಟಿ ನೀಡಲು ಅಣಿಯಾಗಿದ್ದಾರೆ.

ರಾಜ್ಯದ ಗಡಿ ಜಿಲ್ಲೆ ಚಾಮರಾಜನಗರಕ್ಕೆ ಮುಖ್ಯಮಂತ್ರಿಗಳು ಭೇಟಿ ನೀಡಿದ ಆರು ತಿಂಗಳೊಳಗೆ ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬ ಮೂಢನಂಬಿಕೆ ಮೊದಲಿನಿಂದಲೂ ರಾಜ್ಯದ ರಾಜಕಾರಣಿಗಳಲ್ಲಿ ಮನೆ ಮಾಡಿದೆ. ಹೀಗಾಗಿ ಚಾಮರಾಜನಗರಕ್ಕೆ ರಾಜ್ಯದ ದೊರೆ ಬರಲೂ ಹಿಂದೇಟು ಹಾಕುವ ಹಿನ್ನೆಲೆಯಲ್ಲಿ ಜಿಲ್ಲೆ ಅಭಿವೃದ್ಧಿ ದೃಷ್ಟಿಯಲ್ಲಿ ಇಂದಿಗೂ ಹಿಂದುಳಿದಿದೆ.

ಮೌಢ್ಯದ ಕಾರಣವೇನು?: 1988ರಲ್ಲಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ತಂದೆ ಎಸ್.ಆರ್. ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದಾಗ ಚಾಮರಾಜನಗರಕ್ಕೆ ಭೇಟಿ ನೀಡಿ ಮಿನಿ ವಿಧಾನಸೌಧ, ಸಾರ್ವಜನಿಕ ಆಸ್ಪತ್ರೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಉದ್ಘಾಟಿಸಿದ್ದರು. ಭೇಟಿ ನೀಡಿದ ಕೆಲವೇ ತಿಂಗಳಲ್ಲಿ ರಾಜಕೀಯ ಕಾರಣಗಳಿಂದ ಅವರು ಅಧಿಕಾರ ಕಳೆದುಕೊಂಡಿದ್ದರು.

ಅಲ್ಲದೇ ರಾಜ್ಯದ ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸ್, ಗುಂಡೂರಾವ್, ರಾಮಕೃಷ್ಣ ಹೆಗಡೆ, ವೀರೇಂದ್ರ ಪಾಟೀಲ್, ಕುಮಾರಸ್ವಾಮಿ ಅವರು ಸಹ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಚಾಮರಾಜನಗರಕ್ಕೆ ಭೇಟಿ ನೀಡಿದ್ದರು. ತಮ್ಮ ಚಾಮರಾಜನಗರ ಭೇಟಿಯ 6 ತಿಂಗಳೊಳಗೆ ಕಾಕತಾಳೀಯವೆಂಬಂತೆ ಇವರೆಲ್ಲರೂ ಬೇರೆ– ಬೇರೆ ಕಾರಣಗಳಿಗಾಗಿ ಅಧಿಕಾರ ಕಳೆದುಕೊಂಡಿದ್ದರು.

ಈ ಎಲ್ಲ ಬೆಳವಣಿಗೆಗಳಿಂದ ಮುಖ್ಯಮಂತ್ರಿಯಾದವರು ಚಾಮರಾಜನಗರಕ್ಕೆ ಭೇಟಿ ನೀಡಿದರೆ ಅಧಿಕಾರ ಕಳೆದುಕೊಳ್ಳಬೇಕಾಗುತ್ತದೆ ಎಂಬ ಮೂಢನಂಬಿಕೆಯೊಂದು ಬೇರೂರಿತ್ತು. ಆ ನಿಟ್ಟಿನಲ್ಲಿ ರಾಜ್ಯದ ಮುಖ್ಯಮಂತ್ರಿಗಳು ಜಿಲ್ಲೆಯತ್ತ ಮುಖ ಮಾಡುತ್ತಿರಲಿಲ್ಲ.

17 ಬಾರಿ ಸಿದ್ದರಾಮಯ್ಯ ಭೇಟಿ: 2013ರಿಂದ 2018ರ ಅವಧಿಯಲ್ಲಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾದಾಗ ಚಾಮರಾಜನಗರಕ್ಕೆ ಅಂಟಿದ್ದ ಕಳಂಕವನ್ನು ತೊಳೆದು ಹಾಕಿದ್ದರು. ಚಾಮರಾಜನಗರ ಜಿಲ್ಲಾ ಕೇಂದ್ರಕ್ಕೆ 17 ಬಾರಿ ಹಾಗೂ ಜಿಲ್ಲೆಗೆ ಸುಮಾರು 20ಕ್ಕೂ ಹೆಚ್ಚು ಬಾರಿ ಭೇಟಿ ನೀಡಿದ ಅವರು ಕೋಟ್ಯಾಂತರ ರೂ. ಅನುದಾನವನ್ನು ಸಹ ನೀಡಿದ್ದರು. ಅಲ್ಲದೇ ಮುಖ್ಯಮಂತ್ರಿಯಾಗಿ 5 ವರ್ಷಗಳ ಅಧಿಕಾರವನ್ನು ಪೂರ್ಣಗೊಳಿಸಿದ್ದರು.

ಸೆ.26, ಜಿಲ್ಲೆಗೆ ಸಿಎಂ ಭೇಟಿ

ಸಿದ್ದರಾಮಯ್ಯ ಅವರು ಎರಡನೇ ಬಾರಿಗೆ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಜಿಲ್ಲೆಗೆ ಸೆ.26ರಂದು ಮೊದಲ ಬಾರಿಗೆ ಭೇಟಿ ನೀಡುತ್ತಿದ್ದು, ಇದಕ್ಕಾಗಿ ಸಕಲ ಸಿದ್ಧತೆ ಕೈಗೊಳ್ಳಲಾಗುತ್ತಿದೆ

ಮೊದಲಿಗೆ ಮುಖ್ಯಮಂತ್ರಿಗಳು ಮಲೆ ಮಹದೇಶ್ವರಸ್ವಾಮಿ ಬೆಟ್ಟಕ್ಕೆ ಭೇಟಿ ನೀಡಿ, ಮಾದಪ್ಪನ ದರ್ಶನ ಪಡೆಯಲಿದ್ದಾರೆ. ನಂತರ ಬೆಟ್ಟದಲ್ಲಿ ನಡೆಯುವ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಪಾಲ್ಗೊಂಡು ನೂತನ ವಧು–ವರರಿಗೆ ಶುಭ ಹಾರೈಸಲಿದ್ದಾರೆ. ಬಳಿಕ, ಮಲೆ ಮಹದೇಶ್ವರಸ್ವಾಮಿ ಅಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಅಂದು ಬೆಟ್ಟದಲ್ಲಿ ವಾಸ್ತವ್ಯ ಹೂಡುವ ಮುಖ್ಯಮಂತ್ರಿಗಳು ಮರುದಿನ ಸೆ.27ರಂದು ಜಿಲ್ಲಾ ಕೇಂದ್ರಕ್ಕೆ ಭೇಟಿ ನೀಡಿ, ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದಾರೆ ಎಂದು ಅವರ ತಾತ್ಕಾಲಿಕ ವೇಳಾಪಟ್ಟಿಯಿಂದ ತಿಳಿದು ಬಂದಿದೆ.

ಈ ಹಿಂದೆಯೂ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಅಂದಿನ ಜಿಲ್ಲಾ ಉಸ್ತುವಾರಿ ಸಚಿವ ದಿ.ಎಚ್.ಎಸ್. ಮಹದೇವಪ್ರಸಾದ್ ಅವರ ನೇತೃತ್ವದಲ್ಲಿ ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯ ಮೈದಾನದಲ್ಲಿ ಅಧಿಕಾರಿಗಳ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆ ನಡೆಸಿದ್ದರು. ಇದೀಗ ಮತ್ತೊಮ್ಮೆ ಅಧಿಕಾರಿಗಳೊಂದಿಗೆ ಮುಖ್ಯಮಂತ್ರಿಗಳು ಸಭೆ ನಡೆಸಲಿದ್ದಾರೆ.

"ಚಾಮರಾಜನಗರ ಜಿಲ್ಲೆ ಹಾಗೂ ಜಿಲ್ಲಾ ಕೇಂದ್ರವಾದ ಚಾಮರಾಜನಗರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭೇಟಿ ನೀಡುತ್ತಿರುವುದನ್ನು ನಾನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. ಮುಖ್ಯಮಂತ್ರಿಗಳು ಭೇಟಿಯಿಂದ ಮಲೆ ಮಹದೇಶ್ವಸ್ವಾಮಿ ಬೆಟ್ಟದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ದೊರಕಿ ಭಕ್ತರಿಗೆ ಅನುಕೂಲವಾಗಲಿದೆ. ನಗರಕ್ಕೆ ಸಿದ್ದರಾಮಯ್ಯ ಅವರು ಈ ಮೊದಲು ಮುಖ್ಯಮಂತ್ರಿಗಳಾಗಿದ್ದಾಗ ಸಂದರ್ಭದಲ್ಲಿ ಹಲವಾರು ಬಾರಿ ಭೇಟಿ ನೀಡಿದ್ದಾರೆ. ಎರಡನೇ ಬಾರಿ ಸಿಎಂ ಆದ ಬಳಿಕವೂ ಅವರು ಮತ್ತೊಮ್ಮೆ ಭೇಟಿ ನೀಡುತ್ತಿರುವುದು ಸ್ವಾಗತರ್ಹ. - ಎ.ಆರ್. ಕೃಷ್ಣಮೂರ್ತಿ, ಶಾಸಕರು.

ಕರ್ನಾಟಕ, ತಮಿಳುನಾಡು ಸರ್ಕಾರದ ಅಣುಕು ಶವಯಾತ್ರೆ



ಚಾಮರಾಜನಗರ, ಸೆ.20– ತಮಿಳುನಾಡಿಗೆ ಕಾವೇರಿ ನೀರನ್ನು ಹರಿಸುತ್ತಿರುವುದನ್ನು ಖಂಡಿಸಿ ನಗರದಲ್ಲಿ ಬುಧವಾರ ರಾಜ್ಯ ಕಬ್ಬು ಬೆಳೆಗಾರರ ಸಂಘ ಹಾಗೂ ರೈತರಿಂದ ಕೇಂದ್ರ, ರಾಜ್ಯ ಹಾಗೂ ತಮಿಳುನಾಡು ಸರ್ಕಾರಗಳ ಅಣಕು ಶವಯಾತ್ರೆ ನಡೆಸಿ ಪ್ರತಿಭಟನೆ ನಡೆಸಿದರು.

ನಗರದ ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಉದ್ಯಾನವನದ ಮುಂಭಾಗ ಸಮಾವೇಶಗೊಂಡ ಪ್ರತಿಭಟನಾಕಾರರು ರಾಜ್ಯ ಸರ್ಕಾರ, ತಮಿಳುನಾಡು ಸರ್ಕಾರ ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ಅಲ್ಲಿಂದ ಭುವನೇಶ್ವರಿ ವೃತ್ತದವರೆಗೆ ಕರ್ನಾಟಕ, ತಮಿಳುನಾಡು ಹಾಗೂ ಕೇಂದ್ರ ಸರ್ಕಾರದ ಅಣುಕು ಶವಯಾತ್ರೆ ಮಾಡಿ ಕೆಲಕಾಲ ರಸ್ತೆ ತಡೆ ನಡೆಸಿದರು.

ಈ ಸಂದರ್ಭದಲ್ಲಿ ಸಂಘದ ಮೈಸೂರು–ಚಾಮರಾಜನಗರ ಘಟಕದ ಕಾರ್ಯಾಧ್ಯಕ್ಷ ಹಳ್ಳಿಕೆರೆ ಹುಂಡಿಭಾಗ್ಯರಾಜ್ ಮಾತನಾಡಿ, ಕಾವೇರಿ ಕಬಿನಿ ವ್ಯಾಪ್ತಿಯ ರೈತರಿಗೆ, ಜನ ಜಾನುವಾರುಗಳಿಗೆ ಕುಡಿಯುವ ನೀರು, ಅಂತರ್ಜಲ ವೃದ್ಧಿಗಾಗಿ ಕೆರೆಕಟ್ಟೆಗಳು ತುಂಬಿಸುವುದಕ್ಕಾಗಿ ನೀರನ್ನು ಬಳಸಬೇಕು. ಅದನ್ನು ಬಿಟ್ಟು ಅಧಿಕಾರಕ್ಕಾಗಿ ನೀರು ಹರಿಸುವ ಮೂಲಕ ರಾಜ್ಯ ಸರ್ಕಾರ ಜನರಿಗೆ ಆತ್ಮಹತ್ಯೆ ಭಾಗ್ಯ ಕೊಡಲು ಹೊರಟಿದೆ ಎಂದು ಭಾಗ್ಯರಾಜ್ ದೂರಿದರು.

ತಕ್ಷಣ ತಮಿಳುನಾಡಿಗೆ ಹರಿಸಲಾಗುತ್ತಿರುವ ನೀರನ್ನು ನಿಲ್ಲಿಸಬೇಕು ಹಾಗೂ ಈ ಭಾಗದ ರೈತರಿಗೆ ಬೆಳೆ ನಷ್ಟ ಪರಿಹಾರ ಘೋಷಣೆ ಮಾಡಬೇಕು. ಪ್ರತಿ ಎಕರೆಗೆ 25 ಸಾವಿರ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಉಪಾಧ್ಯಕ್ಷ ಪಟೇಲ್ ಶಿವಮೂರ್ತಿ, ಮುಖಂಡರಾದ ಮಹದೇವಸ್ವಾಮಿ, ಹಾಲಿನ ನಾಗರಾಜ್, ಹರ್ಷ, ಮಂಜುನಾಥ್, ಕುಮಾರ್, ಗೌಡಹಳ್ಳಿ ಷಡಕ್ಷರಿ, ಹಿರಿಯೂರು ಮಹೇಶ್, ಪ್ರವೀಣ್ ಕುಮಾರ್, ಮಹೇಂದ್ರ, ಸತೀಶ್, ಸಿದ್ದಪ್ಪ ಇತರರು ಇದ್ದರು.

ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರವೇ ಪ್ರತಿಭಟನೆ



ಚಾಮರಾಜನಗರ, ಸೆ.20 – ಬಿಳಿಗಿರಿರಂಗನ ಬೆಟ್ಟದಲ್ಲಿ ವಾಸಿಸುವ ಬುಡಕಟ್ಟು ಸಮುದಾಯದವರಿಗೆ ಮೂಲಭೂತ ಸೌಲಭ್ಯ ಕಲ್ಪಿಸುವಂತೆ ಹಾಗೂ ಜಿಲ್ಲೆ ಅಭಿವೃದ್ಧಿಯ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ನಗರದಲ್ಲಿ ಕಾಲ್ನಡಿಗೆ ಜಾಥಾ ನಡೆಸಲಾಯಿತು.

ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ವೇದಿಕೆ ರಾಜ್ಯಾಧ್ಯಕ್ಷ ಪ್ರವೀಣ್ ಕುಮಾರ್ ಶೆಟ್ಟಿ ಹಾಗೂ ಜಿಲ್ಲಾಧ್ಯಕ್ಷ ಆರ್.ಮೋಹನ್ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಸ್ತೆ ತಡೆ ನಡೆಸಿ, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ನಂತರ ಬಿ. ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಧರಣಿ ನಡೆಸಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಪ್ರತಿಭಟನೆ ನೇತೃತ್ವ ವಹಿಸಿದ್ದ ವೇದಿಕೆ ರಾಜ್ಯಾಧ್ಯಕ್ಷ ಪ್ರವೀಣ್ ಕುಮಾರ ಶೆಟ್ಟಿ ಮಾತನಾಡಿ, ಬಿಳಿರಂಗನ ಬೆಟ್ಟದಲ್ಲಿರುವ ಬುಡಕಟ್ಟು ಸಮುದಾಯದ ಸೋಲಿಗ ಜನಾಂಗದವರಿಗೆ ಮೂಲಭೂತ ಸೌಕರ್ಯಗಳಾದ ವಿದ್ಯುತ್, ಕುಡಿಯುವ ನೀರು, ರಸ್ತೆ ಕಲ್ಪಿಸಿಕೊಡುವಂತೆ ಆಗ್ರಹಿಸಿದರು. ಚಾಮರಾಜನಗರದಲ್ಲಿ ಜಾನಪದ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವಂತೆ, ನಗರದ ಪ್ರಮುಖ ಬಡಾವಣೆ ಹಾಗೂ ರಸ್ತೆಗಳಿಗೆ ಸಾಹಿತಿಗಳ ಹೆಸರನ್ನು ನಾಮಕರಣ ಮಾಡುವಂತೆ, ಜಿಲ್ಲೆಯಲ್ಲಿನ ಕೆರೆ–ಕಟ್ಟೆಗಳನ್ನು ಸಂರಕ್ಷಿಸಿ, ವಿಶೇಷ ಅನುದಾನದಲ್ಲಿ ನೀರು ತುಂಬಿಸುವುದು, ಸೋಲಿಗ ಜನಾಂಗವನ್ನು ಒಕ್ಕಲೆಬ್ಬಿಸುವ ಕೆಲಸವನ್ನು ನಿಲ್ಲಿಸಬೇಕು. ಕಬಿನಿ 2ನೇ ಹಂತದ ನೀರಾವರಿ ಜಾರಿಯಾಗಬೇಕು. ಐತಿಹಾಸಿಕ ಸ್ಮಾರಕಗಳು ಹಾಗೂ ಸ್ಥಳಗಳನ್ನು ಅಭಿವೃದ್ಧಿ ಮತ್ತು ಅವುಗಳ ಬಗ್ಗೆ ಪ್ರಚಾರ ಮೂಡಿಸಬೇಕು. ಅಧ್ಯಯನ ಕೇಂದ್ರ ಸ್ಥಾಪಿಸಬೇಕು. ಬಿಳಿಗಿರಿರಂಗನ ಬೆಟ್ಟ ಹಾಗೂ ಗೋಪಾಲಸ್ವಾಮಿ ಬೆಟ್ಟದ ರಸ್ತೆ ಅಗಲೀಕರಣ ಮತ್ತು ಗುಂಡ್ಲುಪೇಟೆ ಗಡಿಯಿಂದ ನಂಜನಗೂಡಿನವರೆಗೆ ಚತುಷ್ಪಥ ರಸ್ತೆ ನಿರ್ಮಾಣ ಮಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಉಪಾಧ್ಯಕ್ಷ ಎನ್.ಮಂಜೇಶ್, ಶಿವರಾಜೇಗೌಡರು, ಡಾ.ಜಗದೀಶಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ ರಾಜಘಟ್ಟ ರವಿ, ಕಾರ್ಯದರ್ಶಿ ಲೋಕೇಶ್, ಶಿವಾನಂದಶೆಟ್ಟಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಿಯಾಜ್‌ಪಾಷ, ಜಿಲ್ಲಾ ಕಾರ್ಯಾಧ್ಯಕ್ಷ ಉಮ್ಮತ್ತೂರು ಚಂದ್ರು, ಜಿಲ್ಲಾ ಉಪಾಧ್ಯಕ್ಷ ನಾಗೇಶ್ ನಾಯಕ, ಜಿಲ್ಲಾ ಸಂಚಾಲಕ ವೆಂಕಟೇಶ್, ಸ್ಯಾಮುವೆಲ್, ಅಬ್ದುಲ್ ಖಾದರ್, ರಾಜೇಶ್, ನಾಗಲಿಂಗಪ್ಪ, ತಾಲೂಕು ಅಧ್ಯಕ್ಷ ನವೀನ್ ಕ್ವಾಲಿಟಿ, ಆರ್. ಮಂಜು, ಅವಿನಾಶ್, ನಾಗರಾಜು, ಜಗದೀಶ್ ಶಾಸ್ತ್ರಿ ಇತರರು ಭಾಗವಹಿಸಿದ್ದರು.

ನ್ಯಾಷನಲ್ ಮೀನ್ಸ್–ಕಮ್ ಮೆರಿಟ್ ವಿದ್ಯಾರ್ಥಿ ವೇತನಕ್ಕೆ ಪರೀಕ್ಷೆ: ಅರ್ಜಿ ಆಹ್ವಾನ

ಚಾಮರಾಜನಗರ, ಸೆ20– 2023–24ನೇ ಸಾಲಿನಲ್ಲಿ ಕೆ.ಎಸ್.ಕ್ಯೂ.ಎ.ಎ.ಸಿ ವತಿಯಿಂದ ನ್ಯಾಷನಲ್ ಮೀನ್ಸ್–ಕಮ್ ಮೆರಿಟ್ ವಿದ್ಯಾರ್ಥಿ ವೇತನ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಡಿ.17ರಂದು ಪರೀಕ್ಷೆ ನಡೆಯ ಲಿದ್ದು, ಜಿಲ್ಲೆಯ ಸರ್ಕಾರಿ, ಅನುದಾನಿತ ಮತ್ತು ಸ್ಥಳೀಯ ಸಂಸ್ಥೆಯ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅಕ್ಟೋಬರ್ 4ರೊಳಗೆ ಅರ್ಜಿ ಸಲ್ಲಿಸಬಹುದು.

ಸದರಿ ಪರೀಕ್ಷೆಗೆ ಅನುದಾನ ರಹಿತ ಶಾಲೆಗಳು, ಮೊರಾರ್ಜಿ ದೇಸಾಯಿ, ಕಿತ್ತೂರುರಾಣಿ ಚೆನ್ನಮ್ಮ, ನವೋದಯ ಶಾಲೆ, ವಾಜಪೇಯಿ ಶಾಲೆ, ಏಕಲವ್ಯ, ಕೆ.ಜಿ.ಬಿ.ವಿ, ಡಾ. ಬಿ.ಆರ್. ಅಂಬೇಡ್ಕರ್, ಕೇಂದ್ರೀಯ ವಿದ್ಯಾಲಯ, ಸೈನಿಕ ಶಾಲೆಗಳ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ. ವಿದ್ಯಾರ್ಥಿಗಳು ಶಾಲೆಯ ಮುಖ್ಯ ಶಿಕ್ಷಕರು/ಪ್ರಾಂಶುಪಾಲರ ಮೂಲಕವೇ ಅರ್ಜಿ ಸಲ್ಲಿಸಬೇಕು. ಮಾಹಿತಿಗಾಗಿ ವೆಬ್‌ಸೈಟ್ https://kseab.karnataka.gov.in ಸಂಪರ್ಕಿಸಬಹುದು ಎಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಲೋನಿ, ಹಾಡಿಗಳಲ್ಲಿ ಆಧಾರ್ ತಿದ್ದುಪಡಿ, ಹೊಸದಾಗಿ ಆಧಾರ್ ಮಾಡಿಸುವ ಆಂದೋಲನ

ಚಾಮರಾಜನಗರ, ಸೆ.20– ಜಿಲ್ಲಾಡಳಿತ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಕೊಳ್ಳೇಗಾಲ ಮತ್ತು ಹನೂರು ತಾಲೂಕು ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಪಂಗಡದ ಬುಡಕಟ್ಟು ಕಾಲೋನಿ, ಹಾಡಿಗಳಲ್ಲಿ ವಾಸಿಸುತ್ತಿರುವ ಸೋಲಿಗ ಜನಾಂಗದವರಿಗೆ ಕಾಲೋನಿ, ಹಾಡಿಗಳಲ್ಲಿಯೇ ಆಧಾರ್ ತಿದ್ದುಪಡಿ, ಹೊಸದಾಗಿ ಆಧಾರ್ ಮಾಡಿಸುವ ಆಂದೋಲನ ಸೆ.21ರಿಂದ ಅ.13ರವರೆಗೆ ನಡೆಯಲಿದೆ.

ಕೊಳ್ಳೇಗಾಲ ಮತ್ತು ಹನೂರು ತಾಲೂಕಿನ ವಿವಿಧ ಪರಿಶಿಷ್ಟ ಪಂಗಡದ ಬುಡಕಟ್ಟು ಕಾಲೋನಿ, ಹಾಡಿಗಳಲ್ಲಿ ವಾಸಿಸುತ್ತಿರುವ ಸೋಲಿಗ ಜನಾಂಗದವರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ
ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

WANTED
1) Security Supervisors PUC Pass / Fail
2) Security Guards - 10th Pass/Fail
3) Field Officer - Any Degree with 03 Yrs Experience
Place : Mysore
9739199355
9844235981

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ. (ಕನ್ನಡ, ಇಂಗ್ಲೀಷ್, ಹಿಂದಿ) ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ, ಸಂಬಳ: 8000 ರಿಂದ 11000ರವರೆಗೆ
8150005111

ಮನೆ ಮಾರಾಟಕ್ಕಿದೆ
20x45 ಅಳತೆಯ 4 ಅಂತಸ್ತುಳ್ಳ ಪೂರ್ವದಿಕ್ಕಿನ 2 ವರ್ಷದ ಕಟ್ಟಡ ಸಿದ್ಧಾರ್ಥ ಲೇಔಟ್ ಯರಗನಹಳ್ಳಿ, ಮೈಸೂರು
7975957605

ಬೇಕಾಗಿದ್ದಾರೆ
ಮನೆಗಳಲ್ಲಿ ಹಾಗೂ ವೃದ್ಧಾಶ್ರಮದಲ್ಲಿ 24 ಗಂಟೆ ಉಳಿದುಕೊಂಡು ವೃದ್ಧರನ್ನು ನೋಡಿಕೊಳ್ಳಲು ಅನುಭವವಿರುವ ಅಥವಾ ಇಲ್ಲದಿರುವ 18 ವರ್ಷ ಮೇಲ್ಪಟ್ಟ ಅಭ್ಯರ್ಥಿಗಳು ತಕ್ಷಣ ಬೇಕಾಗಿದ್ದಾರೆ. ಕನಿಷ್ಠ ವಿದ್ಯಾರ್ಹತೆ ಸಾಕು. 12 ರಿಂದ 18 ಸಾವಿರದವರೆಗೂ ಸಂಬಳವಿರುತ್ತದೆ.
9916905188

ಸೋಫಾ ರಿಪೇರ್ ಅಂಡ್ ವರ್ಕ್ಸ್
ಸಂಪರ್ಕಿಸಿ:
9591012944

FOR SALE
1) 30x40 site, 16 Lakhs including registration near New R.T. Nagar. (2) 30x40, 'E' Preethi Layout, Srirampura. (3) 30x40 S/W Sky Top Layout, Yelawala. (4) 20x30 G+2 house R.K. Nagar and Dattagalli. (5) 14x100 W/E 2 side Road, near Ramavilas Road. (6) 18x40 E 40 feet road, Kuvempunagar.
PRAKRUTHI PROPERTIES
9538690359, 9035990359

ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗರು, ಹುಡುಗಿಯರು. ವಿಶ್ವೇಶ್ವರನಗರ, ಮೈಸೂರು
Mob: 6364647274

ಮನೆ ಬಾಡಿಗೆಗೆ ಇದೆ
1ನೇ &2ನೇ ಫ್ಲೋರ್ ಮನೆ ಬಾಡಿಗೆಗೆ ಇದೆ ಮತ್ತು ಸಿಂಗಲ್ ರೂಂ. (ಬಾತ್ ರೂಂ Attach) ಸ್ವಾಮಿ ವಿವೇಕಾನಂದ ಶಾಲೆ ಹಿಂಭಾಗ, ಕನಕಗಿರಿ, ಮೈಸೂರು
9972297508

ನಿವೇಶನ ಮಾರಾಟಕ್ಕಿದೆ
ಉತ್ತರ ದಿಕ್ಕು 30x40 ಜೆಪಿ ನಗರ ರಿಂಗ್ ರೋಡ್ ಹತ್ತಿರ
7019145099
9611346288
9449621667

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೇಕಾಗಿದ್ದಾರೆ
Captain, Cashier, Waiters, Asst. Waiters, KT/Asst., Bar/Boys, Room Supervisor, Receptionist.
Attractive Salary, PF & ESI with food and accommodation
ಸಂಪರ್ಕಿಸಿ
ಪಾರ್ಕ್‌ಲೇನ್ ಹೋಟೆಲ್
2720, ಹರ್ಷ ರಸ್ತೆ, ಮೈಸೂರು

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

MUDA APPROVED SITE FOR IMMEDIATE SALE
30X40, 40X60
1800 Sqft Onwards
Foothills of Chamundi Hill
Call 98800 65122 98459 84587

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಹೋಟೆಲ್ ಬಾಡಿಗೆಗೆ
ಉಪಯೋಗಿಸಲು ರೆಡಿ ಇರುವ ಸುಸಜ್ಜಿತವಾದ ಹೋಟೆಲ್ ಕುವೆಂಪುನಗರದ 'M' ಬ್ಲಾಕ್‌ನಲ್ಲಿ ಬಾಡಿಗೆಗೆ ಇದೆ ವೆಜ್ ಅಥವಾ ನಾನ್‌ವೆಜ್
7406078468

ಬೇಕಾಗಿದ್ದಾರೆ
ಕೋಲಾರದ 200 ಹುಡುಗಿರುವ ಇಂಜಿನಿಯರಿಂಗ್ ಕಾಲೇಜಿಗೆ ಕುಕ್ ಮತ್ತು ಅಸಿಸ್ಟೆಂಟ್ ಕುಕ್ ಬೇಕಾಗಿದ್ದಾರೆ. ಊಟ ವಸತಿ ಸೌಲಭ್ಯ ಇರುತ್ತದೆ.
9380394364

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

HOUSE FOR LEASE
Newly Built 2BHK Independent House, Fully Furnished with Solar Ground Floor Only @ Lalithadri Nagar, Near Ring Road, Behind Indian Oil Petrol Bunk
9964414484

RBI
ಟೇಬಲ್ ಮೌಲ್ಡ್ ಇಟ್ಟಿಗೆಗಳು
• ಪರಿಸರಸ್ನೇಹಿ ಗುಣಮಟ್ಟ • ಸುಲಭ ದೇವದ • ಅತ್ಯುತ್ತಮ ಧೃಡತೆ • ಕಡಿಮೆ ಬೆಲೆಯಲ್ಲಿ
82178 93849
98442 24480

ಮಂಟಪ ಮನೆ
ನಿತ್ಯ ಪೂಜೆ ಮಾಡಲು ನಿಮ್ಮೊಂದು ದೇವರ ಮಂಟಪ ಬೇಕೇ ಬೀಟೆ ಮತ್ತು ಹಲಸು ಮರದಿಂದ ತಯಾರಿಸುತ್ತೇವೆ
ಸಂಪರ್ಕಿಸಿ: ಶ್ರೀನಗರ ಮೈಸೂರು
9448207634
9036742526

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಶ್ರೀ ಮಲೆ ಮಹದೇಶ್ವರ ಸ್ವಾಮಿ ವಾಟರ್ ಪ್ರೂಫಿಂಗ್ ಸಲ್ಯೂಷನ್
ನಿಮ್ಮ ಮನೆ ಸೋರುತ್ತಿದೆಯೇ? ನಿಮ್ಮ ನೆಲ ಮಳೆಗೆ ಯಿಂದ ನೀರು ಬರುತ್ತಿದ್ದರೆ, ನಿಮ್ಮ ಸಂಪ್ ಬಾತ್ ರೂಂ ಯಾವುದೇ ಲೀಕೇಜ್ ಇದ್ದರೂ
ಕರೆ ಮಾಡಿ
9611011495
8951603167

40x60 ಸೈಟ್ ಮಾರಾಟಕ್ಕಿದೆ
ಬಾಪೂಜಿ ಬಡಾವಣೆ (ಬೋಗಾದಿ)
SBM ಬಡಾವಣೆ (N/F & E/F) ಸುಬ್ರಹ್ಮಣ್ಯ ನಗರ (ಬೋಗಾದಿ)
9448425692
7022759977

DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9590491194, 9606783264

ಬೋಳು ತಲೆಯ ಸಮಸ್ಯೆಯೇ?



SMART HAIR FIXING
574, 9th Cross, Anikethana Road, Kuvempunagar, Mysuru
MYSORE 9611028523 BANGALORE 9343142258

ITIಗೆ ಪ್ರವೇಶಾವಕಾಶ
2023–24 ನೇ ಸಾಲಿಗೆ ಎರಡು ವರ್ಷದ ITI ತರಬೇತಿಗೆ SSLC/PUC/Pass/Fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. NCVT ಭಾರತ ಸರ್ಕಾರದಿಂದ ಸಂಯೋಜನೆಗೊಂಡಿರುತ್ತದೆ.
ಬೆನಕ ಐ.ಟಿ.ಐ. ಕಾಲೇಜು
ರಾಜ ರಾಜ್‌ಕುಮಾರ್ ರಸ್ತೆ ಹತ್ತಿರ, ಕಾವೇರಿ ವೃತ್ತದ 4ನೇ ಕ್ರಾಸ್, ರಾಘವೇಂದ್ರ ನಗರ, ಮೈಸೂರು–29
9342123467
9141756695

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160

ಬೇಕಾಗಿದ್ದಾರೆ
• ಫೀಲ್ಡ್ ವರ್ಕ್‌ಗೆ ಜನ ಬೇಕಾಗಿದ್ದಾರೆ.
• ಗಂಡಸರಿಗೆ/ಹೆಂಗಸರಿಗೆ ಸುವರ್ಣ ಅವಕಾಶ
• ಪ್ರಾಯ/ವಿದ್ಯಾಭ್ಯಾಸ ಪರಿಮಿತಿ ಇಲ್ಲ
• ಉತ್ತಮ ಸಂಬಳ, ಉತ್ತಮ ಕಮೀಷನ್
7411673969
9972643699
9886693699

ತಕ್ಷಣ ಬೇಕಾಗಿದ್ದಾರೆ
ಆಫೀಸ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
9880151303

Job Opportunity Seminar
Reputed & famous banking Co., invites applications from State / Central Govt. Retired officials for the positions of officers. Education: 1) SSLC & above any Degree. (2) Benefits: Fixed salary + ESI+PF & various earnings. Bring necessary documents. Call: For venue details and date & time & seminar. Followed by Lunch.
9449068132, 7022034200

ನೇಮಕಾತಿ
ಖಾಲಿ ಹುದ್ದೆಗಳು
ಡಾಟಾ ಎಂಟ್ರಿ ಆಪರೇಟರ್ಸ್
ಸಂದರ್ಶನ ಸಮಯ:
ಬೆಳಿಗ್ಗೆ 10.00 ರಿಂದ ಸಂಜೆ 3.00 ಹುದ್ದೆ–50
ಸೆಂಚುರಿ ವಿಟಲ್ ರೆಕಾರ್ಡ್ಸ್ ಪ್ರೈ. ಲಿ.
#42, ಹೆಚ್ ಇಂಡಸ್ಟ್ರಿಯಲ್ ಪಾರ್ಕ್, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಮೇಟಗಳ್ಳಿ, ಮೈಸೂರು
hr@centuryvitalrecords.com
Mob: 8867064586

Drinking Water Borewell @ Rs. 80/- per feet
Maruthi Tube Wells (R.)



8184000444

ಕಳೆದಿದೆ
ಯೋಗಾನರಸಿಂಹ ಎಂ.ಆರ್., #EWS 430, ಎಲ್.ಕೆ. ನಗರ, ಹೆಬ್ಬಾಳ್, ಮೈಸೂರು, ದಿನಾಂಕ 15–9–2023ರಂದು ನನ್ನ ಸೈಟ್ ಮಾಡುವಾಗ ಮನೆಯ ದಾಖಲಾತಿಗಳಾದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಂಜೂರಾತಿ ಪತ್ರ ಹಾಗೂ ಮೈಸೂರು ಮಹಾನಗರ ಪಾಲಿಕೆಯ ಖಾತಾ ಪತ್ರ ಕಳೆದುಹೋಗಿರುತ್ತವೆ. ಸಿಕ್ಕಿದವರು ಸಂಪರ್ಕಿಸಿ:
Mob: 9686555331

HOUSES & OFFICE SPACE FOR RENT
@ SARASWATHIPURAM, KUVEMPUNAGAR & SURROUNDINGS.
S.S. Property Services
(Opp. Kuvempu School), S.S. Puram
93421-25252

ಬೇಕಾಗಿದ್ದಾರೆ
1) ಹೌಸ್ ಕೀಪರ್ (ಮಹಿಳೆಯರು)
2) ಫೀಲ್ಡ್ ಆಫೀಸರ್ (ಅನುಭವ ಹೊಂದಿರಬೇಕು)
3) ಸೆಕ್ಯೂರಿಟಿ ಸೂಪರ್ ವೈಸರ್
4) ಡೋರ್ ಮ್ಯಾನ್
5) ಸೆಕ್ಯೂರಿಟಿ ಗಾರ್ಡ್‌ಗಳು
(ಮೈಸೂರಿನ ಸುತ್ತಮುತ್ತಲಿನವರು)
9242406261
9686422400

WANTED
Telecallers
For HDFC Life Advisor
10th And Above Age 20Y-35 Years
No Field Work, Earn 7k Up to 12K
M.R. Associates
Saraswathipuram Mysore
9900844455

Sudarshan Saur
SOLAR WATER HEATER



ATTRACTIVE OFFER
ಸೇಲ್ಸ್ & ಸರ್ವೀಸ್
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಸಂಬಳ 12000-15000/-
Ph.9380142144
ಶಿವರಾಂಪೇಟೆ, ಮೈಸೂರು

ಬರವಣಿಗೆಯ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಶೀಟ್‌ಗೆ 40 ರೂ.ಗಳನ್ನು ಪಡೆಯಿರಿ.
9731891409
ಮೈಸೂರು ಅಗ್ರಹಾರ.
9449774835
ಚಾಮರಾಜನಗರ

ಬೇಕಾಗಿದ್ದಾರೆ
ನಗರದ ರೆಸ್ಟೋರೆಂಟ್ ಒಂದಕ್ಕೆ ಅನುಭವ ಇರುವ ಕ್ಯಾಶಿಯರ್ ಬೇಕಾಗಿದ್ದಾರೆ. ಉತ್ತಮ ಸಂಬಳ ನೀಡಲಾಗುವುದು.
9900661620

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವಾಹನ ಮಾಲೀಕರ ಸೌಹಾರ್ದ ಸಹಕಾರ ನಿಯಮಿತ. ನಂ.1164, 1&2 ನೇ ಮಹಡಿ, ಪಾಲಿಕೆ ಮಳಿಗೆಗಳು, ವಿಜಯನಗರ, ಕೃಷ್ಣರಾಜ ಮೊಹಲ್ಲಾ, ಮೈಸೂರು–24
ವಾರ್ಷಿಕ ಮಹಾಸಭೆ
ನಮ್ಮ ಸಹಕಾರಿಯ ಮಹಾಸಭೆಯನ್ನು ದಿನಾಂಕ: 24–9–2023ರಂದು ಭಾನುವಾರ ಬೆಳಿಗ್ಗೆ 10.30ಕ್ಕೆ ಸಹಕಾರಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ... ಹೋಟೆಲ್ ... ನಡೆಸಲಾಗುವುದು. ಎಲ್ಲಾ ಸದಸ್ಯರು ತಪ್ಪದೇ ಹಾಜರಾಗಬೇಕೆಂದು ಕೋರಲಾಗಿದೆ. ಸಹಿ/– ಅಧ್ಯಕ್ಷರು

ಸೈಟು ಮಾರಾಟಕ್ಕಿದೆ
30x40 ಅಡಿ ಅಳತೆ ಹೆಚ್.ಡಿ.ಕೋಟೆ ರಿಂಗ್ ರಸ್ತೆ ಬಳಿ ಮುಡಾ ಪ್ಲಾನ್ ಅಪ್ರೂವ್ಡ್ (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
ಸಂಪರ್ಕಿಸಿ:
9448600935

ಬೇಕಾಗಿದ್ದಾರೆ
SD ಡೆವಲಪರ್‌ಗೆ ಸೈಟ್ ಮತ್ತು ನಿವೇಶನಗಳು ಬಡಾವಣೆಗಳಲ್ಲಿ ಮಾರ್ಕೆಟಿಂಗ್ ಮಾಡಲು ನುರಿತ 5 ರಿಂದ 10 ವರ್ಷ ಅನುಭವವುಳ್ಳ ಯುವತಿಯರು ಇಂಗ್ಲೀಷ್ ಮಾತನಾಡಲು ಕಂಪ್ಯೂಟರ್ ಅನುಭವವುಳ್ಳವರು ಬೇಕಾಗಿದ್ದಾರೆ.
9980710905, 9900598757

WANTED
* Receptionist
* Typist
* Cook - Indian & Chinese
* Asst. Cook.
Call: 9620672223

WANTED FOR Bhaskar Heart Centre

Post	Qualification
Receptionist	Degree / PUC
Marketing / PRO (M)	Degree / PUC
Staff Nurses (F)	GNM / ANM
Laboratory Technician	CMLT / DMLT
Housekeeping	7th Standard

0821-2499188 / 9880186386

DOCUMENT LOST
I, H.R. Ramanujam, S/o Late H.R. Biligiri Rangachar, No. 151, 4th Stage, KHB Colony, JTK Layout, Kuvempunagar, Mysuru, have lost all the original house documents including sale deed, title deed, khata, allotment letter, possession letter from MUDA, Property No. 771, E&F Block of Ramakrishnanagar, Mysuru. Finders please contact:
Mob: 9481487834

ಸಪ್ತಪದಿ ಮ್ಯಾರೇಜ್ ಬ್ಯೂರೋ (R)
BE, MBA, M.Tech, MBBS, MD, MS All Degree / All Country ವಧು–ವರರ ಮಾಹಿತಿ ಮತ್ತು ಉಚಿತ ನೋಂದಣಿಗೆ ಸಂಪರ್ಕಿಸಿ:
www.sapthapadhi.com
80887 76211 / 80505 00421

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ–ಯುವತಿಯರು ಬೇಕಾಗಿದ್ದಾರೆ.
Salary : 13,000-21000+ESI,PF
ವಿದ್ಯಾರ್ಹತೆ: 10th, PUC, ITI, Diploma And Any Degree
ಇಂದೇ ಸಂಪರ್ಕಿಸಿ:
9035734821

WANTED
Front Office Assistant For a Wellness Centre in Gokulam
Female with Basic Degree & Excellent English Communication can Whatsapp Resume to
8867195370
kcl.lekha@gmail.com

Become a TEACHER
NURSERY TEACHER TRAINING (NTT)
PRIMARY TEACHER TRAINING (PTT)
For SSLC, PUC or Any Degree (Pass or Fail, Course provided by all india Early Childhood Care & Education (R)
ADMISSIONS OPEN
100% Job Guarantee! Call/whatsapp
9113980741

ಚಾಮುಂಡೇಶ್ವರಿ ಮ್ಯಾರೇಜ್ ಬ್ಯೂರೋ
ಒಕ್ಕಲಿಗ ಗೌಡ, ಕುರುಬ, ನಾಯಕ, ಬ್ರಾಹ್ಮಣ, ವಿಶ್ವಕರ್ಮ, ದೇವಾಂಗ, ಗಾಣಿಗ, ಬಣಜಿಗ, ಮೊದಲಿಯಾರ್, ಮಡಿವಾಳ, ಲಿಂಗಾಯತ, ಎಸ್ಸಿ, ಎಸ್ಟಿ, ಮರಾಠಿ, ಮಲೆಯಾಳ, 50 ವರ್ಷದ ಮೇಲ್ಪಟ್ಟ (ವಿಧವೆ) ವರಗಳು (Caste no bar). 1st, 2nd, ಲೇಟ್ ಮ್ಯಾರೇಜ್, ನೇರವಾಗಿ ಸಂಪರ್ಕಿಸಿ:
Mob: 8951241381
ಹಳುಕಳ್ಳಿ ಸರ್ಕಲ್ ಬಲಭಾಗ, ಕೆ.ಆರ್.ಎಸ್. ರೋಡ್, ಯೂನಿಯನ್ ಬ್ಯಾಂಕ್, 1ನೇ ಮಹಡಿ, ಮೈಸೂರು–18

ಪ್ರಮಾಣ ಪತ್ರ
ಮೈಸೂರು ಜಿಲ್ಲೆ ... ನನ್ನ ಮಗನ ... ಆಧಾರ್ ಕಾರ್ಡ್ ... ಬಗ್ಗೆ ಘೋಷಿಸಿಕೊಳ್ಳುತ್ತೇನೆ. ... 11–9–2023ರಂದು ಪ್ರಮಾಣೀಕರಿಸಲಾಗಿದೆ.
ಸಹಿ/– ಎ.ಎಸ್. ರವಿಚಂದ್ರನ್

WANTED
ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ.
Mob: 9845028614

ತಕ್ಷಣವೇ ಬೇಕಾಗಿದ್ದಾರೆ
ಮೈಸೂರು, ಹೆಬ್ಬಾಳ್ ಕೈಗಾರಿಕಾ ಪ್ರದೇಶದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು, ಅಕೌಂಟೆಂಟ್‌ಗಳು ಹಾಗೂ ಸ್ವೀಪರ್‌ಗಳು ಟೈಲರುಗಳು ಮತ್ತು ಹೆಲ್ಪರುಗಳು ಬೇಕಾಗಿದ್ದಾರೆ.
8105249880
7795285485

ತಕ್ಷಣ ಬೇಕಾಗಿದ್ದಾರೆ
ಹುಡುಗರು, ಹೆಬ್ಬಾಳು ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕಂಪನಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸೂಪರ್ ವೈಸರ್: 23000+W/O (8 hours)
ಗಾರ್ಡ್ : 17000+W/O (8 hours)
9880727819
9620667819

ಕೆಲಸಕ್ಕೆ ಬೇಕಾಗಿದ್ದಾರೆ
1. ಸೆಕ್ಯೂರಿಟಿ ಗಾರ್ಡ್ (ಪುರುಷರು): ಊಟದ ವ್ಯವಸ್ಥೆ ಇರುತ್ತದೆ. ಕೆ.ಆರ್.ಎಸ್. ರಸ್ತೆ, ಬನ್ನಿಮಂಟಪ, ಚಾಮುಂಡಿಪುರಂ, ಆಲ್ಕೇಟರ್, ಕಳಸ್ತವಾಡಿ, ಕುವೆಂಪುನಗರ, ಸಿದ್ದಲಿಂಗಪುರ, ಹೆಬ್ಬಾಳ್ 2ನೇ ಹಂತ, ಸರಸ್ವತಿಪುರಂ ಲಲಿತಾದ್ರಿಪುರ, ಊಟ ಹತ್ತಿರ.
8310098788

ಕೌಶಲ್ ಗೃಹ ನಿರ್ಮಾಣ ಸಹಕಾರ ಸಂಘ ನಿ.
12ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ಸೂಚನಾಪತ್ರ
ದಿನಾಂಕ: 24–09–2023ರ ಬೆಳಿಗ್ಗೆ 10.30 ಗಂಟೆಗೆ ಸ್ಥಳ : ಬಡಾವಣೆಯ ಕಚೇರಿ, ಆವರಣ ಅಧ್ಯಕ್ಷತೆ : ಕೆ.ನಾಗೇಂದ್ರ
ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ ಸಹಿ/– ಕಾರ್ಯದರ್ಶಿ

ವಾರ್ಷಿಕ ಮಹಾಸಭೆ
ಫ್ಲಾಕ್ ಟ್ರೇಡ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ 2022–2023ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ: 24–09–2023ರಂದು ಭಾನುವಾರ ಬೆಳಿಗ್ಗೆ 10.30ಕ್ಕೆ ... ನಡೆಸಲಾಗುವುದು. ... ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ ಸಹಿ/– ಕಾರ್ಯದರ್ಶಿ

ಪ್ರಮಾಣ ಪತ್ರ
ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ ... ಈ ಬಗ್ಗೆ ದಿನಾಂಕ 16–09–2023ರಂದು ಪ್ರಮಾಣೀಕರಿಸುತ್ತೇನೆ.
ಸಹಿ/– ಬಸವೇಗೌಡ

ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ತಕ್ಷಣ ಬೇಕಾಗಿದ್ದಾರೆ. ನಂಜನಗೂಡು, ಚಿಕ್ಕಯ್ಯನ ಛತ್ರ, ವಿಜಯ ಪ್ರದೇಶದಲ್ಲಿ, ಲೇಡಿ ಹಾಗೂ ಪುರುಷ ಅಭ್ಯರ್ಥಿಗಳು ತಕ್ಷಣ ಬೇಕಾಗಿದ್ದಾರೆ. ESI+PF ವೇತನ ಹಾಗೂ ಕೆಲಸದ ಸಮಯದಲ್ಲಿ ಊಟ+ತಿಂಡಿ ವ್ಯವಸ್ಥೆ ಇರುತ್ತದೆ ತಕ್ಷಣ ಸಂಪರ್ಕಿಸಿ.
7026101780
8618971363, 9035480020

100% ಕೆಲಸ
ಟೆಲಿಕಾಲಿಂಗ್ ಮಾಡಲು 20 ಯುವತಿಯರು ತಕ್ಷಣ ಬೇಕಾಗಿದ್ದಾರೆ. ಯಾವುದೇ ಪ್ರವೇಶ ಶುಲ್ಕ ಇರುವುದಿಲ್ಲ ಕನ್ನಡ ಓದಲು ಬರೆಯಲು ಬರುವವರಿಗೆ ಮೊದಲ ಆದ್ಯತೆ.
ವಿದ್ಯಾರ್ಹತೆ : SSLC, PUC, ITI, Any Degree.
ಸಂಬಳ: 7000- 15000
ಸ್ಥಳ: ಬಸವನಗುಡಿ ಸರ್ಕಲ್
9632600206, 9008357980

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ತಾಂಡ್ಯ ಮತ್ತು ಅಡಕನಹಳ್ಳಿ ಹುಂಡಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸಂಬಳ: 25400+w/o (12hrs)
9620777819
9620667819

ಬೇಕಾಗಿದ್ದಾರೆ
ಹೌಸ್‌ಕೀಪಿಂಗ್ ಸೂಪರ್‌ವೈಸರ್, ಹೌಸ್‌ಕೀಪಿಂಗ್, ಕೆಲಸಕ್ಕೆ ಮಹಿಳೆಯರು ಮತ್ತು ಹುಡುಗರು, ವಾರ್ಡ್ ಬಾಯ್ಸ್, ಸೆಕ್ಯೂರಿಟಿ ಗಾರ್ಡ್, ಸೆಕ್ಯೂರಿಟಿ ಸೂಪರ್, ಸೂಪರ್‌ವೈಸರ್ ಬೇಕಾಗಿದ್ದಾರೆ. ಯಾವುದೇ ಶುಲ್ಕ ಇರುವುದಿಲ್ಲ. ಉತ್ತಮ ಸಂಬಳ: +ESI+EPF
9482142207, 8884286321
8884286123

MATCH MAKERS, BRIDE / GROOMS
ವಧು/ವರರ ಮದುವೆ ಆಯ್ಕೆಗೆ ಭೇಟಿ
ಎಲ್ಲಾ ಜಾತಿಯ Govt Job, Private, ಡಾಕ್ಟರ್, ಇಂಜಿನಿಯರ್, ಎಲ್ಲಾ ಡಿಗ್ರಿ ಇರುವ upto 65 years ಸ್ವತಂತ್ರವಾಗಿರುವ 390 ವಧುಗಳಿಗೆ ವರ ಬೇಕು. ... ಇಚ್ಛಿಸುವವರು ... ಭೇಟಿ ನೀಡಿ, ಬಡವರ ವಧುಗಳಿಗೆ ರಿಯಾಯಿತಿ ಇದೆ.
7975728012

ಆಫೀಸ್ ಜಾಗ ಬಾಡಿಗೆಗೆ ಇದೆ
10x10 ಅಡಿ ಅಳತೆಯ ಆಫೀಸಿಗೆ ಮೊದಲನೇ ಅಂತಸ್ತಿನಲ್ಲಿ ಖಾಲಿ ಇದೆ ನಾರಾಯಣ ಶಾಸ್ತ್ರಿ ರಸ್ತೆ, ಶಾಂತಲಚಿತ್ರ ಮಂದಿರದ ಬಳಿ
9448600935

ಕೈಲಾಸಂ ಆಶ್ರಮ
ನಿಮ್ಮ ಸಮಸ್ಯೆಗಳಾದ ಸಾಲಬಾಧೆ, ಗಂಡಹೆಂಡತಿ ಜಗಳ, ಮದುವೆ ವಿಳಂಬ, ವ್ಯಾಪಾರದಲ್ಲಿ ನಷ್ಟ, ಮನೆಯಲ್ಲಿ ಶಾಂತಿ ನೆಮ್ಮದಿ ಇಲ್ಲದಿರುವುದು, ಶತ್ರುಗಳ ಕಾಟ ಇನ್ನೂ ಎಲ್ಲಾ ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ
ಗುರೂಜಿ
6361740552

ಸೈಟ್ ಬೇಕಾಗಿದೆ
ಲಾಲ್ ಬಹದ್ದೂರ್ ಶಾಸ್ತ್ರಿನಗರ ಮತ್ತು ಶಾರದಾದೇವಿ ಗೋಪಾಲನಗರದಲ್ಲಿ 20x30 ಹಾಗೂ 30x40 ಅಳತೆಯ ಸೈಟ್ ಬೇಕಾಗಿದೆ
ಸಂಪರ್ಕಿಸಿ: SS Group
ಪ್ರೊ. ಮನುಕುಮಾರ್ ಎಸ್.
9845525020

SITES FOR SALE
30x40, 20x40, 30x35 Sites, Bank Loan upto 80%, near Gurur Bus Stop, Ramabainagar, Mysore. DTCP approved (Corporation limits)
1.5 Kms from JP Nagar Ring Road
8660105902

WANTED FOR HELTHCARE SALES
At Mysore need Sales Executive / Delivery Boys / Fresh or Having Sales & Supply / Expereince in Health Care Products / Medical Devices, Part Time Person Can Also Apply. Contact :
888-464-5218 send CV to
myfamilycustomercare@gmail.com

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಕಂಪನಿಗಳಿಗೆ, ಶೋರೂಂಗಳಿಗೆ ಮತ್ತು ಆಫೀಸ್‌ಗಳಲ್ಲಿ ಕೆಲಸ ಮಾಡಲು ಯುವಕ ಯುವತಿಯರು ಬೇಕಾಗಿದ್ದಾರೆ Any Qualification, 7th, 10th, PUC, ITI, Any Degree Pass/Fail ಆದವರಿಗೆ ಅರ್ಹತೆಗೆ ತಕ್ಕಂತೆ ಕೆಲಸ ಸಂಬಳ: 15000/- ರಿಂದ 38000/- (ESI+PF+OT ಸೇರಿ)
9739857142, 9035143190

ಮನೆಗಳು ಬಾಡಿಗೆಗಿವೆ
ಮೈಸೂರಿನ ವಿಜಯನಗರದ 2ನೇ ಹಂತದಲ್ಲಿ 3 ಬೆಡ್ ರೂಮಿನ ಮತ್ತು 2 ಬೆಡ್ ರೂಮಿನ ಮನೆಯು ಬಾಡಿಗೆಗಿವೆ. ಮನೆ ಬಾಡಿಗೆಗೆ ಬೇಕಾಗಿರುವವರು ಸಂಪರ್ಕಿಸಿ: ಸುರೇಶ್
9206470833

ಆದಿ ಕರ್ನಾಟಕ (SC) ವಿವಾಹ ಮಾಹಿತಿ ಕೇಂದ್ರ
BA, B.Sc, B.Com, MA, M.Com, M.Sc, MBA, MBBS, BE, M.Tech, B.Ed, D.Ed, M.Ed
ಎಲ್ಲಾ ವಿವಾಹ ನೋಂದಣಿಗೆ ಕರೆ ಮಾಡಿ & (2nd Marriage also)
9164743059

ಬೇಕಾಗಿದ್ದಾರೆ
ಭದ್ರತಾ ಸಿಬ್ಬಂದಿಗಳು ಮೈಸೂರು ಹಾಗೂ ನಂಜನಗೂಡು ವಿವಿಧ ಕೈಗಾರಿಕಾ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸಲು ಬೇಕಾಗಿದ್ದಾರೆ. ಉತ್ತಮ ವೇತನ ಶ್ರೇಣಿ ಕ್ಯಾಂಟೀನ್ ಸೌಲಭ್ಯ ಮತ್ತು ಇತರೆ ಸೌಲಭ್ಯಗಳು ಲಭ್ಯವಿರುತ್ತದೆ.
6364857753
6364857751, 6364857754

ನಿವೃತ್ತ ನೌಕರರಿಗೆ ಉದ್ಯೋಗಾವಕಾಶ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮಾಡಲು ವಿಶೇಷ ಅವಕಾಶ. Business ಅವಕಾಶ ಸೆಮಿನಾರ್ ನಡೆಸಲಾಗುವುದು. Benifits : Fixed Salary + PF + ESI + ಇತರ ಭತ್ಯೆಗಳು ಲಭ್ಯವಿರುತ್ತವೆ. ಬೇಕಾಗುವ ದಾಖಲೆಗಳು: 1) ಫೋಟೋ 2) ಪ್ಯಾನ್‌ಕಾರ್ಡ್ 3) ಆಧಾರ್ ಕಾರ್ಡ್, 4) ಬ್ಯಾಂಕ್ ಪಾಸ್‌ಬುಕ್. ಸ್ಥಳ, ದಿನಾಂಕ ಮತ್ತು ಸಮಯ ಮಾಹಿತಿಗಾಗಿ ಸಂಪರ್ಕಿಸಿ.
7795039992

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆ ನೇರ ವ್ಯವಹರಿಸಬೇಕಾಗುತ್ತದೆ. ಇದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಚೈತ್ರ ಕುಂದಾಪುರ ಪ್ರಕರಣಕ್ಕೆ ಮೈಸೂರು ನಂಟು!




ಮೈಸೂರು, ಸೆ.20(ಬಿಎಲ್‌ಯು)– ಬಿಜೆಪಿ ಟಿಕೆಟ್ ಕೊಡಿಸುವ ನೆಪದಲ್ಲಿ ಚೈತ್ರ ಕುಂದಾಪುರ ಕೋಟ್ಯಾಂತರ ರೂ. ವಂಚನೆ ಪ್ರಕರಣಕ್ಕೆ ಮೈಸೂರು ನಂಟು ಇರುವುದು ಬಯಲಾಗಿದೆ. ಉದ್ಯಮಿಯಿಂದ ಪಡೆದ ಹಣದಲ್ಲಿ 65 ಲಕ್ಷ ರೂ.ಗಳನ್ನು ಅಭಿನವ ಹಾಲಾಶ್ರೀ ಸ್ವಾಮೀಜಿ ಮೈಸೂರಿನ ವ್ಯಕ್ತಿಯೊಬ್ಬರ ಮನೆಯಲ್ಲಿ ಬಚ್ಚಿಟ್ಟಿದ್ದರು ಎಂಬುದು ಬೆಳಕಿಗೆ ಬಂದಿದೆ. ಚೈತ್ರಾ ಕುಂದಾಪುರ ಬಂಧನವಾದ ನಂತರ ಅಭಿನವ ಹಾಲಾಶ್ರೀ ಸ್ವಾಮೀಜಿ ಮೈಸೂರಿಗೆ ಬಂದು ಒಂದು ದಿನ ವಾಸ್ತವ್ಯ ಹೂಡಿದ್ದರು. ಈ ವೇಳೆ ಮೈಸೂರಿನ ವ್ಯಕ್ತಿಯೊಬ್ಬರ ಮನೆಯಲ್ಲಿ 65 ಲಕ್ಷ ರೂಪಾಯಿ ಇರಿಸಿದ್ದರು. ಚೈತ್ರಾ ಕುಂದಾಪುರ ಪ್ರಕರಣ ಅರಿವಿಗೆ ಬಂದಾಗ ಆತಂಕಕ್ಕಿಡಾದ ಆ ವ್ಯಕ್ತಿ 65 ಲಕ್ಷ ರೂಪಾಯಿಗಳನ್ನು ವಿಜಯನಗರ ಜಿಲ್ಲೆ ಹೂವಿನಹಡಗಲಿಯ ಹಿರೇಹಡಗಲಿಯ ಸ್ವಾಮೀಜಿಯ ಮಠಕ್ಕೆ ಕೊಟ್ಟು ಬಂದಿದ್ದಾರೆ. ಈ ದೃಶ್ಯವನ್ನು ಆತ ವಿಡಿಯೋ ಮಾಡಿದ್ದಾನೆ. ಮಠದ ಪಲ್ಲಕ್ಕಿ ಬಳಿ ಹಣದ ಬ್ಯಾಗ್ ಇಟ್ಟ ಆತ, 'ಸ್ವಾಮೀಜಿ ಕೊಟ್ಟಿದ್ದ ಹಣದ ಬ್ಯಾಗ್ ಇಲ್ಲಿ ಇಟ್ಟಿದ್ದೇನೆ' ಎಂದು ವಿಡಿಯೋ ಮಾಡಿ ನಾಪತ್ತೆಯಾಗಿದ್ದಾನೆ. ಆ ವೀಡಿಯೋ ಈಗ ವೈರಲ್ ಆಗಿದೆ ಹಣದ ಬ್ಯಾಗ್ ಪತ್ತೆಯಾದ ಬಳಿಕ ಸ್ಥಳೀಯ ಪೊಲೀಸರಿಗೆ ಮಾಹಿತಿ ದೊರೆತಿದೆ. ತರುವಾಯ ಸಿಸಿಬಿ ಪೊಲೀಸರು ಪರಿಶೀಲನೆ ನಡೆಸಿ ಹಣವನ್ನು ವಶಕ್ಕೆ ಪಡೆದಿದ್ದಾರೆ.

ಅರಮನೆಗೆ ಬಣ್ಣ ಬಳಿಯುವುದರೊಂದಿಗೆ ಅಲಂಕಾರ ಕಾರ್ಯ ಆರಂಭ



ಮೈಸೂರು, ಸೆ.20(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಅರಮನೆಯಲ್ಲಿ ಸಿದ್ಧತಾ ಕಾರ್ಯ ಬಿರುಸಿನಿಂದ ನಡೆಯುತ್ತಿದ್ದು, ಅರಮನೆಯ ಗೋಡೆಗಳಿಗೆ ಬಣ್ಣ ಬಳಿಯುವ ಕಾರ್ಯ ನಡೆಯುತ್ತಿದೆ.

ನವರಾತ್ರಿ ಆರಂಭಕ್ಕೆ 25 ದಿನ ಮಾತ್ರ ವಿದ್ದು, ಈಗಾಗಲೇ ಅರಮನೆಯಲ್ಲಿ ಸಿದ್ದತಾ ಕಾರ್ಯ ಆರಂಭವಾಗಿದೆ. ಅರಮನೆ ಸುತ್ತಲಿನ ಗೋಡೆ ಸೇರಿದಂತೆ ಮುಖ್ಯ ಕಟ್ಟಡದ ಗೋಡೆಗಳಿಗೆ ಬಣ್ಣ ಬಳಿಯಲಾಗುತ್ತಿದೆ. 30ಕ್ಕೂ ಹೆಚ್ಚು ಮಂದಿ ಈ ಕಾರ್ಯದಲ್ಲಿ ತೊಡಗಿದ್ದಾರೆ. ನವರಾತ್ರಿಗೂ ಮುನ್ನ ಅರಮನೆ ಹೊಸ ಬಣ್ಣದಿಂದ ಕಂಗೊಳಿಸಲಿದ್ದು, ಪ್ರತಿ ವರ್ಷವೂ ಸಂಪ್ರದಾಯದಂತೆ ಅರಮನೆ ಮಂಡಳಿ ವತಿಯಿಂದ ಈ ಪ್ರಕ್ರಿಯೆ ನಡೆಯುತ್ತದೆ. ಅಲ್ಲದೆ ಅರಮನೆ ಮುಂಭಾಗದ ಉದ್ಯಾನವನಗಳಲ್ಲಿ ಕಳೆ ಗಿಡ ತೆರವುಗೊಳಿಸುವ ಕಾರ್ಯಕ್ಕೂ ಚಾಲನೆ ನೀಡಲಾಗಿದೆ. ಕೆಲವೇ ದಿನದಲ್ಲಿ ದೀಪಾಲಂಕಾರದ ಬಲ್ಬ್ ಬದಲಿಸುವ ಕಾರ್ಯ ಆರಂಭಿಸಲಾಗುತ್ತದೆ.



ದಸರಾ ಗಜಪಡೆ ಈಗಾಗಲೇ ಅರಮನೆ ಆವರಣದಲ್ಲಿ ಬೀಡು ಬಿಟ್ಟಿದ್ದು, ದಸರಾ ಮಹೋತ್ಸವದ ಕಳೆ ಕಟ್ಟುವಂತೆ ಮಾಡಿದೆ. ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಬಂಬೂ ಸವಾರಿ ಮಾರ್ಗದಲ್ಲಿ ತಾಲೀಮು ನಡೆಸುತ್ತಿರುವ ಗಜಪಡೆ, ಮಧ್ಯಾಹ್ನದ ವೇಳೆ ಅರಮನೆಗೆ ಬರುವ ಪ್ರವಾಸಿಗರ ಆಕರ್ಷಣೆ ಕೇಂದ್ರಬಿಂದುವಾಗಿವೆ. ಸಾಕಷ್ಟು ಪ್ರವಾಸಿಗರು ದೂರದಿಂದಲೇ ಗಜಪಡೆ ವೀಕ್ಷಿಸಿ ಸಂಭ್ರಮಿಸುತ್ತಿದ್ದಾರೆ. ಈ ನಡುವೆ ದಸರಾ ಸಿದ್ಧತಾ ಕಾರ್ಯ ಹಬ್ಬದ ವಾತಾವರಣವನ್ನು ಬಿಂಬಿಸುತ್ತಿದೆ.

ಕ್ಷಣ ಕ್ಷಣದ ಕುತೂಹಲಕಾರಿ '13' ಚಿತ್ರ ಯಶಸ್ವಿ ಪ್ರದರ್ಶನ



ಮೈಸೂರು, ಸೆ.20(ಎಂಟಿವೈ)–ಸಸ್ಪೆನ್ಸ್, ಥ್ರಿಲ್ಲರ್ ಹಾಗೂ ಮನರಂಜನಾ ಎಳೆಯನ್ನು ಒಳಗೊಂಡಿರುವ '13' ಶೀರ್ಷಿಕೆಯ ಕನ್ನಡ ಚಲನಚಿತ್ರ ಈಗಾಗಲೇ ರಾಜ್ಯಾದ್ಯಂತ ಬಿಡುಗಡೆಗೊಂಡು ಯಶಸ್ವಿ ಪ್ರದರ್ಶನ ಕಾಣುತ್ತಿದೆ ಎಂದು ನಿರ್ದೇಶಕ ಕೆ.ನರೇಂದ್ರ ಬಾಬು ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, '13' ಚಿತ್ರ ಈಗಾಗಲೇ ಕನ್ನಡ ಚಿತ್ರರಂಗದ ಕಲಾಭಿಮಾನಿ ಗಳ ಮನಗೆದ್ದಿದೆ. ಯಶಸ್ವಿ ಪ್ರದರ್ಶನ ಕಾಣುತ್ತಿದ್ದರೂ, ಪ್ರೇಕ್ಷಕರ ಬೇಡಿಕೆಯಿಂದಾಗಿ ರಾಜ್ಯದಾದ್ಯಂತ ಹೊಸದಾಗಿ ಇನ್ನೂ 50ಕ್ಕೂ ಹೆಚ್ಚು ಚಿತ್ರ ಮಂದಿರಗಳಲ್ಲಿ ಚಿತ್ರ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ.

13 ಕೋಟಿ ಹವಾಲ ಹಣ ಸಾಗಿಸುವ ಒಂದು ಗುಂಪು, ದಂಪತಿ, ಪತ್ತೆದಾರಿ ಸಂವಾದ ಮತ್ತು ರೋಚಕ ತಿರುವುಗಳನ್ನು ಈ ಚಲನಚಿತ್ರ ಒಳಗೊಂಡಿದೆ. ಪ್ರಮುಖ ಪಾತ್ರದಲ್ಲಿ ಹಿರಿಯ ನಟರಾದ ರಾಘವೇಂದ್ರ ರಾಜ್‌ಕುಮಾರ್, ಶ್ರುತಿ, ಪ್ರಮೋದ್‌ಶೆಟ್ಟಿ ಇನ್ನಿತರರು ಅಭಿನಯಿಸಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ರಾಘವೇಂದ್ರ ರಾಜ್‌ಕುಮಾರ್, ನಿರ್ಮಾಪಕ ಮಂಜುನಾಥ್ ಗೌಡ ಹಾಗೂ ಇನ್ನಿತರರು ಇದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಮೈಸೂರು ಮೆಡಿಕಲ್ ಕಾಲೇಜು ವ್ಯಾಪ್ತಿ ಆಡಳಿತಾತ್ಮಕವಾಗಿ ಮಹಿಳೆಯರದ್ದೇ ಪಾರುಪತ್ಯ



ಡಾ.ಕೆ.ಆರ್.ದಾಕ್ಷಾಯಿಣಿ | ಸಿ.ಆರ್.ಕಲ್ಪಶ್ರೀ | ಡಾ.ಹೆಚ್.ಪಿ.ಶೋಭಾ | ಕೆ.ಎಂ.ಚಂದ್ರಕಲಾ | ಡಾ.ಡಿ.ಕೆ.ಸುನಿತಾ | ಡಾ.ಬಿ.ಅಮೃತಾ | ಡಾ.ಎಸ್.ಮೀರಾ | ಡಾ.ಜಿ.ಸಿ.ಪೂರ್ಣಿಮಾ | ಡಾ.ಎಂ.ಎಲ್.ರೇವತಿದೇವಿ | ಡಾ.ಎಂ.ಜಿ.ಹೇಮಾ | ಡಾ.ಎಂ.ಆರ್.ಸವಿತಾ



ಡಾ.ಎಂ.ಸತ್ಯಾ | ಡಾ.ಆರ್.ಸುಧಾ

ಡೀನ್, ಸಿಎಓ, ಮೆಡಿಕಲ್ ಸೂಪರಿಂಟೆಂಡೆಂಟ್, ಆಡಳಿತಾಧಿಕಾರಿ, 24 ವಿಭಾಗಗಳ ಪೈಕಿ 11ರಲ್ಲಿ ಮಹಿಳೆಯರೇ ಉಸ್ತುವಾರಿಗಳು







ಡಾ.ಎಸ್.ಹಿಮಾಮಣಿ | ಎ.ಬಿ.ಪುಷ್ಪಲತಾ

■ ಎಸ್.ಟಿ.ರವಿಕುಮಾರ್

ಮೈಸೂರು, ಸೆ.20–ದೇಶದಲ್ಲಿ ಮಹಿಳಾ ಮೀಸಲಾತಿ ಜಾರಿಯಾಗಿ ಲೋಕಸಭೆ, ರಾಜ್ಯ ವಿಧಾನಸಭೆಗಳಲ್ಲಿ ಶೇ.33 ಮೀಸಲಾತಿ ಅನುಷ್ಠಾನವಾಗುತ್ತೋ–ಇಲ್ಲವೋ ಗೊತ್ತಿಲ್ಲ. ಆದರೆ ಕರ್ನಾಟಕ ರಾಜ್ಯ ಸರ್ಕಾರದ ವೈದ್ಯಕೀಯ ಶಿಕ್ಷಣ ಇಲಾಖೆ ಆಡಳಿತ ವ್ಯಾಪ್ತಿಗೆ ಬರುವ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (MMC & RI) ಹಾಗೂ ಅಧೀನದ ಕೃಷ್ಣರಾಜೇಂದ್ರ ಆಸ್ಪತ್ರೆ (KRH) ಮತ್ತು ಚೆಲುವಾಂಬ ಆಸ್ಪತ್ರೆಗಳಲ್ಲಿ ಆಡಳಿತಾತ್ಮಕ ಶ್ರೇಣಿಯಲ್ಲಿ ಪ್ರಮುಖ ಹುದ್ದೆಗಳನ್ನು ಮಹಿಳಾ ಅಧಿಕಾರಿಗಳೇ ನಿರ್ವಹಿಸುತ್ತಿರುವುದು ಗಮನಾರ್ಹ.

ಕಾಲೇಜಿನ ಡೀನ್ ಅಂಡ್ ಡೈರೆಕ್ಟರ್, ಮುಖ್ಯ ಆಡಳಿತಾಧಿಕಾರಿ, ಕೆಆರ್.ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು (MS) ಆಡಳಿತಾಧಿಕಾರಿ (AO) ಹಾಗೂ ಕಾಲೇಜಿನಲ್ಲಿರುವ 24 ವಿಭಾಗಗಳ ಪೈಕಿ 11ರಲ್ಲಿ ಮಹಿಳಾ ಪ್ರಾಧ್ಯಾಪಕರೇ ಮುಖ್ಯಸ್ಥ(HOD)ರಾಗಿ ಸೇವೆ ಸಲ್ಲಿಸುತ್ತಿರುವುದು ವಿಶೇಷ. ಶತಮಾನದ ಹೊಸ್ತಿಲಿನಲ್ಲಿರುವ ಪ್ರತಿಷ್ಠಿತ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಅತ್ಯುನ್ನತ ಹುದ್ದೆಯಾದ ಡೀನ್ ಅಂಡ್ ಡೈರೆಕ್ಟರ್ ಸ್ಥಾನದಲ್ಲಿ ಡಾ.ಕೆ.ಆರ್.ದಾಕ್ಷಾಯಿಣಿ, ಅಧೀನದಲ್ಲಿರುವ 24 ವಿಭಾಗಗಳನ್ನು ನಿಭಾಯಿಸುತ್ತಿದ್ದಾರೆ. ಕಾಲೇಜಿನ ಬೋಧನಾ ಆಸ್ಪತ್ರೆ (teaching Hospital)ಗಳಾದ ಕೆಆರ್., ಚೆಲುವಾಂಬ, ಪಿಕೆಟಿಬಿ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು, ಟ್ರಾಮಾ ಕೇರ್ ಸೆಂಟರ್, ವೈದ್ಯಕೀಯ ವಿದ್ಯಾರ್ಥಿಗಳ ಮಹಿಳಾ ಮತ್ತು ಪುರುಷರ ಹಾಸ್ಟೆಲ್‌ಗಳ ಜವಾಬ್ದಾರಿಯನ್ನು ಸಹ ಇವರು ಯಶಸ್ವಿಯಾಗಿ ಮುನ್ನಡೆಸುತ್ತಿದ್ದಾರೆ.

ಕಾಲೇಜಿನ ಆಡಳಿತ ಮತ್ತು ಹಣಕಾಸು ವಹಿವಾಟು ನೋಡಿಕೊಳ್ಳುತ್ತಿರುವ ಮುಖ್ಯ ಆಡಳಿತಾಧಿಕಾರಿ (CAO) ಸಿ.ಆರ್.ಕಲ್ಪಶ್ರೀ, ಕೆ.ಆರ್.ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿಯಾಗಿ ಕೀಲು ಮತ್ತು ಮೂಳೆ ತಜ್ಞರಾದ ಡಾ. ಹೆಚ್.ಪಿ.ಶೋಭಾ ಹಾಗೂ ಆಸ್ಪತ್ರೆಯ ಆಡಳಿತಾಧಿಕಾರಿಯಾಗಿ ಕೆ.ಎಂ.ಚಂದ್ರಕಲಾ ಕಾರ್ಯ ನಿರ್ವಹಿಸುತ್ತಿದ್ದಾರೆ.

ಅದೇ ರೀತಿ ಕಾಲೇಜಿನ ಅನಾಟಮಿ ವಿಭಾಗದ ಮುಖ್ಯಸ್ಥೆ ಡಾ. ಜಿ.ಸಿ.ಪೂರ್ಣಿಮಾ, ಬಯೋಕೆಮಿಸ್ಟ್ರಿ ವಿಭಾಗದ ಡಾ. ಎಸ್. ಮೀರಾ, ಫಿಸಿಯಾಲಜಿಯ ಡಾ. ಎಂ.ಎಲ್. ರೇವತಿದೇವಿ, ಫಾರ್ಮಕಾಲಜಿಯ ಡಾ. ಎನ್.ಜಿ.ಹೇಮಾ, ಮೈಕ್ರೋಬಯಾಲಜಿಯ ಡಾ. ಬಿ.ಅಮೃತಾ ಕುಮಾರ್, ಮೆಡಿಸಿನ್ ವಿಭಾಗದ ಡಾ. ಡಿ.ಕೆ.ಸುನಿತಾ, ಪೀಡಿಯಾಟ್ರಿಕ್ಸ್‌ನ ಡಾ. ಎಂ.ಆರ್.ಸವಿತಾ, ರೇಡಿಯೋ ಥೆರಪಿಯ ಡಾ. ಎಂ.ಸತ್ಯ, ಓಬಿಜಿಯ ಡಾ.ಆರ್.ಸುಧಾ, ನೆಫ್ರಾಲಜಿಯ ಡಾ. ಎಸ್.ಹಿಮಾಮಣಿ ಅವರು ವಿಭಾಗದ ಮುಖ್ಯಸ್ಥರಾಗಿದ್ದರೆ, ನರ್ಸಿಂಗ್ ಕಾಲೇಜು ಪ್ರಾಂಶುಪಾಲರಾಗಿ ಎ.ಬಿ.ಪುಷ್ಪಲತಾ ಸೇವೆ ಸಲ್ಲಿಸುತ್ತಿದ್ದಾರೆ.

ಕಾಲೇಜಿನಲ್ಲಿ ಅನಾಟಮಿ, ಫಾರ್ಮಕಾಲಜಿ, ಫೊರೆನ್ಸಿಕ್ ಮೆಡಿಸಿನ್, ಅರವಳಿಕಾ ಶಾಸ್ತ್ರ, ದಂತ, ಇಎನ್‌ಟಿ, ವೈದ್ಯಶಾಸ್ತ್ರ, ನರಶಾಸ್ತ್ರ ನ್ಯೂರೋ, ಕೀಲು ಮತ್ತು ಮೂಳೆ, ನೇತ್ರ, ಪ್ಲಾಸ್ಟಿಕ್ ಸರ್ಜರಿ, ಮನೋರೋಗ, ಶಸ್ತ್ರ ಚಿಕಿತ್ಸೆ, ಗ್ಯಾಸ್ಟ್ರೋ ಎಂಟರಾಲಜಿ, ಚರ್ಮರೋಗ, ರೇಡಿಯಾಲಜಿ, ಆಂಕಾಲಜಿ, ಯೂರಾಲಜಿ, ನೆಫ್ರಾಲಜಿ, ಮೈಕ್ರೋಬಯಾಲಜಿ, ಬಯೋಕೆಮಿಸ್ಟ್ರಿ, ಕಮ್ಯುನಿಟಿ ಮೆಡಿಸಿನ್ ಹಾಗೂ ಪೆಥಾಲಜಿ ಎಂಬ 24 ವಿಭಾಗಗಳಿದ್ದು, ಆ ಪೈಕಿ 11ರಲ್ಲಿ ಮಹಿಳೆಯರ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಅಲ್ಲದೇ ಸಹಾಯಕ ಪ್ರಾಧ್ಯಾಪಕರು, ಶುಶ್ರೂಷಕರು, ಹೌಸ್ ಸರ್ಜನ್‌ಗಳು, ಟೆಕ್ನೀಷಿಯನ್‌ಗಳು, ಲ್ಯಾಬೊರೇಟರಿ, ಓಟಿ, ವೈದ್ಯಕೇತರ ಹುದ್ದೆಗಳಲ್ಲೂ ಬಹುತೇಕ ಮಹಿಳೆಯರೇ ಕಾರ್ಯ ನಿರ್ವಹಿಸುತ್ತಿರುವುದೂ ಇಲ್ಲಿ ಗಮನಾರ್ಹವಾಗಿದೆ.

ವಿದ್ವಾನ್ ವಿವೇಕ ಮೋಚಿಕುಲಂ ಅಮೋಘ ಗಾಯನಕ್ಕೆ ಮರುಳಾದ ಪ್ರೇಕ್ಷಕ ಮಹಾಶಯ



ಮೈಸೂರು, ಸೆ.20(ಎಸ್‌ಪಿಎನ್)– ಮೈಸೂರಿನ ವಾಣಿವಿಲಾಸ(ವಿವಿ) ಮೊಹಲ್ಲಾ 8ನೇ ಕ್ರಾಸ್‌ನಲ್ಲಿ ಶ್ರೀ ಪ್ರಸನ್ನ ವಿದ್ಯಾಗಣಪತಿ ಮಹೋತ್ಸವ ಚಾರಿಟಬಲ್(ಎಸ್‌ಪಿವಿಜಿಎಂಸಿ) ಟ್ರಸ್ಟ್ ವತಿಯಿಂದ ಗಣೇಶ ಮಹೋತ್ಸವದ ಅಂಗವಾಗಿ 62ನೇ 'ಪಾರಂಪರಿಕ ಸಂಗೀತೋತ್ಸವ' ದಲ್ಲಿ ವಿದ್ವಾನ್ ವಿವೇಕ್ ಅವರ ಕರ್ನಾಟಕ ಶಾಸ್ತ್ರೀಯ ಸಂಗೀತದ ವಿವಿಧ ರಾಗಗಳ ಗಾಯನಕ್ಕೆ ಪ್ರೇಕ್ಷಕರು ತಲೆದೂಗಿದರು.

ಕರ್ನಾಟಕ ಸಂಗೀತದ 'ಪಕ್ಕವಾದ್ಯ' ಗಳಾದ 'ಮೃದಂಗ' ಹಾಗೂ 'ಘಟಂ'ಗಳ ಜುಗಲ್‌ಬಂದಿಯಲ್ಲಿ ತ್ಯಾಗರಾಜ, ಮೈಸೂರು ವಾಸುದೇವಚಾರ್ ಸೇರಿದಂತೆ ವಾಗ್ಗೇಯಕಾರರ ಕೃತಿಗಳನ್ನು ವಿದ್ವಾನ್ ವಿವೇಕ್ ಮೋಚಿಕುಲಂ ಅವರ ಮನೋಜ್ಞವಾಗಿ ಗಾಯನಕ್ಕೆ ಸಹೃದಯರು ಮನಸೋತರು.

ತ್ಯಾಗರಾಜರ 'ಸೌರಾಷ್ಟ್ರಂ' ರಾಗ, ಆದಿತಾಳದ ಕೃತಿ 'ಶ್ರೀ ಗಣಪತಿಂ ಸೇವಿಂಪರಾರೆ' ಮೂಲಕ ಕಛೇರಿ ಆರಂಭಿಸಿದ ವಿವೇಕ್ ಅವರು ಸಂಗೀತಾಸಕ್ತರನ್ನು ಆಕರ್ಷಿಸಿದರಲ್ಲದೆ, ಮೈಸೂರು ವಾಸುದೇವಾಚಾರ್ಯರ 'ಕಾಂಭೋಜಿ' ರಾಗದ 'ಲಂಬೋದರಂ ಅವಲಂಬೆ ಅಂಬಾಸುತ ಅಮರವಿನುತಾ' ಕೃತಿ ಹಾಡುವಾಗ ಪ್ರೇಕ್ಷಕರು ತಲೆದೂಗಿದರು.

ಮೃದಂಗದಲ್ಲಿ ಮನ್ನಾರ್‌ಗುಡಿ ಈಶ್ವರನ್, ಘಟಂನಲ್ಲಿ ಗಿರಿಧರ್ ಉಡುಪ ಸಾಥ್ ನೀಡುತ್ತಿದ್ದರೆ, ವಯಲಿನ್‌ನಲ್ಲಿ ವಿದ್ವಾನ್ ಎಚ್.ಎನ್.ಭಾಸ್ಕರ್ ನಾದ ಲಹರಿಯಲ್ಲಿ ತೇಲಿಸಿದರು. ಅಂತೆಯೇ ವಾಸುದೇವಾಚಾರ್ಯ ಅವರ 'ಅಭೇರಿ' ರಾಗದ ಕೃತಿ 'ಭಜರೆ ಮಾನಸ' ಕೃತಿಯನ್ನು ವಿಸ್ತಾರವಾಗಿ ಹಾಡಿದರು. ಸಹನಾ ರಾಗದಲ್ಲಿ ರಾಗ, ತಾನ, ಪಲ್ಲವಿ, ಪುರಂದರದಾಸರ ಕೃತಿ 'ಸಿಂಧೂ ಭೈರವಿ' ರಾಗದ 'ವೆಂಕಟಾಚಲ ನಿಲಯಂ' ಪ್ರಸ್ತುತಪಡಿಸಿದರು. ಆನಂದ ಭೈರವಿಯಲ್ಲಿ ತಿಲ್ಲಾನ, ಸೌರಾಷ್ಟ್ರ ರಾಗದಲ್ಲಿ ಮಂಗಳ ಹಾಡಿದರು. ಇದಕ್ಕೂ ಮುನ್ನ ಗಣೇಶ ಪುರಾಣ ಕುರಿತು ವಿದ್ವಾನ್ ಮಹಿಮಾ ಕಶ್ಯಪ್ ವಾಚನ ಮಾಡಿದರೆ, ಡಾ.ಜ್ಯೋತಿ ಶಂಕರ್ ಶ್ಲೋಕಗಳ ವ್ಯಾಖ್ಯಾನ ಮಾಡಿ ದರು. ಈ ವೇಳೆ ಟ್ರಸ್ಟ್‌ನ ಕಾರ್ಯದರ್ಶಿ ಸಿ.ಆರ್.ಹಿಮಾಂಶು ಮತ್ತಿತರರು ಉಪಸ್ಥಿತರಿದ್ದರು.

ನಾಳೆ ವಾರ್ಷಿಕ ಮಹಾಸಭೆ

ಮೈಸೂರು, ಸೆ.20– ಶ್ರೀ ಭಗವತಿ ಕೊಡವ ಸೌಹಾರ್ದ ಸಹಕಾರಿ ಸಂಘ ನಿ., 2022–23ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ಸೆ.22ರಂದು ಬೆಳಿಗ್ಗೆ 10ಕ್ಕೆ ಮೈಸೂರಿನ ವಿಜಯನಗರದ ಕೊಡವ ಸಮಾಜದಲ್ಲಿ ನಡೆಯಲಿದೆ. ಸಭೆಯ ಅಧ್ಯಕ್ಷತೆಯನ್ನು ಪಿ.ಕೆ.ಸೋಮಣ್ಣ ವಹಿಸಲಿದ್ದಾರೆ ಎಂದು ಸೌಹಾರ್ದದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಯು. ನಂಜಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಂಐಟಿಎಂ ಸಿಬ್ಬಂದಿಗೆ ಸನ್ಮಾನ

ಮೈಸೂರು: ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಇಂಜಿನಿಯರ್ಸ್ ಡೇ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ 10 ವರ್ಷಗಳ ಸೇವಾವಧಿಯನ್ನು ಪೂರ್ಣಗೊಳಿಸಿದ ಸಿಬ್ಬಂದಿಯನ್ನು ಸನ್ಮಾನಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು. ಎಂಐಟಿ ಅಧ್ಯಕ್ಷ ಡಾ. ಎಸ್.ಮುರಳಿ, ಪ್ರಾಂಶುಪಾಲ ಡಾ. ಬಿ.ಜಿ.ನರೇಶ್ ಎಲ್ಲಾ ವಿಭಾಗಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

ಛತ್ತೀಸ್‌ಗಢ: ದಾಂತೇವಾಡದಲ್ಲಿ ಭದ್ರತಾ ಸಿಬ್ಬಂದಿ–ನಕ್ಸಲೀಯರ ನಡುವೆ ಗುಂಡಿನ ಚಕಮಕಿ

ಇಬ್ಬರು ಮಹಿಳಾ ನಕ್ಸಲೀಯರ ಹತ್ಯೆ

ದಾಂತೇವಾಡ(ಛತ್ತೀಸ್‌ಗಢ), ಸೆ.20– ದಾಂತೇವಾಡ ಜಿಲ್ಲೆಯಲ್ಲಿ ಭದ್ರತಾ ಸಿಬ್ಬಂದಿಯೊಂದಿಗೆ ನಡೆದ ಎನ್‌ಕೌಂಟರ್‌ನಲ್ಲಿ ಇಬ್ಬರು ಮಹಿಳಾ ನಕ್ಸಲೀಯರು ಹತರಾಗಿದ್ದಾರೆ. ರಾಜ್ಯ ಪೊಲೀಸ್ ಘಟಕದ ಜಿಲ್ಲಾ ಮೀಸಲು ಗಾರ್ಡ್ ತಂಡವು ನಕ್ಸಲ್ ವಿರೋಧಿ ಕಾರ್ಯಾಚರಣೆ ನಡೆಸುತ್ತಿದ್ದಾಗ ಅರನ್‌ಪುರ ಪೊಲೀಸ್ ಠಾಣೆಯ ಅರಣ್ಯ ವ್ಯಾಪ್ತಿಯಲ್ಲಿ ಬೆಳಿಗ್ಗೆ 7 ಗಂಟೆ ಸುಮಾರಿಗೆ ಗುಂಡಿನ ದಾಳಿ ನಡೆದಿತ್ತು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದಾಂತೇವಾಡ–ಸುಕ್ಮಾ ಅಂತರಜಿಲ್ಲಾ ಗಡಿಯಲ್ಲಿರುವ ನಾಗರಂ–ಪೊರೊ ಹಿರ್ಮಾ ಅರಣ್ಯದ ಬಳಿ ನಿಷೇಧಿತ ಸಂಘಟನೆಯ ದರ್ಭಾ ವಿಭಾಗದ ನಕ್ಸಲೀಯರು ಇರುವ ಬಗ್ಗೆ ಮಾಹಿತಿ ಪಡೆದ ಭದ್ರತಾ ಸಿಬ್ಬಂದಿ ಕಾರ್ಯಾಚರಣೆ ಆರಂಭಿ ಸಿದ್ದರು. ಗಸ್ತು ತಂಡವು ಪ್ರದೇಶವನ್ನು ಸುತ್ತುವರೆದಿರುವಾಗ, ಎರಡೂ ಕಡೆಯವರ ನಡುವೆ ಗುಂಡಿನ ಚಕಮಕಿ ಪ್ರಾರಂಭವಾಯಿತು. ಗುಂಡಿನ ದಾಳಿ ನಿಂತ ನಂತರ ಇಬ್ಬರು ಮಹಿಳಾ ನಕ್ಸಲೀಯರ ಮೃತದೇಹಗಳು ಹಾಗೂ ಒಂದು INSAS ರೈಫಲ್ ಮತ್ತು 12 ಬೋರ್ ರೈಫಲ್ ಅನ್ನು ಸ್ಥಳದಿಂದ ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ನಡೆಯುತ್ತಿದೆ.

ಸೆ.23ರಂದು ರತ್ನಾಕರ್ ನೆನಪು



ಮೈಸೂರು,ಸೆ.20(ಎಂಟಿವೈ)– ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ಸೆ.23ರಂದು ಸಂಜೆ 6ಕ್ಕೆ ಹಿರಿಯ ಹಾಸ್ಯ ಕಲಾವಿದ 'ರತ್ನಾಕರ್ ನೆನಪು' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಗಾಯಕ ರಾಘವೇಂದ್ರ ರತ್ನಾಕರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರತ್ನಾಕರ್ ಅಭಿಮಾನಿ ಬಳಗದ ವತಿಯಿಂದ ರತ್ನಾಕರ್ ನೆನಪು ಕಾರ್ಯಕ್ರಮ ನಡೆಯಲಿದೆ. 60–70ರ ದಶಕದಲ್ಲಿನ ಹಾಸ್ಯ ನಟರಲ್ಲಿ ರತ್ನಾಕರ್ ಪ್ರಮುಖರಾಗಿದ್ದರು. ತಮ್ಮ ವಿಶಿಷ್ಟ ಧ್ವನಿಯಿಂದ ಹೆಸರು ಮಾಡಿದ್ದ ರತ್ನಾಕರ್ ಎಂ.ವಿ. ರಾಜಮ್ಮ ಮತ್ತು ಬಿ.ಆರ್. ಪಂತಲು ನಿರ್ಮಾಣದ 'ವಿಚಿತ್ರ ಪ್ರಪಂಚ' ಚಲನ ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದರು. ತಮ್ಮ ಜೀವನದುದ್ದಕ್ಕೂ ಕನ್ನಡ ಚಿತ್ರರಂಗದ ಹಾಸ್ಯ ಕಲಾವಿದರಾಗಿ ಜನರನ್ನು ರಂಜಿಸಿ, ಕಣ್ಮರೆಯಾದರು. 50 ಚಲನಚಿತ್ರಗಳಲ್ಲಿ ಹಾಸ್ಯ ನಟರಾಗಿ ಕಾಣಿಸಿಕೊಂಡಿದ್ದಾರೆ. ಕೆಲ ಚಿತ್ರಗಳನ್ನೂ ನಿರ್ದೇಶಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ನೆನಪು ಕಾರ್ಯಕ್ರಮ ನಡೆಸಲಾಗುತ್ತಿದೆ. ರತ್ನಾಕರ್ ನೆನಪು ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್, ಶಾಸಕ ಟಿ.ಎಸ್. ಶ್ರೀವತ್ಸ, ಮೈಲ್ಯಾಕ್ ಮಾಜಿ ಅಧ್ಯಕ್ಷ ರಘು ಆರ್.ಕೌಟಿಲ್ಯ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ರಂಗಕರ್ಮಿ ನಾ. ನಾಗಚಂದ್ರ, ಡಾ.ಪ್ರೀತಂ ರತ್ನಾಕರ್ ಇದ್ದರು.

ಕಿವಿಗಡಚಿಕ್ಕುವ ತಮಟೆ ಸದ್ದಿನೊಂದಿಗೆ ಮೊಳಗಿದ ಜಾನಪದ ನೃತ್ಯದ ಸೊಬಗು...

ಹರಿಚರಣ್ ಹರಿಸಿದ ಗಾನಸುಧೆಗೆ ತಲೆದೂಗಿದ ಪ್ರೇಕ್ಷಕರು...

ಮೈಸೂರು,ಸೆ.20(ಪಿಎಂ)– ಕಿವಿಗಡಚಿಕ್ಕುವ ತಮಟೆ ಸದ್ದಿನೊಂದಿಗೆ ಪ್ರದರ್ಶನಗೊಂಡ ನಾಡಿನ ಜಾನಪದ ಕಲಾ ಪ್ರಕಾರದ ನೃತ್ಯದ ಸೊಬಗು ನೆರೆದವರಲ್ಲಿ ರೋಚಕ ಕ್ಷಣಗಳ ಆಲಿಂಗನ ಉಂಟು ಮಾಡಿತಲ್ಲದೆ, ಹುಚ್ಚೆದ್ದು ಕುಣಿದು ಶಿಳ್ಳೆ–ಚಪ್ಪಾಳೆಯೊಂದಿಗೆ ಸಂಭ್ರಮದಲ್ಲಿ ತೇಲಿಸಿತು.

ಪೂಜಾ ಕುಣಿತದ ಸಾಹಸಮಯ ಹೆಜ್ಜೆಗಳು ಪ್ರೇಕ್ಷಕರಲ್ಲಿ ರೋಮಾಂಚನ ಸಿಂಚನದ ಪುಳಕವಿಟ್ಟರೆ, ವೀರಗಾಸೆ ಕುಣಿತದ ರೋಷಾವೇಶದ ಭಾವಭಂಗಿ ನೋಡುಗರು ಉಸಿರು ಬಿಗಿಹಿಡಿಯುವಂತೆ ಮಾಡಿತು. ಸಾಲು ಸಾಲು ಜಾನಪದ ನೃತ್ಯದ ಅನಾವರಣವು ಪ್ರೇಕ್ಷಕರ ಸಂಭ್ರಮವನ್ನು ಇಮ್ಮಡಿಗೊಳಿಸುವಲ್ಲಿ ಯಶಸ್ವಿಯಾಯಿತು. ಇದರ ಬೆನ್ನಲ್ಲೇ ಹರಿಚರಣ್ ತಂಡದ ಬ್ಯಾಂಡ್ ಸಂಗೀತದ ಕಂಪನ, ಗಾನಸುಧೆಯ ಇಂಪನದ ಅಮಲಿನಲ್ಲಿ ಪ್ರೇಕ್ಷಕರು ಸಂಭ್ರಮಿಸಿದರು. ಹರಿಚರಣ್ ಹರಿಸಿದ ಗಾನಸುಧೆಗೆ ತಲೆದೂಗಿದರು. ಮೈಸೂರಿನ ಜೆಎಲ್‌ಬಿ ರಸ್ತೆಯ ಮಾಧವ ಕೃಪಾದ ಪಕ್ಕದ ತಾತ್ಕಾಲಿಕ ವೇದಿಕೆಯಲ್ಲಿ ಇಂತಹ ಸಾಂಸ್ಕೃತಿಕ ಸಂಭ್ರಮ ಕಳೆಗಟ್ಟಿತ್ತು. ಮೈಸೂರು ಧಾರ್ಮಿಕ ಪ್ರತಿಷ್ಠಾನ ಮತ್ತು ಮೈಸೂರು ಕಲಾ ಪ್ರತಿಷ್ಠಾನದ ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿರುವ ಮೈಸೂರು ಗಣೇಶ ಉತ್ಸವದ (ಮಾಧವ ಕೃಪಾದಲ್ಲಿ ಗಣೇಶ ಪ್ರತಿಷ್ಠಾಪಿಸಿರುವ ಅಂಗವಾಗಿ) ಪ್ರಯುಕ್ತ ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸುತ್ತಿದ್ದು, ಅಂತೆಯೇ ಬುಧವಾರ ಇಂತಹ ಸಂಗೀತದ ಸಡಗರವು ಪ್ರೇಕ್ಷಕರಿಗೆ ಭರಪೂರ ಮನರಂಜನೆ ನೀಡಿತು.





ಮೈಸೂರಿನ ಮಾಧವ ಕೃಪಾದ ವೇದಿಕೆಯಲ್ಲಿ ಮೈಸೂರು ಗಣೇಶ ಉತ್ಸವದ ಪ್ರಯುಕ್ತ ಬುಧವಾರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಜಾನಪದ ಕಲಾವಿದ ಸುಂದರೇಶ್ ಹಾಗೂ ಅವರ ಪುತ್ರ ವೇದಾಂತ್ ಸುಂದರ್ ಪೂಜಾ ಕುಣಿತ ಪ್ರದರ್ಶಿಸಿದರು. ಮತ್ತೊಂದು (ಎಡಗಡೆ) ಚಿತ್ರದಲ್ಲಿ ಖ್ಯಾತ ಹಿನ್ನೆಲೆ ಗಾಯಕ ಹರಿಚರಣ್ ಮತ್ತು ಮೈಸೂರು ಮೂಲದ ಗಾಯಕಿ ರಕ್ಷಿತಾ ವಿವಿಧ ಸಿನಿಮಾ ಹಾಡುಗಳನ್ನು ಸಾದರಪಡಿಸಿದರು.

ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಅರೇಚಾಕನಹಳ್ಳಿಯ ಸುಂದರೇಶ್ ಮತ್ತು ತಂಡದವರು ಗಂಟೆಗೂ ಹೆಚ್ಚು ಕಾಲ ಪ್ರದರ್ಶಿಸಿದ ಜಾನಪದ ಕಲಾ ಪ್ರಕಾರಗಳು ನೆರೆದವರಲ್ಲಿ ಸಂಭ್ರಮದ ಕಳೆ ತಂದಿತು. ತಮಟೆ ಸದ್ದಿನೊಂದಿಗೆ ಪ್ರದರ್ಶನ ಕಂಡ ವೀರಗಾಸೆ ಕುಣಿತದಲ್ಲಿ ಜಾನಪದ ಕಲಾವಿದರು ತಮ್ಮ ಕಲಾ ಕೌಶಲ್ಯ ಮೆರೆದು ನೋಡುಗರಲ್ಲಿ ಬೆರಗು ಮೂಡಿಸಿದರು. ಹತ್ತಾರು ಅಡಿ ಉದ್ದದ ಪಟದ ಬಿದಿರಿನ ಕೋಲಿನೊಂದಿಗೆ ಯುವತಿಯರು ಪ್ರದರ್ಶಿಸಿದ ಪಟದ ಕುಣಿತ ಕಂಡು ಪ್ರೇಕ್ಷಕರು ಪುಳಕಿತಗೊಂಡರು. ಗೊರವರ ಕುಣಿತದಲ್ಲಿ ಕಲಾವಿದರ ಹಾವಾಭಾವ, ಅವರ ಕೈಯ್ಯಲ್ಲಿದ್ದ ಢಮರುಗಳ ಸದ್ದು ನೆರೆದವರಲ್ಲಿ ಮೋಡಿ ಮಾಡಿತು. ಜಾನಪದ ಕಲಾವಿದ ಸುಂದರೇಶ್ ಪ್ರದರ್ಶಿಸಿದ ಸಾಹಸಮಯ ಪೂಜಾ ಕುಣಿತ ಜಾನಪದದ ರಸದೌತಣ ಉಣಬಡಿಸಿತು.

ಅಲ್ಲದೆ, ತಮಟೆ ನಾದದೊಂದಿಗೆ ಇದೇ ಜಾನಪದ ಕಲಾವಿದರು ಗಣೇಶನ ಸ್ತುತಿಯೊಂದಿಗೆ ಸಾದರಪಡಿಸಿದ ಮಲೆ ಮಹದೇಶ್ವರ ಸ್ವಾಮಿ ಸ್ಮರಣೆಯ ಜಾನಪದ ಗೀತೆಯು ಭಕ್ತಿಭಾವ ಮೂಡಿಸಿತು. 'ಮುಂಗೋಡಡದ ಮಾದೇಶ್ವರಗೆ ಶರಣು ಶರಣಯ್ಯ... ಮಾಯಕರಾ ಮಾದೇಶ್ವರಗೆ ಶರಣು ಶರಣಯ್ಯ...' ಜಾನಪದ ಗೀತೆ ಪ್ರಸ್ತುತಪಡಿಸಿ ಭಕ್ತಿಯ ಪರಕಾಷ್ಠೆ ಮೆರೆದರು.

ಗಮನ ಸೆಳೆದ ಬಾಲ ಕಲಾವಿದ: ಹಿರಿಯ ಜಾನಪದ ಕಲಾವಿದರೊಂದಿಗೆ ಬಾಲ ಕಲಾವಿದ 9 ವರ್ಷದ ವೇದಾಂತ್ ಸುಂದರ್ ಹೆಜ್ಜೆ ಹಾಕಿ ಪ್ರೇಕ್ಷಕರ ಮನಸೂರೆಗೊಂಡನು. ಜಾನಪದ ಕಲಾವಿದ ಸುಂದರೇಶ್ ಅವರ ಪುತ್ರನಾದ ಈತ ವೀರಗಾಸೆ ಕುಣಿತದಲ್ಲಿ ಆ ಕಲೆಯ ವೇಷಭೂಷಣದೊಂದಿಗೆ ಹೆಜ್ಜೆ ಹಾಕಿ ಕತ್ತಿ ಝಳಪಿಸಿ, ನೋಡುಗರ ಅಭಿಮಾನಕ್ಕೆ ಪಾತ್ರನಾದ. ಅಲ್ಲದೆ, ಪೂಜಾ ಕುಣಿತದಲ್ಲಿ ತಂದೆ ಸುಂದರೇಶ್ ಜೊತೆಗೆ ಹಜ್ಜೆ ಹಾಕಿ ಮೆಚ್ಚುಗೆ ಗಳಿಸಿದ. ತಂದೆಯಂತೆಯೇ ಬಿದಿರಿನ ತಟ್ಟಿಯನ್ನು ತಲೆ ಮೇಲೆ ಹೊತ್ತು ಕುಣಿದು ಕುಪ್ಪಳಿಸುವ ಮೂಲಕ ನೆರೆದವರಲ್ಲಿ ಬೆರಗು ಮೂಡಿಸಿದ.

ಸಂಗೀತದ ಕಂಪನ: ಖ್ಯಾತ ಹಿನ್ನೆಲೆ ಗಾಯಕ ಹರಿಚರಣ್ ಸಾದರಪಡಿಸಿ ಗಾಯನವು ಸಂಗೀತದ ಕಂಪನ ಉಂಟು ಮಾಡಿತು. ಇವರ ಜೊತೆಗೆ ಮೈಸೂರು ಮೂಲದ ಗಾಯಕಿ ರಕ್ಷಿತಾ ದನಿಗೂಡಿಸಿ, ಗಾಯನದ ಮಾಧುರ್ಯ ಹೊಮ್ಮಿಸಿದರು. ಮೊದಲಿಗೆ 'ಏಕದಂತಾಯ ವಕ್ರತುಂಡಾಯ ಗೌರಿ ತನಯಾಯ ಧೀಮಹಿ...' ಗೀತೆಯ ಮೂಲಕ ಭಕ್ತಿಭಾವ ಮೂಡಿಸಿದ ಹರಿಚರಣ್, ಬಳಿಕ ವಿವಿಧ ಸಿನಿಮಾ ಗೀತೆಗಳನ್ನು ಸಾದರಪಡಿಸಿ ಪ್ರೇಕ್ಷಕರು ಹುಚ್ಚೆದ್ದು ಕುಣಿಯುವಂತೆ ಮಾಡಿದರು. ಮೈಸೂರು ಧಾರ್ಮಿಕ ಪ್ರತಿಷ್ಠಾನದ ಅಧ್ಯಕ್ಷ ಚರಣ್ ಗೌಡ, ಕಾರ್ಯದರ್ಶಿ ದರ್ಶನ್, ಖಜಾಂಚಿ ರಾಕೇಶ್, ಸದಸ್ಯರಾದ ರುದ್ರಮೂರ್ತಿ, ಚೇತನ್‌ಗೌಡ, ಕಲಾ ಪ್ರತಿಷ್ಠಾನದ ಕಾರ್ಯದರ್ಶಿ ಮಾಧುರ್ಯ ಮತ್ತಿತರರು ಹಾಜರಿದ್ದರು.

ತಮಿಳುನಾಡಿಗೆ ನೀರು ಬಿಡುಗಡೆಗೆ ಆಕ್ರೋಶ

ಮೈಸೂರು–ನಂ.ಗೂಡು ರಸ್ತೆಯಲ್ಲಿ ರೈತರಿಂದ ರಸ್ತೆ ತಡೆ



ನಂಜನಗೂಡು, ಸೆ.20– ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ಖಂಡಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘಟನೆ ವತಿಯಿಂದ ಬುಧವಾರ ನಂಜನಗೂಡಿನಲ್ಲಿ ರಾಷ್ಟ್ರೀಯ ಹೆದ್ದಾರಿ 766ರಲ್ಲಿ ರಸ್ತೆ ತಡೆ ನಡೆಸುವ ಮೂಲಕ ಪ್ರತಿಭಟಿಸಲಾಯಿತು. ಮಧ್ಯಾಹ್ನ 12ರ ಸಮಯದಲ್ಲಿ ಮೈಸೂರು–ನಂಜನಗೂಡು ಮುಖ್ಯ ರಸ್ತೆಯಲ್ಲಿ ಬರುವ ಅಪೊಲೋ ವೃತ್ತದ ಬಳಿ ಸಂಘಟಿತರಾದ ಪ್ರತಿಭಟನಾಕಾರರು ರಸ್ತೆ ಬಂದ್ ಮಾಡಿ ವಾಹನ ಸಂಚಾರಕ್ಕೆ ತಡೆಯೊಡ್ಡುವ ಮೂಲಕ ಪ್ರತಿಭಟಿಸಿ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭ ಕಬ್ಬು ಬೆಳೆಗಾರರ ಸಂಘದ ತಾಲೂಕು ಅಧ್ಯಕ್ಷ ಹಾಡ್ಯ ರವಿ ಮಾತನಾಡಿ, ಆಡಳಿತಾರೂಢ ಕಾಂಗ್ರೆಸ್ ಸರಕಾರ ರಾಜ್ಯದ ರೈತರ ಹಿತ ಕಾಪಾಡುವಲ್ಲಿ ವಿಫಲವಾಗಿದ್ದು, ಅಧಿಕಾರಕ್ಕೆ ಬರುವ ಮುನ್ನ ಮೇಕೆದಾಟು ಯೋಜನೆ ಜಾರಿಗೆ ಪಾದಯಾತ್ರೆ ನಡೆಸಿದ್ದ ಇಂದಿನ ನೀರಾವರಿ ಸಚಿವ ಡಿ.ಕೆ.ಶಿವಕುಮಾರ್ ಅಧಿಕಾರಕ್ಕೆ ಬಂದ ಬಳಿಕ ಯೋಜನೆ ಜಾರಿಗೆ ನಿರ್ಲಕ್ಷ್ಯ ತೋರಿದ್ದಾರೆ. ರಾಜ್ಯದ ರೈತರ ಹಿತ ಕಾಪಾಡಲು ತಕ್ಷಣ ತಮಿಳುನಾಡಿಗೆ ನೀರು ಹರಿಸುವುದನ್ನು ಸ್ಥಗಿತಗೊಳಿಸಬೇಕು ಹಾಗೂ ಅಣೆಕಟ್ಟೆಯಲ್ಲಿ ಉಳಿದಿರುವ ನೀರನ್ನು ಜನ, ಜಾನುವಾರುಗಳಿಗೆ ಮತ್ತು ಬೆಂಗಳೂರು ಹಾಗೂ ಮೈಸೂರು ನಗರವಾಸಿಗಳ ಕುಡಿಯುವ ನೀರಿನ ಬಳಕೆಗೆ ಮೀಸಲಿಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭ ಸ್ಥಳಕ್ಕಾಗಮಿಸಿದ ಪೊಲೀಸರು ಪ್ರತಿಭಟನಾಕಾರರ ಮನವೊಲಿಸಿ ರಸ್ತೆ ತಡೆ ತೆರವುಗೊಳಿಸುವ ಮೂಲಕ ಸುಗಮ ಸಂಚಾರಕ್ಕೆ ನೆರವಾದರು. ಪ್ರತಿಭಟನೆಯಲ್ಲಿ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಉಪಾಧ್ಯಕ್ಷ ಕೆರೆಹುಂಡಿ ರಾಜಣ್ಣ, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಕಮಲಮ್ಮ, ಆಮ್ ಆದ್ಮಿ ಪಕ್ಷದ ತಾಲೂಕು ಅಧ್ಯಕ್ಷ ವೀರೇಶ್ ಕುಮಾರ್, ಹನುಮಯ್ಯ, ಕಬ್ಬು ಬೆಳೆಗಾರರ ಸಂಘದ ಅಂಬಳೆ ಮಂಜುನಾಥ್, ಮಹದೇವಸ್ವಾಮಿ, ಕೆರೆಹುಂಡಿ ಶಿವಣ್ಣ, ಕಸುವಿನಹಳ್ಳಿ ಮಂಜೇಶ್, ದೇವನೂರು ವಿಜೇಂದ್ರ, ನಾಗೇಂದ್ರ ಸ್ವಾಮಿ ಮುಂತಾದವರು ಭಾಗವಹಿಸಿದ್ದರು.

ಹಾಲು ಒಕ್ಕೂಟದ ಆರ್ಥಿಕ ಪರಿಸ್ಥಿತಿ ಸರಿಯಿಲ್ಲದ ಕಾರಣ ಸಂಘದ ರೈತರಿಗೆ ಬೋನಸ್ ನೀಡಲು ವಿಳಂಬ



ತಿ.ನರಸೀಪುರ.ಸೆ.20– ಹಾಲು ಒಕ್ಕೂಟದ ಆರ್ಥಿಕ ಪರಿಸ್ಥಿತಿ ಸರಿಯಿಲ್ಲದ ಕಾರಣ ಸಂಘದ ರೈತ ಸದಸ್ಯರಿಗೆ ನೀಡುವ ಬೋನಸ್ ಹಣ ಸ್ವಲ್ಪ ವಿಳಂಬವಾಗಲಿದ್ದು, ಸಹಕಾರ ನೀಡುವಂತೆ ಜಿಲ್ಲಾ ಹಾಲು ಒಕ್ಕೂಟದ ಮಾರ್ಗ ವಿಸ್ತರಣಾಧಿಕಾರಿ ಆರ್.ಪ್ರಮೋದ್ ಮನವಿ ಮಾಡಿದರು.

ತಾಲೂಕಿನ ವ್ಯಾಸರಾಜಪುರ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ಬುಧವಾರ ಏರ್ಪಡಿಸಲಾಗಿದ್ದ ಸಂಘದ 2022–2023ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಸಂಘವು ಪ್ರಸಕ್ತ ಸಾಲಿನಲ್ಲಿ 2,64,500 ರೂ.ಗಳ ನಿವ್ವಳ ಲಾಭಗಳಿಸಿದ್ದು, ಲಾಭಾಂಶದಲ್ಲಿ ರೈತರಿಗೆ 1,09,067 ರೂ.ಗಳ ಬೋನಸ್ ಹಣ ನೀಡಬಹುದಾಗಿದೆ. ಆದರೆ ಬೋನಸ್ ಹಣ ನೀಡಲು ಸಣ್ಣ ಸಮಸ್ಯೆ ಇದೆ. ಒಕ್ಕೂಟ ಆರೋಗ್ಯಕರವಾಗಿದ್ದಾಗ ಯಾವುದೇ ಸಮಸ್ಯೆ ಇರಲಿಲ್ಲ. ಆದರೆ ಈಗ ಒಕ್ಕೂಟದ ಆರ್ಥಿಕ ಪರಿಸ್ಥಿತಿ ಸರಿಯಿಲ್ಲ. ಸರ್ಕಾರ ಹಾಲಿನ ದರವನ್ನು 3 ರೂ.ಗೆ ಹೆಚ್ಚಳ ಮಾಡಿ 3 ರೂ.ಗಳನ್ನು ರೈತರಿಗೆ ನೀಡಬೇಕೆಂದು ಕಂಡೀಷನ್ ಮಾಡಿದ್ದರಿಂದ ರೈತರಿಗೆ ಹೆಚ್ಚುವರಿ ಹಣ ನೀಡಲಾಗಿದೆ. ಹಾಗಾಗಿ ಒಕ್ಕೂಟಕ್ಕೆ ಹೆಚ್ಚುವರಿ ಹೊರೆ ಬಿದ್ದಂತಾಗಿದೆ.ಹಾಗಾಗಿ ಒಕ್ಕೂಟದಿಂದ ಸಂಘಕ್ಕೆ ನೀಡಬೇಕಾದ ಹಣವನ್ನು 15 ದಿನಗಳ ಕಾಲ ಬಾಕಿ ಉಳಿಸಿಕೊಂಡಿದ್ದೆವು. ಈಗ 1 ತಿಂಗಳು ಆಗಿರುವುದರಿಂದ ಬೋನಸ್ ಹಣ ಸ್ವಲ್ಪ ತಡವಾಗಿ ರೈತರ ಕೈ ಸೇರಲಿದ್ದು ಸಹಕರಿಸುವಂತೆ ಮನವಿ ಮಾಡಿದರು.

ಸಾಲ ಮರುಪಾವತಿಸಿದಾಗ ಮಾತ್ರ ಸಹಕಾರ ಸಂಘದ ಅಭಿವೃದ್ಧಿ ಸಾಧ್ಯ



ಮಲ್ಕುಂಡಿ, ಸೆ.20– ಬ್ಯಾಂಕಿನಿಂದ ಸಾಲ ಪಡೆದ ರೈತರು ಸುಸ್ತಿದಾರನಾಗದೇ ಸಕಾಲಕ್ಕೆ ಸಾಲ ಮರುಪಾವತಿ ಮಾಡಿದಾಗ ಮಾತ್ರ ಸಹಕಾರ ಸಂಘ ಅಭಿವೃದ್ಧಿ ಕಾಣಲು ಸಾಧ್ಯ ಎಂದು ಹಾಡ್ಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೆಚ್.ಎಂ.ಶಂಕರ್ ತಿಳಿಸಿದ್ದಾರೆ.

ಸಮೀಪದ ಹಾಡ್ಯ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2022–23ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ರೈತರು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಕೃಷಿ ಉದ್ದೇಶಗಳಿಗೆ ಸಾಕಷ್ಟು ಸಾಲ ಸೌಲಭ್ಯ ನೀಡುತ್ತಾ ಬಂದಿದೆ. ಆದರೆ ಸಾಲ ಪಡೆದ ರೈತರು ಸಾಲದ ಹಣವನ್ನು ಪಾವತಿ ಮಾಡದ ಹಿನ್ನೆಲೆಯಲ್ಲಿ ಸಹಕಾರ ಸಂಘ ಕೆಲವೊಮ್ಮೆ ಲಾಭ ಗಳಿಸಲು ಸಾಧ್ಯವಾಗುವುದಿಲ್ಲ ಎಂದರು.

ರೈತರು ಸಂಘದಿಂದ ಪಡೆದ ಸಾಲವನ್ನು ಪ್ರಾಮಾಣಿಕವಾಗಿ ಮರುಪಾವತಿ ಮಾಡಿದರೆ ಸಂಘವು ಲಾಭ ಹೊಂದಲು ಸಾಧ್ಯವಾಗುತ್ತದೆ. ಅದೇ ರೀತಿ ರೈತರು ಕೂಡ ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಂ.ಪಿ.ವೆಂಕಟರಾಜಯ್ಯ ವಾರ್ಷಿಕ ವರದಿಯನ್ನು ಮಂಡಿಸಿದರು.

ಸಂಘದ ಉಪಾಧ್ಯಕ್ಷ ಎಂ.ಪಿ.ನೀಲಕಂಠಪ್ಪ, ನಿರ್ದೇಶಕರುಗಳಾದ ಬಸವರಾಜ್, ಶೇಖರಪ್ಪ, ಪುಟ್ಟದಾಸಯ್ಯ, ತಗಡೂರು ನಾಯಕ, ನಾಗಣ್ಣ, ಶಿವಣ್ಣ, ದೊಡ್ಡಸಿದ್ದೇಗೌಡ,ನಾಗಮ್ಮ, ಪದ್ಮ, ಮುದ್ದಣ್ಣ, ರೈತ ಮುಖಂಡ ಶ್ರೀನಿವಾಸ್, ಸೇರಿದಂತೆ ಪ್ರಮುಖರು ಹಾಜರಿದ್ದರು.

ಮರೂರು ಡೇರಿಗೆ 6 ಲಕ್ಷ ರೂ. ನಿವ್ವಳ ಲಾಭ



ಹಿರೀಕ್ಯಾತನಹಳ್ಳಿ, ಸೆ.20– ಮರೂರು ಹಾಲು ಉತ್ಪಾದಕರ ಸಹಕಾರ ಸಂಘವು 2022–23ನೇ ಸಾಲಿನಲ್ಲಿ 6 ಲಕ್ಷ ನಿವ್ವಳ ಲಾಭಗಳಿಸಿದೆ ಎಂದು ಸಂಘದ ಅಧ್ಯಕ್ಷ ಹರೀಶ್ ಕಾವಲ್ ತಿಳಿಸಿದರು.

ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯ ಮರೂರು ಹಾಲು ಉತ್ಪಾದಕರ ಸಹಕಾರ ಸಂಘದ 2022–23ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾತನಾಡಿ, ಈ ಸಾಲಿನಲ್ಲಿ ರೈತರಿಗೆ 3 ಲಕ್ಷ ಬೋನಸ್ ನೀಡಲಾಗುವುದು. ಜೊತೆಗೆ 15 ರೈತರಿಗೆ ರಾಸುಗಳ ಮ್ಯಾಟ್ ಹಾಗೂ ಇಬ್ಬರು ರೈತರಿಗೆ ಚಾಪ್ ಕಟ್ಟರ್ ನೀಡಲಾಗಿದೆ. ಪ್ರಸ್ತುತ ಸಾಲಿನಲ್ಲಿ ಬಿ.ಎಂ.ಸಿ ಕೇಂದ್ರ ಪ್ರಾರಂಭವಾಗಿದ್ದು, ಮುಂದಿನ ವರ್ಷದಲ್ಲಿ ಸಂಘಕ್ಕೆ ಲಾಭ ದ್ವಿಗುಣಗೊಳ್ಳಲಿದೆ ಎಂದರು.

ಮೈಸೂರು ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕಿ ಶಿವಗಾಮಿ, ವಿಸ್ತರಣಾಧಿಕಾರಿ ವಸಂತ್ ಕುಮಾರ್, ಸಂಘದ ನಿರ್ದೇಶಕರುಗಳಾದ ಅಂಬಿಕಾ, ಸದಾಶಿವ, ಸನಾವುಲ್ಲಾ, ಶಫಿವುಲ್ಲಾ, ನಂಜುಂಡನಾಯಕ, ವೆಂಕಟೇಶ್, ಶಿವರಾಜ್, ಮಹದೇವ್, ಚಿಕ್ಕಣ್ಣನಾಯಕ, ಸಂಘದ ಮುಖ್ಯ ಕಾರ್ಯನಿರ್ವಾಹಕ ವಸಂತ್ ಕುಮಾರ್ ಹಾಲು ಪರೀಕ್ಷಕ ಮೋಟನಾಯಕ ಸಹಾಯಕ ಪ್ರದೀಪ್ ಹಾಗೂ ಸಂಘದ ಸರ್ವ ಸದಸ್ಯರು ಹಾಜರಿದ್ದರು.

ಹೆಮ್ಮಿಗೆ ಡೈರಿಗೆ 6 ಲಕ್ಷ ರೂ. ನಿವ್ವಳ ಲಾಭ



ಪಿರಿಯಾಪಟ್ಟಣ, ಸೆ.20– ತಾಲೂಕಿನ ಹೆಮ್ಮಿಗೆ ಹಾಲು ಉತ್ಪಾದಕರ ಸಹಕಾರ ಸಂಘವು 22–23ನೇ ಸಾಲಿನಲ್ಲಿ 6 ಲಕ್ಷ ರೂ.ಗಳ ನಿವ್ವಳ ಲಾಭ ಗಳಿಸಿದೆ ಎಂದು ಮೈಮುಲ್ ವಿಸ್ತರಣಾಧಿಕಾರಿ ನಿಶ್ಚಿತ್ ತಿಳಿಸಿದರು.

ಸಂಘದ ಆವರಣದಲ್ಲಿ ನಡೆದ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಹೈನುಗಾರಿಕೆಯು ಇಂದು ವ್ಯವಸಾಯಕ್ಕಿಂತ ಹೆಚ್ಚಿನ ಲಾಭ ತರುವ ಉದ್ಯಮವಾಗಿ ಪರಿವರ್ತನೆಯಾಗುತ್ತಿದೆ ಎಂದರು.

ಸಭೆಯಲ್ಲಿ ಮತ್ತೊಬ್ಬ ವಿಸ್ತರಣಾಧಿಕಾರಿ ಸಚಿನ್, ಸಹಕಾರ ಸಂಘದ ಅಧ್ಯಕ್ಷ ಎಚ್.ಸಿ. ರಮೇಶ್, ಉಪಾಧ್ಯಕ್ಷ ಎಚ್.ಆರ್.ರವಿ, ನಿರ್ದೇಶಕರಾದ ಸವಿತಮ್ಮ, ಚೆನ್ನಮ್ಮ, ತಮ್ಮೇಗೌಡ, ಎಚ್.ಎಸ್. ರವಿಕುಮಾರ್, ವೆಂಕಟಮ್ಮ, ರಾಜೇಗೌಡ, ರತ್ನಮ್ಮ ಹಾಜರಿದ್ದರು.

ಹೆಚ್.ಡಿ.ಕೋಟೆಯಲ್ಲಿ ಗಾರ್ಮೆಂಟ್ ಆರಂಭಿಸುವೆ

ಟೈಲರಿಂಗ್ ಕಾರ್ಮಿಕರ ಅಭಿವೃದ್ಧಿ ಟ್ರಸ್ಟ್ ಕಾರ್ಯಕ್ರಮದಲ್ಲಿ ಶಾಸಕರ ಭರವಸೆ



ಹೆಚ್.ಡಿ.ಕೋಟೆ, ಸೆ.20– ತಾಲೂಕಿನ ಮಹಿಳೆಯರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಗಾರ್ಮೆಂಟ್ಸ್ ನಿರ್ಮಾಣ ಮಾಡುವ ಪ್ರಯತ್ನ ಮಾಡುತ್ತೇನೆ ಎಂದು ಶಾಸಕ ಅನಿಲ್ ಚಿಕ್ಕಮಾದು ಭರವಸೆ ನೀಡಿದ್ದಾರೆ.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ತಾಲೂಕು ಟೈಲರಿಂಗ್ ಕಾರ್ಮಿಕರ ಅಭಿವೃದ್ಧಿ ಟ್ರಸ್ಟ್ ವತಿಯಿಂದ ಆಯೋಜಿಸಲಾಗಿದ್ದ ಶಾಸಕರಿಗೆ ಅಭಿನಂದನೆ ಹಾಗೂ 60 ವರ್ಷ ತುಂಬಿದ ವೃತ್ತಿದಾರರಿಗೆ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತಾಲೂಕಿನಲ್ಲಿ ಗಾರ್ಮೆಂಟ್ಸ್ ಕಾರ್ಖಾನೆ ತೆರೆಯಲು ಯೋಜನೆ ರೂಪಿಸಿ ತಾಲೂಕಿನಲ್ಲಿರುವ ನಿರುದ್ಯೋಗವನ್ನು ತೊಡೆದು ಹಾಕಲಾಗುವುದು. ಮುಂದಿನ ತಿಂಗಳು ನಡೆಯಲಿರುವ ಬಂಡವಾಳಶಾಹಿಗಳ ಸಭೆಯಲ್ಲಿ ತಾಲೂಕಿನಲ್ಲಿ ಗಾರ್ಮೆಂಟ್ಸ್ ಮಾಡುವ ವಿಚಾರ ಕುರಿತು ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಮುಂದಿನ ದಿನಗಳಲ್ಲಿ ತಾಲೂಕಿಗೆ ಸುಮಾರು 3 ಸಾವಿರಕ್ಕೂ ಹೆಚ್ಚು ಕುಟುಂಬಗಳಿಗೆ ಉದ್ಯೋಗ ಕಲ್ಪಿಸಿಕೊಡುವ ಕೆಲಸ ಮಾಡುವೆ ಎಂದು ತಿಳಿಸಿದರು.

ತಾಲೂಕಿನಲ್ಲಿ ಸಂಘಕ್ಕೆ ನಿವೇಶನ ಸದ್ಯದಲ್ಲೇ ಗುರುತಿಸಲಾಗುವುದು. ಸಮುದಾಯ ಭವನ ನಿರ್ಮಿಸಲು ನನ್ನ ಅನುದಾನದಲ್ಲಿ ಹಣ ನೀಡಲಾಗುವುದು ಎಂದರು.

ಟೈಲರಿಂಗ್ ಕಾರ್ಮಿಕರ ಟ್ರಸ್ಟ್‌ನ ತಾಲೂಕು ಅಧ್ಯಕ್ಷ ರಂಗಸ್ವಾಮಿ ಬೀಚನಹಳ್ಳಿ ಮಾತನಾಡಿ, ಸಂಘವನ್ನು ಸಂಘಟಿಸಲು ನಿವೇಶನದ ಕೊರತೆ ಇರುವುದರಿಂದ ಶಾಸಕರು ನಿವೇಶನವನ್ನು ನೀಡಬೇಕು, ಈ ನಿವೇಶನದಲ್ಲಿ ಮಹಿಳೆಯರಿಗೆ ತರಬೇತಿ ನೀಡಲು ಸಮುದಾಯ ಭವನ ನಿರ್ಮಿಸಿಕೊಡಬೇಕು ಎಂದರು.

ಇದೇ ಸಂದರ್ಭದಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅವರನ್ನು ಅಭಿನಂದಿಸಿ 60 ವರ್ಷ ತುಂಬಿದ ಟೈಲರ್ ವೃತ್ತಿದಾರರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಸಣ್ಣರಾಮಪ್ಪ, ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್, ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಐಡಿಯಾ ವೆಂಕಟೇಶ್, ಮುಖಂಡರುಗಳಾದ ದಿನೇಶ್, ರಾಜೇಗೌಡ, ನಾಗರಾಜು, ಟೈಲರಿಂಗ್ ಕಾರ್ಮಿಕ ಅಭಿವೃದ್ಧಿ ಟ್ರಸ್ಟ್‌ನ ಗೌರವಾಧ್ಯಕ್ಷ ಟಿ.ಸಿ.ಜಗದೀಶ್, ಅಧ್ಯಕ್ಷ ರಂಗಸ್ವಾಮಿ ಬೀಚನಹಳ್ಳಿ, ಉಪಾಧ್ಯಕ್ಷ ಪ್ರವೀಣ್, ಕಾರ್ಯದರ್ಶಿ ಸದಾಶಿವ ಮೂರ್ತಿ, ಖಜಾಂಚಿ ಜೆ.ಎಂ.ಪುಟ್ಟಮಾದು, ಸಹ ಕಾರ್ಯದರ್ಶಿ ಕೋಟೆಗೌಡ, ನಿರ್ದೇಶಕರುಗಳಾದ ಸೈಯದ್ ಇನಾಯತ್, ಜಮೀರ್ ಶರೀಫ್, ಸ್ವಾಮಿರಾವ್, ಚನ್ನನಾಯಕ, ಕೋಟೆ ಹಾಗೂ ಸರಗೂರು ತಾಲೂಕಿನ ಎಲ್ಲಾ ಟೈಲರ್‌ಗಳು, ಕುಟುಂಬ ವರ್ಗದವರು ಹಾಜರಿದ್ದರು.

ಪಿರಿಯಾಪಟ್ಟಣ ಬಳಿ ಚಿರತೆ ದಾಳಿಗೆ 3 ಕರುಗಳು ಬಲಿ

ಪಿರಿಯಾಪಟ್ಟಣ,ಸೆ.20– ತಾಲೂಕಿನಲ್ಲಿ ಚಿರತೆ ಕಾಟ ಮುಂದುವರೆದಿದ್ದು, ಜಾನುವಾರುಗಳ ಮೇಲೆ ದಾಳಿ ನಡೆಸಿ ಬಲಿ ಪಡೆಯುತ್ತಿದ್ದು, ಗ್ರಾಮಸ್ಥರು ಆತಂಕಗೊಂಡಿದ್ದಾರೆ.

ತಾಲೂಕಿನ ಹಲಗನಹಳ್ಳಿ ಗ್ರಾಮದ ವಾಹಿದ ಪಾಷಾ ಎಂಬುವರ ಹಸು ಮತ್ತು ಎಮ್ಮೆ ಕರುಗಳು ಬಲಿಯಾಗಿವೆ. ವಾಹಿದ ಪಾಷಾ ತಮ್ಮ ಜಮೀನಿನ ಬಳಿ ಕೊಟ್ಟಿಗೆ ನಿರ್ಮಿಸಿ ಒಂದು ಎಮ್ಮೆ, ಕರು, ಎರಡು ಹಸುವಿನ ಕರುಗಳನ್ನು ಕೊಟ್ಟಿಗೆಯಲ್ಲಿ ಕಟ್ಟಿ ಸಾಕುತ್ತಿದ್ದರು. ರಾತ್ರಿ ಎರಡು ಚಿರತೆಗಳು ದಾಳಿ ಮಾಡಿ ಮೂರು ಕರುಗಳ ಕೊಂದು ತಿಂದು ಜಾಗ ಖಾಲಿ ಮಾಡಿವೆ.

ಪಿರಿಯಾಪಟ್ಟಣ ಅರಣ್ಯ ಹಿರಿಯ ಅಧಿಕಾರಿಗಳು ಹಾಗೂ ಬೆಟ್ಟದಪುರ ವ್ಯಾಪ್ತಿಯ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ ನಂತರ ಮರಣೋತ್ತರ ಪರೀಕ್ಷೆ ನಡೆಸಿದರು. ಹಲವಾರು ದಿನಗಳಿಂದ ಚಿರತೆ ಕಾಟ ಹೆಚ್ಚಾಗಿದ್ದು, ಅವುಗಳನ್ನು ಹಿಡಿಯುವಂತೆ ರೈತರು ಆಗ್ರಹಿಸಿದ್ದಾರೆ.

ಹುಣಸೂರು ಕಸಬಾ ಕೃಷಿ ಪತ್ತಿನ ಸಹಕಾರ ಸಂಘಕ್ಕೆ 12 ಲಕ್ಷ ಲಾಭ



ಹುಣಸೂರು.ಸೆ.20– ಹುಣಸೂರು ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಸಭೆ ಸಂಘದ ಅಧ್ಯಕ್ಷ ಎಂ.ಕೆ.ಮಾಸೇಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು.

ನಂತರ ಮಾಸೇಗೌಡ 2022–23ನೇ ಸಾಲಿನಲ್ಲಿ ಸಂಘವು 12,67,000 ರೂ. ಲಾಭಗಳಿಸಿದ್ದು, 2023–24ನೇ ಸಾಲಿನಲ್ಲಿ 15 ರಿಂದ 20 ಲಕ್ಷ ಲಾಭಗಳಿಸುವ ಗುರಿ ಹೊಂದಿರುವುದಾಗಿ ತಿಳಿಸಿದರು. ಸಹಕಾರ ಸಂಘ ಅಭಿವೃದ್ಧಿ ಹೊಂದಬೇಕಾದರೆ ಸಾಲ ಪಡೆಯುವುದರ ಜೊತೆಗೆ ಮರುಪಾವತಿಯು ಮುಖ್ಯ ಎಂದು ತಿಳಿಸಿದರು.

ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂ.ಎ.ದೇವಪ್ಪ ಅವರು ಸಭೆಯಲ್ಲಿ 2022–23ನೇ ಸಾಲಿನ ಆಡಿಟ್ ವರದಿ, ಜಮಾಖರ್ಚು ಲೆಕ್ಕಪತ್ರವನ್ನು ಓದಿದರು. ಹಿರಿಯ ಸದಸ್ಯ ನಾಗರಾಜಪ್ಪ ಮಾತನಾಡಿ, ಸದಸ್ಯರಿಗೆ ಮರಣ ನಿಧಿ ಸ್ಥಾಪಿಸಬೇಕೆಂದು ಮತ್ತು ಬೀಜಿಗನಹಳ್ಳಿ, ಮೂಕನಹಳ್ಳಿ ಗ್ರಾಮಗಳಲ್ಲಿ ಸಂಘದ ವತಿಯಿಂದ ಸ್ವಂತ ವಾಣಿಜ್ಯ ಮಳಿಗೆಗಳನ್ನು ಕಟ್ಟಿಸಿದ್ದಲ್ಲಿ ಸಂಘಕ್ಕೆ ಹೆಚ್ಚಿನ ಲಾಭವಾಗುವುದರ ಜೊತೆಗೆ ಉದ್ಯೋಗವಕಾಶ ಸಿಗುವುದಾಗಿ ತಿಳಿಸಿದರು.

ಸದಸ್ಯ ಬಾಲಗಂಗಾಧರ್, ಶಿವಲಿಂಗು ಮಾತನಾಡಿದರು. ಉಪಾಧ್ಯಕ್ಷ ರವಿಕುಮಾರ್, ಡಿಸಿಸಿ ಬ್ಯಾಂಕ್ ನಿರ್ದೇಶಕ ನಾಗಪ್ರಸಾದ್ ಸಂಘದ ನಿರ್ದೇಶಕರುಗಳಾದ ಬಿ.ಎಲ್. ನಾಗರಾಜು, ರಮೇಶ್, ರಾಮಕೃಷ್ಣ ಈರೇಗೌಡ, ಶ್ರೀಮತಿ ಗೌರಮ್ಮ, ರುದ್ರಭೋವಿ, ಗೌರಮ್ಮ ಹಾಗೂ ಸಿಬ್ಬಂದಿವರ್ಗದವರು, ಸದಸ್ಯರುಗಳು ಹಾಜರಿದ್ದರು. ಸೋನು ಮತ್ತು ತಂಡದವರು ನಾಡಗೀತೆ ಭಕ್ತಿಗೀತೆ ಹಾಡಿದರು.

ಗ್ರಾಮೀಣ ಸೊಗಡಿನ ಸಂಸ್ಕೃತಿ ಬಿಂಬಿಸುವ ಎತ್ತಿನಗಾಡಿ ಓಟ ಸ್ಪರ್ಧೆ



ತಿ.ನರಸೀಪುರ.ಸೆ.20– ಎತ್ತಿನ ಗಾಡಿ ಓಟ ಗ್ರಾಮೀಣ ಸೊಗಡಿನ ಸಂಸ್ಕೃತಿಯನ್ನು ಬಿಂಬಿಸುತ್ತದೆ ಎಂದು ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ತಿಳಿಸಿದ್ದಾರೆ.

ಕಾಂಗ್ರೆಸ್ ಮುಖಂಡ ಹಾಗೂ ಕೆಡಿಪಿ ಸದಸ್ಯ ಸುನೀಲ್ ಬೋಸ್ ಹುಟ್ಟುಹಬ್ಬದ ಅಂಗವಾಗಿ ತಾಲೂಕಿನ ಯಡಹಳ್ಳಿ ಗ್ರಾಮದಲ್ಲಿ ಯಡಹಳ್ಳಿ ಸಿದ್ದೇಶ್ವರ ಗೆಳೆಯರ ಬಳಗ ಹಾಗೂ ದಾಸೇಗೌಡನಕೊಪ್ಪಲು ಬಾಯ್ಸ್ ವತಿಯಿಂದ ಏರ್ಪಡಿಸಲಾಗಿದ್ದ ಪ್ರಥಮ ವರ್ಷದ ರಾಜ್ಯ ಮಟ್ಟದ ಜೋಡಿ ಹಸುಗಳ ಗಾಡಿ ಓಟದ ಸ್ಪರ್ಧೆಗೆ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು. ತಾತ, ಮುತ್ತಾತರ ಕಾಲದಿಂದ ಸಾಕುತ್ತಿರುವ ಉತ್ತಮ ರಾಸುಗಳನ್ನು ರೈತರು ಪ್ರೀತಿಯಿಂದ ಸಾಕುತ್ತಿದ್ದಾರೆ. ಅವರಿಗೆ ಗ್ರಾಮೀಣ ಕೂಟದಂತಹ ಸ್ಪರ್ಧೆಗಳು ಪ್ರೇರಣೆ ನೀಡುತ್ತದೆ. ಸ್ಪರ್ಧೆಗಳಲ್ಲಿ ಭಾಗವಹಿಸುವ ಸ್ಪರ್ಧಾಳುಗಳು ಸೋಲು, ಗೆಲುವನ್ನು ಸಮನಾಗಿ ಸ್ವೀಕರಿಸಬೇಕು ಎಂದರು.

ಸ್ಪರ್ಧೆಯಲ್ಲಿ ಭಾಗವಹಿಸುವವರು ಯಾವುದೇ ಗಲಾಟೆಗೆ ಅವಕಾಶ ಮಾಡಿಕೊಡದೇ ತೀರ್ಪುಗಾರರು ನೀಡುವ ತೀರ್ಪಿಗೆ ಬದ್ಧರಾಗಿ ಕ್ರೀಡೆಯನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುವಂತೆ ಸಲಹೆ ನೀಡಿದರು. ಕಾರ್ಯಕ್ರಮದ ಆಯೋಜಕ ಕಾಂಗ್ರೆಸ್ ಯುವ ಮುಖಂಡ ಹೇಮಂತ್ ಪಟೇಲ್ ಸೇರಿದಂತೆ ಯಡಹಳ್ಳಿ ಹಾಗೂ ದಾಸೇಗೌಡನಕೊಪ್ಪಲು ಗ್ರಾಮದ ಯಜಮಾನರು, ಯುವಕರು, ಗ್ರಾಮಸ್ಥರು ಭಾಗವಹಿಸಿದ್ದರು.

ನಾಗರಿಕ ಸೌಲಭ್ಯಕ್ಕೆ ಆಗ್ರಹಿಸಿ ದಸಂಸ ಪ್ರತಿಭಟನೆ

ನಂಜನಗೂಡು, ಸೆ.20– ಭೂಮಿ, ವಸತಿ, ನಾಗರಿಕ ಸೌಲಭ್ಯಗಳಿಗಾಗಿ ಹಾಗೂ ದಲಿತರ ಮೇಲಿನ ದೌರ್ಜನ್ಯವನ್ನು ಖಂಡಿಸಿ, ದಲಿತ ಸಂಘರ್ಷ ಸಮಿತಿ (ಸಂಯೋಜಕ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಗರದ ತಾಲೂಕು ಕಚೇರಿಯ ಮುಂಭಾಗ ಜಮಾವಣೆಗೊಂಡ ಕಾರ್ಯಕರ್ತರು ಮತ್ತು ಪದಾಧಿಕಾರಿಗಳು ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ದಸಂಸ ಜಿಲ್ಲಾ ಸಂಚಾಲಕ ಕಾರ್ಯ ಬಸವಣ್ಣ ಮಾತನಾಡಿ, ದಲಿತರಿಗಾಗಿ ರೂಪಿಸಿದ ಅನೇಕ ಯೋಜನೆಗಳು ಜನಸಾಮಾನ್ಯರನ್ನು ತಲುಪದೇ ವಂಚನೆಗೆ ಒಳಗಾಗುತ್ತಿದ್ದಾರೆ ವ್ಯವಸಾಯ ಮಾಡಿ ದುಡಿದು



ತಿನ್ನುತ್ತೇನೆ ಎನ್ನುವ ಶೋಷಿತರಿಗೆ ಭೂಮಿ, ವಾಸಿಸಲು ಮನೆ ಇಲ್ಲದಂತಾಗಿದೆ, ನಿವೇಶನ ರೈತರಿಗೆ ನಿವೇಶನ ಸಿಗುತ್ತಿಲ್ಲ ಅಲ್ಲದೆ ಸ್ಮಶಾನದ ವ್ಯವಸ್ಥೆಯು ಕೂಡ ಮರೀಚಿಕೆಯಾಗಿದೆ. ತಾಲೂಕು ಆಡಳಿತ ಕನಿಷ್ಠ ಮೂಲಸೌಕರ್ಯಗಳನ್ನು ಒದಗಿಸಲು ವಿಫಲವಾಗಿದೆ ಎಂದು ಆರೋಪಿಸಿದರು. ಪ್ರತಿಭಟನೆಯಲ್ಲಿ ಮಲ್ಲಹಳ್ಳಿ ನಾರಾಯಣ, ಕುಮಾರ್, ಸೋಮಣ್ಣ, ಕೃಷ್ಣ, ಚಿಕ್ಕಣ್ಣ, ರವಿ, ಸಿದ್ದರಾಜು, ಜ್ಯೋತಿಪ್ರಕಾಶ್, ರಾಜಶೇಖರ, ಪುಟ್ಟಸ್ವಾಮಿ, ಕೃಷ್ಣಮೂರ್ತಿ, ಮಹದೇವಸ್ವಾಮಿ ಸೇರಿದಂತೆ ದಸಂಸ ಪದಾಧಿಕಾರಿಗಳು ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಮಾರ್ಕ್ ಆಂಟೋಣಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ತತ್ಸಮ ತದ್ಭವ(ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಜವಾನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಸಪ್ತಸಾಗರದಾಚೆ ಎಲ್ಲೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಪ್ತಸಾಗರದಾಚೆ ಎಲ್ಲೋ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಮಾರ್ಕ್ ಆಂಟೋಣಿ (ತ)	4 ಪ್ರದರ್ಶನಗಳು
ಸಂಗಂ	
ಜವಾನ್ (ಹಿ)	4 ಪ್ರದರ್ಶನಗಳು
ಲಿಡೋ	
ಖುಷಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಜವಾನ್ (ಹಿ)	4 ಪ್ರದರ್ಶನಗಳು
ಪ್ರಭಾ	
ನಮೋ ಭೂತಾತ್ಮ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಸಪ್ತಸಾಗರದಾಚೆ ಎಲ್ಲೋ (ಕ): ಬೆ.10.15ಕ್ಕೆ, ಮ.1.05ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ, ಜವಾನ್ (ಹಿಂ): ಮ.3.55ಕ್ಕೆ.
ಸ್ಕ್ರೀನ್ 2	ತತ್ಸಮ ತದ್ಭವ (ಕ): ಬೆ.11ಕ್ಕೆ, ರಾ.7.10ಕ್ಕೆ, ರಾ.9.45ಕ್ಕೆ, 13 ಪಾರ್ಟ್ 1 (ಕ): ಮ.1.45ಕ್ಕೆ, ಮಿಸ್ ಶೆಟ್ಟಿ ಮಿಸ್ಟರ್ ಪೊಲಿಶೆಟ್ಟಿ (ತೆ): ಸಂ.4.15ಕ್ಕೆ.
ಸ್ಕ್ರೀನ್ 3	ಪರಿಮಳಾ ಡಿಸೋಜಾ (ಕ): ಬೆ.11ಕ್ಕೆ, ದಿ ನನ್ 2 (ಇಂ): ಮ.1.45ಕ್ಕೆ, ಮಾರ್ಕ್ ಆಂಟೋಣಿ (ತ): ಸಂ.4.15ಕ್ಕೆ, ಎ ಹಾಂಟಿಂಗ್ ಇನ್ ವೆನಿಸ್ (ಇಂ): ರಾ.7.15ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.9.45ಕ್ಕೆ, ಮ.1ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ತತ್ಸಮ ತದ್ಭವ (ಕ): ಬೆ.11.10ಕ್ಕೆ, ಸಂ.4.45ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ರಾ.7.20ಕ್ಕೆ, ಮಾರ್ಕ್ ಆಂಟೋಣಿ (ತ): ರಾ.10.20ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಬೆ.11.15ಕ್ಕೆ, ಮ.2.50ಕ್ಕೆ, ಸಂ.6.25ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ಜವಾನ್ (ಹಿಂ): ಬೆ.10.15ಕ್ಕೆ, ಮ.1.50ಕ್ಕೆ, ಸಂ.5.25ಕ್ಕೆ, ರಾ.9ಕ್ಕೆ.
ಸ್ಕ್ರೀನ್ 4	ಪರಿಮಳಾ ಡಿಸೋಜಾ (ಕ): ಬೆ.10.30ಕ್ಕೆ, 13 (ಕ): ಮ.1.20ಕ್ಕೆ, ಮಾರ್ಕ್ ಆಂಟೋಣಿ (ತ): ಸಂ.4.20ಕ್ಕೆ, ಟೇಲ್ ಆಫ್ ಮಹಾನಗರ (ಕ): ರಾ.7.30ಕ್ಕೆ, ಕಾಸರ್‌ಗೋಲ್ಡ್ (ಮ): ರಾ.10.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಈ ಪಟ್ಟಣಕ್ಕೆ ಏನಾಗಿದೆ (ಕ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.15ಕ್ಕೆ, ಶೀಲಾ (ಕ): ಸಂ.4.15ಕ್ಕೆ, ಡಿಡಿ ರಿಟರ್ನ್ಸ್ (ತ): ಸಂ.6.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕೌಸಲ್ಯ ಸುಪ್ರಜಾ ರಾಮ (ಕ): ಬೆ.1.15ಕ್ಕೆ, ರಾ.7ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) ಸಂ.4.15ಕ್ಕೆ.
ಸ್ಕ್ರೀನ್ 3	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10.30ಕ್ಕೆ, ಸಂ.4ಕ್ಕೆ, ಮೆಗ್ 2 ದಿ ಟ್ರೆಂಚ್ (3ಡಿ) (ಇಂ): ಮ.1.20ಕ್ಕೆ, ಸಂ.6.55ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	ಮೆಗ್ 2 ದಿ ಟ್ರೆಂಚ್ (3ಡಿ)(ಇಂ): ಬೆ.10.45ಕ್ಕೆ, ನಮೋ ಭೂತಾತ್ಮ (ಕ): ಮ.1.10ಕ್ಕೆ, ಮ.3.50ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಸಂ.6.30ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ರೇಸುಗಳು

5ನೇ ದಿನ, ಗುರುವಾರ 21-9-2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಎಕ್ಲಿಪ್ಸ್ ಪ್ಲೇಟ್ ಡಿ2–1200 ಮೀ. ರೇಟೆಡ್ 00 ರಿಂದ 25. (ಮೈಸೂರ್ ಬೇಸ್ಡ್ ಹಾರ್ಸ್). ಮ.2.00ಕ್ಕೆ
1. ಮಿಸ್ಟರ್ ಮರ್ಲಿನ್ 2. ಫಿಫ್ಟಿ ಗ್ರಾಂಡ್ 3. ಕಂಟ್ರೀಸ್ ಟ್ಯಾಲೆಂಟ್

II. ಎಕ್ಲಿಪ್ಸ್ ಪ್ಲೇಟ್ ಡಿ1–1200 ಮೀ. ರೇಟೆಡ್ 00 ರಿಂದ 25. (ಮೈಸೂರ್ ಬೇಸ್ಡ್ ಹಾರ್ಸ್). ಮ.2.30ಕ್ಕೆ
1 ಸ್ಪಾರ್ಕ್‌ಲಿಂಗ್ ನೈಟ್ 2. ಮಿರಾಕಿ 3. ಸಿಟಿ ಆಫ್ ಗ್ರಾವಿಟೀಸ್

III. ಹೆಚ್.ಹೆಚ್. ಶ್ರೀ ಚಾಮರಾಜ ಒಡೆಯರ್ ಮೆಮೋರಿಯಲ್ ಟ್ರೋಫಿ–1200 ಮೀ. 3 ವರ್ಷ (ಟರ್ಮ್ಸ್). ಮ.3.00ಕ್ಕೆ
1 ಆರ್ಟ್ ಗ್ಯಾಲಕಿ 2. ಕ್ರಾಸ್ ವಾಟರ್ 3. ಸ್ಟಾರ್‌ಕಾನ್‌ಸ್ಟೆಟ್

IV. ಎಂ.ಬಿ.ಅಪ್ಪಯ್ಯ ಮೆಮೋರಿಯಲ್ ಟ್ರೋಫಿ–1600 ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1. ಆರ್ಮ್‌ಸ್ಟ್ರಾಂಗ್ 2. ಈರಿದಾನಿ 3. ತರೇಕ್

V. ಬಿ.ಎ.ನಾಣಯ್ಯ ಮೆಮೋರಿಯಲ್ ಟ್ರೋಫಿ–1200 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. (ಮೈಸೂರ್ ಬೇಸ್ಡ್ ಹಾರ್ಸ್). ಸಂ.4.00ಕ್ಕೆ
1. ಪರ್ಫೆಕ್ಟ್ ಜೆಸ್ಟಿಸ್ 2. ಟ್ರಂಪ್ ಸ್ಟಾರ್ 3. ಇಂಡಿಯನ್ ಪೆಟ್ರಿಯಟ್

VI. ಕಾಸರಗೋಡ್ ಪ್ಲೇಟ್–1800 ಮೀ. ರೇಟೆಡ್ 20 ರಿಂದ 45. ಸಂ.4.30ಕ್ಕೆ
1 ಸಾಯಿಗಾನ್ 2 ಫರಾಜೋನ್ 3. ಏರ್‌ಕ್ರಾಫ್ಟ್

VII. ಫೇರ್‌ವುಡ್ ಪ್ಲೇಟ್–1400 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಅಕಸ್ಟರ್ 2. ಗೋಲ್ಡನ್ ಟೈಮ್ 3. ತೆನಾಲಿ

ದಿನದ ಅತ್ಯುತ್ತಮ	ಆರ್ಮ್‌ಸ್ಟ್ರಾಂಗ್
ಡಬ್ಬಲ್	ಸ್ಪಾರ್ಕ್‌ಲಿಂಗ್ ನೈಟ್, ಪರ್ಫೆಕ್ಟ್ ಜೆಸ್ಟಿಸ್
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಜೆಸಿ


ಸ್ವಚ್ಛ ಭಾರತದ ರೂವಾರಿಗಳು
ಹಸಿರು ಮೈಸೂರಿನ ಹರಿಕಾರರು ಹಾಗೂ
ಸಮಾಜ ಸೇವಕರು ಸ್ನೇಹ ಜೀವಿಯಾದ
ಶ್ರೀ ಹೆಚ್.ವಿ. ರಾಜೀವ್
ರವರಿಗೆ
ಅಧ್ಯಕ್ಷರು ಜಿಲ್ಲಾ ಸಹಕಾರಿ ಯೂನಿಯನ್ ಹಾಗೂ
ಮಾಜಿ ಅಧ್ಯಕ್ಷರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ
ಮೈಸೂರು
ಹುಟ್ಟು ಹಬ್ಬದ
ಶುಭಾಶಯಗಳು
VISMAYA ADVERTISERS
ಕೆ.ಎಸ್. ಕರಿಗೌಡ
ಉದ್ಯಮಿಗಳು ಹಾಗೂ ಪಂಚಾಯತ್ ಸದಸ್ಯರು
ಶ್ರೀ ಲಕ್ಷ್ಮೀ ವೆಂಕಟೇಶ್ವರ
ರೆಡಿ ಮಿಕ್ಸ್ ಕಾಂಕ್ರೀಟ್
ಜೆ. ಜಯಂತ್
ಮಾಜಿ ಸದಸ್ಯರು
ಭಾರತ ಆಹಾರ ನಿಗಮ
ಭಾರತ ಸರ್ಕಾರ